ಸಭೆಯಲ್ಲಿ ಯಾರೋ ಒಂದು ಬೇಜವಾಬ್ದಾರಿ ಮಾತನ್ನು ಆಡಿದ್ದಾರೆ. ಅದನ್ನು ಕೇಳಿ ಆರ್ಥಿಕ ಮಂತ್ರಿಗಳು ನಂಬಿ ಬಹುಶಃ ಅದು ಸರಿಯಾಗಿರಬಹುದು ಎಂದು ತಿಳಿದುಕೊಂಡಿದ್ದಾರೋ ಏನೋ. ನಮ್ಮ ಜಿಲ್ಲೆಯಲ್ಲಿ ಮೈನರ್ ಇರಿಗೇಷನ್ ಸಂಬಂಧ ಪಂಪ್‌ಸೆಟ್‌ಗಳನ್ನು ಸರ್ಕಾರದವರು ಕೊಡುತ್ತಾರೆ ಎಂದು ಹೇಳಿದರು. ಸರ್ಕಾರ ಪಂಪ್‌ಸೆಟ್ ಕೊಡುವುದು ಎಂದರೆ ಆಗಲೇ ಹೇಳಿದಂತೆ ವಿಳಂಬವಾಗುತ್ತದೆ. ಆ ಸಂಬಂಧ ನಮ್ಮಲ್ಲಿ ಕೆಲವರು, ನಾನು ಸಹ ಸದಸ್ಯ, ಡೈರೆಕ್ಟರು ಅಲ್ಲ, 10-20 ರೂಪಾಯಿ ಕೊಟ್ಟು ಷೇರ್ ಹೋಲ್ಡರ್ ಆಗಿದ್ದೇನೆ; ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಸೊಸೈಟಿ ಸ್ಥಾಪನೆ ಮಾಡಿ ಕೆಲವು ಪಂಪ್ ಸೆಟ್ಟುಗಳನ್ನು ಬೇರೆಯವರ ಕಡೆಯಿಂದ ತಂದು ರೈತರಿಗೆ ಒದಗಿಸಿ ಸಹಾಯವಾಗುವಂಥ ಕೆಲಸ ಮಾಡುತ್ತಾ ಇರುವಾಗ ಅದರಲ್ಲೂ ಸಹ ಕಾಂಪಿಟೀಷನ್ ಶುರು ವಾಯಿತು. ಕೆಲವರು ಅದಕ್ಕೆ ಎದುರು ಸಹಕಾರ ಸಂಘ ಕಟ್ಟಬೇಕೆಂದು ಪ್ರಯತ್ನ ಮಾಡಿದರು. ನಮ್ಮ ಸಂಘದ ಮೇಲೆ ಇಲ್ಲದ ಸಲ್ಲದ ಆರೋಪಗಳನ್ನು ಬೇಜವಾಬ್ದಾರಿಯುತವಾಗಿ ಮಾಡಿರುವುದು ತುಂಬಾ ವಿಷಾದಕರ. ಸರ್ಕಾರದ ಧೋರಣೆ ಒಂದು ಕಡೆಯಲ್ಲಿ ಸಹಕಾರಿ ಸಂಘಗಳನ್ನು ಕಟ್ಟಬೇಕು. ಪ್ರತಿಯೊಂದು ಕಾರ್ಯಕ್ರಮವನ್ನು ಸಹಕಾರಿ ಸಂಘದ ಮೂಲಕ ಮಾಡಬೇಕೆಂಬ ನಿಲುವು ಏನಿದೆ ಅದರ ಪ್ರಕಾರ ಸಹಕಾರ ಸಂಘ ಕಟ್ಟಿ 200-300 ಪಂಪ್ ಸೆಟ್ಟುಗಳನ್ನು ರೈತರಿಗೆ ಒದಗಿಸುತ್ತಿರುವಾಗ ಆ ಸಹಕಾರ ಸಂಘದ ವಿಷಯವಾಗಿ ಅಲ್ಲದ ಸಲ್ಲದ ಆರೋಪ ಮಾಡುವುದು ತುಂಬಾ ವಿಷಾದ ತೋರುತ್ತದೆ. ನಾವು ಬೇರೆ ಪ್ರದೇಶಕ್ಕೆ ಹೋಗಿ ಕಂಪೆನಿಗಳವರ ಹತ್ತಿರ ಬಹಳ ವಿನಯದಿಂದ ನಮ್ಮ ಜಿಲ್ಲೆಗೆ ಪಂಪ್ ಸೆಟ್ಟುಗಳ ಅಗತ್ಯವುಂಟು ಕಾರಣವೇನೆಂದರೆ ನಮ್ಮ ಜಿಲ್ಲೆಯಲ್ಲಿ ಮೈನರ್ ಇರಿಗೇಷನ್ ಆಗಲೀ, ಮೇಜರ್ ಇರಿಗೇಷನ್ ಆಗಲೀ ವ್ಯವಸ್ಥೆ ಇಲ್ಲ. ಹೊಳೆಯಲ್ಲಿ ಹರಿಯುವ ನೀರನ್ನು ಉಪಯೋಗಿಸುವುದು ಕಷ್ಟ ಅದಕ್ಕೆ ಪಂಪ್‌ಸೆಟ್ಟುಗಳನ್ನು ಕೊಡಿ ಎಂದು ಕೇಳಿದ್ದರಿಂದ ಅವರು ಒಪ್ಪಿ, ಸರ್ಕಾರದಿಂದ ಹಣ ಸಾಲವಾಗಿ ಪಡೆದು ರೈತರಿಗೆ ಆ ಪಂಪ್ ಸೆಟ್ಟುಗಳನ್ನು ಒದಗಿಸುತ್ತಿರುವಾಗ ಆ ಸಹಕಾರಿ ಸಂಘದ ಮೇಲೆ ಇಲ್ಲದ ಸಲ್ಲದ ಅಪಾದನೆ ಹೊರಿಸುವುದು ನ್ಯಾಯವೇ? ಜವಾಬ್ದಾರಿಯುತರಾದವರು ಮಾಡುವ ಕೆಲಸದಲ್ಲಿ, ಬರೀ ಒಂದು ರೀತಿಯ ಅಸೂಯೆಯಿಂದ ಆ ರೀತಿ ಮಾಡುತ್ತಾ ಇದ್ದಾರೆ ಎಂದು ಕಂಡು ಬರುತ್ತದೆ.

ನಾವು ಹಾಗೆ ಅಲ್ಲಿ ಆ ಸೊಸೈಟಿಯನ್ನು ಮಾಡಿದ್ದರೂ ಅದಕ್ಕೆ ಯಾವ ರಾಜಕೀಯ ಪಕ್ಷದವರಾದರೂ ಸೇರಬಹುದು, ಸೇರಿಸಿಕೊಳ್ಳುತ್ತೇವೆ. ಅದರಲ್ಲಿ ಕಾಂಗ್ರೆಸ್ಸಿನವರೇ ಇರಬೇಕೆಂಬ ನೇಮವೇನೂ ಇಲ್ಲ. ಹತ್ತೂವರೆ ರೂಪಾಯಿಗಳನ್ನು ಯಾರು ಕೊಟ್ಟರೆ ಅವರು ಆ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಸೊಸೈಟಿಗೆ ಮೆಂಬರಾಗಬಹುದು. ಹೀಗಿದ್ದಾಗ್ಗೂ ಆ ಸಂಸ್ಥೆಯ ಮೇಲೆ ಯಾವ ಒಂದು ಅಪರಾದವೂ ಇಲ್ಲದಿದ್ದಾಗ, ಅಂಥ ನಿರ್ದೋಷಿ ಸಂಸ್ಥೆಯನ್ನು ನಿಷ್ಕಾರಣವಾಗಿ ದೂಷಿಸಿರತಕ್ಕದ್ದನ್ನು ನೋಡಿದರೆ ನಮಗೆ ಬಹಳ ವ್ಯಸನವಾಗುತ್ತದೆ. ನಾನು ಈ ಹಿಂದೆ ಇದೇ ಸಭೆಯಲ್ಲಿ ಗವರ್ನರ್ ಅವರ ಭಾಷಣದ ಮೇಲೆ ಚರ್ಚೆ ನಡೆಯುತ್ತಿದ್ದಾಗ ಈ ವಿಚಾರವನ್ನು ಮಾನ್ಯ ಹಣಕಾಸಿನ ಸಚಿವರ ಗಮನಕ್ಕೆ ತಂದಿದ್ದೆನು......

2-00 P.M.

Sri V. S. PATIL.—I again rise to a point of order Sir. My friend yesterday made reference to certain specific grievances and you were pleased to give a ruling that specific grievances should not be referred to at the time of the Budget discussion. My friend is again referring to his particular society and going on with his explanation. All this is irrelevant and it must be ruled out. Otherwise, the time of the House cannot be saved.

Mr. SPEAKER.—I know what is relevant and what is irrelevant.

ಶ್ರೀ ಎಸ್. ಎಸ್. ಕೊಳ್ಕೆಬೈಲ್.—ಇನ್ನು ನಮ್ಮ ಜಿಲ್ಲೆಯಲ್ಲಿ ಅರಣ್ಯಸಂಪತ್ತು ವಿಶೇಷವಾಗುಂಟು. ನಮ್ಮಲ್ಲಿ ಹೆಚ್ಚು ಅರಣ್ಯವೂ ಉಂಟು. ಆದುದರಿಂದ ಸರ್ಕಾರದವರು ನಮ್ಮ ಜಿಲ್ಲೆಯಲ್ಲಿ ಒಂದು (ಫಾರೆಸ್ಟ್ ಕಾಲೇಜನ್ನು) ಅರಣ್ಯ ಕಾಲೇಜನ್ನು ಸ್ಥಾಪನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಎಲ್ಲಾ ತರಹ ಮರಗಳಿವೆ. ಇದು ಸರ್ಕಾರಕ್ಕೆ ಹೆಚ್ಚಿನ ವರಮಾನ ತರತಕ್ಕ ಬಾಬಾಗಿದೆ. ಅದ್ದರಿಂದ ಒಂದು ಫಾರೆಸ್ಟ್ ಕಾಲೇಜನ್ನು ದ. ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಬೇಕೆಂತ ಕೇಳಿಕೊಳ್ಳುತ್ತೇನೆ.

(ಶ್ರೀ ಎಸ್. ಎಸ್. ಕೊಳ್ಕೆಬೈಲ್)

ಇನ್ನು ಈಗ ಸರ್ಕಾರದವರ ಆಡಳಿತದಲ್ಲಿರತಕ್ಕ ಕಾಲೇಜುಗಳನ್ನೂ, ಹೈಸ್ಕೂಲುಗಳನ್ನೂ ಪ್ರೈವೇಟ್ ಮ್ಯಾನೇಜ್‌ಮೆಂಟಿಗೆ ವಹಿಸುವುದಿಲ್ಲ ಎಂಬುದಾಗಿ ಸರ್ಕಾರದವರು ತಮ್ಮ ಪಾಲಿಸಿಯನ್ನು ಈಗಾಗಲೇ ವ್ಯಕ್ತಪಡಿಸಿದ್ದಾರೆ. ಇನ್ನು ಹಾಲಿ ಪ್ರೈವೇಟ್ ಮ್ಯಾನೇಜ್‌ಮೆಂಟಿನಲ್ಲಿರತಕ್ಕ ಹೈಸ್ಕೂಲು ಪ್ರಾಥಮಿಕ ಶಾಲೆಗಳು ಹಾಗೂ ಎಲಿಮೆಂಟರಿ ಹೈಸ್ಕೂಲುಗಳ ವಿಚಾರದಲ್ಲಿ ಎರಡು ಮಾತನ್ನು ಹೇಳ ಬೇಕಾಗಿದೆ. ಆದರೆ ಈಗ ಈ ಶಾಲೆಗಳೆಲ್ಲ ಪ್ರೈವೇಟ್ ಮ್ಯಾನೇಜ್‌ಮೆಂಟಿನವರ ಸ್ವಾಧೀನ, ಇರಬಾಗ ದೆಂತ ನಾನು ಹೇಳುತ್ತಿಲ್ಲ, ಇದಕ್ಕೆ ನನ್ನ ಆಕ್ಷೇಪಣೆಯೇನಿಲ್ಲ. ಅದರೆ ಈ ಮ್ಯಾನೇಜ್‌ಮೆಂಟನ್ನು ಸಂಪೂರ್ಣವಾಗಿ ಪ್ರೈವೇಟ್ ಸಂಸ್ಥೆಗಳಿಗೇ ಬಿಟ್ಟಲ್ಲಿ ನಮ್ಮ ಹುಡುಗರಿಗೂ ಧಕ್ಕೆ ಬರುತ್ತದೆ, ಸರ್ಕಾರಕೂ ಧಕ್ಕೆ ಬರುತ್ತದೆ. ಈ ದಿವಸ ಪ್ರೈವೇಟ್ ಮ್ಯಾನೇಜ್‌ಮೆಂಟಿನವರು ಉಪಾಧ್ಯಾಯರಿಗೆ ಸರಿಯಾಗಿ ಸಂಬಳ ಕೊಡುತ್ತಿಲ್ಲ. ಈ ದಿವಸ ಒಬ್ಬರು ಪ್ರೈವೇಟಾಗಿ 5 ಪ್ರಾಥಮಿಕ ಶಾಲೆಗಳನ್ನು ಮ್ಯಾನೇಜ್ ಮಾಡುತ್ತಿದ್ದಾರ. ಅವರೇನೂ ಉಪಾಧ್ಯಾಯರ ಕೆಲಸ ಮಾಡುತ್ತಿಲ್ಲ. ಆದರೂ ಅವರು ತಿಂಗಳಿಗೆ ಏನೂ ಕೆಲಸ ಮಾಡದೆ 300-400 ರೂ.ಗಳನ್ನು ಸಂಪಾದನೆ ಮಾಡುತ್ತಿದ್ದಾರೆ. ಹೀಗೆ ಈ ವಿದ್ಯಾಭ್ಯಾಸ ಒಂದು ಖಾಸಗಿ ಉದ್ಯಮವಾಗಿಬಿಟ್ಟಿದೆ. ಈ ತೊಂದರೆಗಳನ್ನು ನಿವಾರಣೆ ಮಾಡಲು ಈ ಪ್ರೈವೇಟ್ ಮ್ಯಾನೇಜ್‌ಮೆಂಟಿನಲ್ಲಿ 50% ಮ್ಯಾನೇಜ್‌ಮೆಂಟನ್ನು ಸರ್ಕಾರ ವಹಿಸಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಆಗಬೇಕಾದ ಸಣ್ಣ ನೀರಾವರಿ ಕಾಂಗಾರಿಗಳ ವಿಚಾರದಲ್ಲಿ ಎರಡು ಮಾತನ್ನು ಹೇಳಬೇಕೆಂದಿದ್ದೇನೆ. ನಮ್ಮಲ್ಲಿ ನಮ್ಮ ದ. ಕನ್ನಡ ಜಿಲ್ಲೆಯ ಮ್ಯಾಪನ್ನು ತೆಗೆದುಕೊಂಡು ನೋಡಿದರೆ ಆ ಜಿಲ್ಲೆಯಲ್ಲಿ ಮೇಜರ್ ಇರಿಗೇಷನ್ ಯೋಜನೆಗಳು ಯಾವೂ ಇರುವುದಿಲ್ಲ. ಅಲ್ಲಿ ಏನಿದ್ದರೂ ಈ ಮೈನರ್ ಇರಿಗೇಷನ್‌ಗೆ ಹೆಚ್ಚಿನ ಅವಕಾಶವಿದೆ. ಆದರೆ ಅಲ್ಲಿ ಕೆಲಸ ಮಾತ್ರ ಏನೂ ಆಗಿಲ್ಲ. ಇತರ ಕಡೆಗಳಲ್ಲಿ ಈ ಮೈನರ್ ಇರಿಗೇಷನ್ನಿಗೆ ಖರ್ಚು ಮಾಡಿದ ಹಾಗೆ ಕೋಟ್ಯಾಂತರ ರೂ.ಗಳನ್ನು ಖರ್ಚುಮಾಡಬೇಕಾದ ಅಗತ್ಯವೇನಿಲ್ಲ. ಅಲ್ಲಿ ಅನೇಕ ನದಿಗಳು ಹರಿದು ಸಮುದ್ರಕ್ಕೆ ನೀರನ್ನು ಸರಬರಾಯಿ ಮಾಡುತ್ತಿವೆ. ಏನಿದ್ದರೂ ಅಲ್ಲಿ ಕೆಲವು ನದಿಗಳಿಗೆ ಅಲ್ಲಲ್ಲೇ ಒಡ್ಡನ್ನೂ, ಅಣೆಕಟ್ಟುಗಳನ್ನೂ, ಕೆಲವು ಕಡೆ ಸಣ್ಣ ಕೆರೆಗಳನ್ನೂ, ಬಾವಿಗಳನ್ನೂ ಮಾಡಿಸಿದರೆ ಸಾಕು. ಇದರಲ್ಲಿ ಅಲ್ಲಿ ವ್ಯವಸಾಯಕ್ಕೆ ತುಂಬ ಅನುಕೂಲವಾಗುತ್ತದೆ. ಈ ವಿಚಾರದಲ್ಲಿ ಆಗಲೇ ಸಾಕಷ್ಟು ಶ್ರೀ ವೈ. ಮಂಜಯ್ಯಶೆಟ್ಟರು ಹೇಳಿದ್ದಾರೆ. ಈ ವಿಚಾರದಲ್ಲಿ ನಮ್ಮ ಜಿಲ್ಲೆಯ ಜನರು, ಇನ್ನು ಅನೇಕ ಮುಖಂಡರೂ ಸರ್ಕಾರಕ್ಕೆ ಪತ್ರಗಳ ಮೂಲಕ ಮನವಿಗಳನ್ನು ಮಾಡಿಕೊಂಡಿದ್ದಾರೆ. ಆದರೆ, ಅಲ್ಲಿ ಕೆಲಸ ಮಾತ್ರ ಏನೂ ಆಗಿಲ್ಲ. ನಮ್ಮಲ್ಲಿ ಈ ಕೆಲಸ ಕಾರ್ಯಗಳೇನಿದ್ದರೂ ವರ್ಷದಲ್ಲಿ ಆರು ತಿಂಗಳ ಕಾಲಕ್ಕಿಂತ ಹೆಚ್ಚಾಗಿ ನಡೆಯಲು ಸಾಧ್ಯವಿಲ್ಲ. ಅಲ್ಲಿ ಮಳೆ ವಿಶೇಷ. 150"-200"ವರೆಗೆ ಮಳೆ ಬೀಳುತ್ತೆ. ಅಷ್ಟೆಲ್ಲ ಮಳೆ ಬಿದ್ದರೂ ಆ ನೀರು ವ್ಯಥಾ ಸಮುದ್ರಕ್ಕೆ ಹರಿದುಹೋಗುತ್ತದೆ. ಆದ್ದರಿಂದ ಅಲ್ಲಿ ಆದಷ್ಟು ಬೇಗ ಮಳೆಗಾಲ ಪ್ರಾರಂಭವಾಗುವುದಕ್ಕೆ ಮುನ್ನ ಈ ಮೈನರ್ ಇರಿಗೇಷನ್ ಕಾರ್ಯಗಳನ್ನು ಪ್ರಾರಂಭಿಸಿ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ರಸ್ತೆಗಳ ವಿಚಾರ. ಆದರೆ ನಮ್ಮ ಮಂಗಳೂರಿನಲ್ಲಿ ಒಂದು ಪೋರ್ಟು ಮತ್ತು ಅಲ್ಯೂಮಿನಂ ಫ್ಯಾಕ್ಟರಿ ಈ ಎರಡನ್ನು ಅಲ್ಲಿ ಪ್ರಾರಂಭಿಸಲಾಗುತ್ತದೆಂದು ಹೇಳುತ್ತಿದ್ದಾರೆ, ಪೇಪರುಗಳಲ್ಲೂ ಓದುತ್ತಿದ್ದೇವೆ. ಆದರೆ ಮಂಗಳೂರಿಗೆ ಪೋರ್ಟು ಬಂದರೂ ಸಹ ಅಲ್ಲಿಯವರಿಗೇನೂ ಅನುಕೂಲವಿಲ್ಲ. ಅದರ ಅನುಕೂಲವೆಲ್ಲ ಹಳೇ ಮೈಸೂರಿನವರಿಗೆ. ಆದರೂ ನಮ್ಮಲ್ಲಿ ಒಂದೂ ಒಳ್ಳೆಯ ರಸ್ತೆಗಳಿಲ್ಲ, ಆ ಜಿಲ್ಲೆಯಲ್ಲಿ 625 ಹಳ್ಳಿಗಳಿವೆ. ಒಂದು ಹಳ್ಳಿಗೂ ನ್ಯಾಯವಾದ ರಸ್ತೆಯಿಲ್ಲ. ನಮ್ಮಲ್ಲಿ ವೆಸ್ಟ್‌ಕೋಸ್ಟ್ ನ್ಯಾಷನಲ್ ಹೈವೇ ಮಾತ್ರ ಬಂದಿದೆ. ಈ ರಸ್ತೆಗೆ ಮದ್ರಾಸ್ ಸರ್ಕಾರವಾಗಲೀ, ಮೈಸೂರು ಸರ್ಕಾರವಾಗಲೀ ಒಂದು ಕಾಸನ್ನೂ ಖರ್ಚು ಮಾಡಿಲ್ಲ. ಆದ್ದರಿಂದ ನಮ್ಮ ಜಿಲ್ಲೆಯಲ್ಲಿ ವರ್ಷದ ಅರ್ಧಕಾಲವೆಲ್ಲ ಮಳೆಗಾಲವಾಗಿರುವುದರಿಂದ ಅಲ್ಲಿ ರಸ್ತೆ ಅಗತ್ಯ ಜಾಸ್ತಿ ಇರುತ್ತದೆ. ಸರ್ಕಾರದವರಿಗೆ ಈಗ 100 ಕೋಟಿ ರೂ.ಗಳ ವರಮಾನವಿದ್ದರೂ ನಮ್ಮ ಜಿಲ್ಲೆಯಲ್ಲಿ ಒಂದೂ ಸಿಮೆಂಟ್ ರಸ್ತೆಯಿಲ್ಲ. ಕಡೆಗೆ ಅಲ್ಲಿ ಟಾರ್ ರಸ್ತೆಗಳನ್ನಾದರೂ ಮಾಡಿಸಿ ಜನರಿಗೆ ಈ ಸೌಕರ್ಯ ಕಲ್ಪಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Sri Gopala Gowda will now speak. The same request that I made to others, I am making to you also.

ಶ್ರೀ ಎಸ್. ಗೋಪಾಲಗೌಡ.—(ತೀರ್ಥಹಳ್ಳಿ) ಸ್ವಾಮಿ, ಮಾನ್ಯ ಸಭೆಯ ಮುಂದೆ ರಾಜ್ಯದ ವಿದ್ಯಾ ಮಂತ್ರಿಗಳು ಮಂಡಿಸಿರುವ 1963-64ನೇ ಇಸವಿಯ ಆಯ ವ್ಯಯ ಅಂದಾಜು ಪಟ್ಟಿಯ

ಮೇಲೆ ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಮುಖ್ಯವಾಗಿ ಈ ಅಂದಾಜು ಪಟ್ಟಿಯನ್ನು ಆರ್ಥಿಕ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟ ಕಾಲ ಬಹಳ ಕೆಟ್ಟ ಕಾಲವೆಂದು ನಾನು ಹೇಳು ತ್ತೇನೆ. ಭೂತಪೂರ್ವ ರಾಷ್ಟ್ರಾಧ್ಯಕ್ಷರಾಗಿದ್ದ ರಾಜೇಂದ್ರಪ್ರಸಾದರು ಮರಣ ಹೊಂದಿ ಅವರ ಶವ ಸಂಸ್ಕಾರ ಪಾಟ್ನಾದ ಬನ್ಸ್‌ಘಾಟ್‌ನಲ್ಲಿ ನಡೆಯುತ್ತಿದ್ದಾಗ ನಾವು ಈ ಸಭೆಯಲ್ಲಿ ಅವರ ಮರಣದ ದುಃಖಕ್ಕಾಗಿ ಒಂದು ಶೋಕ ಪ್ರಸ್ತಾಪವನ್ನು ಅಂಗೀಕರಿಸಿದ ತಕ್ಷಣವೇ ಈ ಅಂದಾಜು ಪಟ್ಟಿಯನ್ನು ನಾವು ಈ ಸಭೆ ಮುಂದೆ ಇಡುವುದಕ್ಕೆ ಅವಕಾಶ ಕೊಡಬೇಕಾಯಿತು. ಈಗಲೂ ಕೂಡ ಈ ಚರ್ಚೆ ಶೋಕಸಪ್ತಾಹದಲ್ಲಿಯೇ ನಡೆದುಕೊಂಡು ಬಂದಿದೆ. ಆಹೊತ್ತು ಪ್ರಧಾನ ಮಂತ್ರಿಗಳು ಹನಮಘಡ ದಲ್ಲಿದ್ದರು. ರಾಜ್ಯಪಾಲರು ಮತ್ತೆಲ್ಲಿಯೋ ಇದ್ದರು. ಈ ವಿಷಯದಲ್ಲಿ ನಾನು ಆ ದಿವಸ ಸಭೆ ಶೋಕ ಪ್ರಸ್ತಾಪದ ನಂತರ ಯಾವ ಕಾರ್ಯಕಲಾಪಗಳನ್ನೂ ನಡೆಸದೆ ಏಳಬೇಕೆಂದು ಕೇಳಿಕೊಂಡರೂ ಕೂಡ ಹಾಗೆ ಮಾಡದೆ, ಬೇರೆ ಬಲವತ್ತರವಾದ ಕಾರಣಗಳಿವೆ, ಆದುದರಿಂದ ನಾವು ಆಯ ವ್ಯಯ ವನ್ನೂ ಮಂಡಿಸುತ್ತೇವೆಂದು ಸರ್ಕಾರ ಅನಾಗರಿಕವಾದ ಒಂದು ವರ್ತನೆಯನ್ನು ಮಾಡಿತು.

ಸ್ವಾಮಿ, ಈ ಅಂದಾಜು ಪಟ್ಟಿಯನ್ನೂ ತಯಾರುಮಾಡಿರತಕ್ಕ ಕ್ರಮ ತುಂಬ ಬುದ್ಧಿವಂತಿಕೆ ಯನ್ನು ತೋರಿಸುತ್ತದೆ. ದೂರದೃಷ್ಟಿಯನ್ನಾಗಲೀ, ಪ್ರಾಮಾಣಿಕತೆಯನ್ನಾಗಲೀ, ರಾಜಕಾರಣದ ಪ್ರಾಮಾಣಿಕ ರೂಪವನ್ನಾಗಲೀ ಇದು ತೋರುವುದಿಲ್ಲ. ಮಾನ್ಯ ಸ್ನೇಹಿತರು ಕೆಲವರು ವಿತ್ತ ಮಂತ್ರಿ ಗಳನ್ನಭಿನಂದಿಸಿ ನಾವು ಹೋಗತಕ್ಕ ದಾರಿ ಸರಿಯಾಗಿದೆ, ನಮ್ಮ ಆದಾಯ ವೆಚ್ಚ ಚೆನ್ನಾಗಿಯೇ ಇದೆ. ಯಾರೂ ಭಯಪಡಬೇಕಾದ್ದಿಲ್ಲವೆಂದು ಹೇಳಿದರು. ಯಾವ ದೃಷ್ಟಿಯಿಂದ ಹೇಳಿದರೆಂದು ನನಗೆ ಅರ್ಥ ವಾಗುವುದಿಲ್ಲ. ಈದರೆ, ಈ ಆಯ ವ್ಯಯವನ್ನು ನಾವು ಕೇಂದ್ರ ಸರ್ಕಾರದ ಆಯ ವ್ಯಯದ ಹಿನ್ನೆಲೆ ಯಲ್ಲಿ ನೋಡಿದಾಗ ಮಾತ್ರ ನಮಗೆ ಅರ್ಥವಾದೀತು. ಈ ವರ್ಷ 1963 ಮತ್ತು 1964ನೇ ಸಾಲು ಅವರೇ ಹೇಳಿದ ಹಾಗೆ ಕಷ್ಟಕರವಾದ ಹಣಕಾಸಿನ ಪರಿಸ್ಥಿತಿಯನ್ನು ಎದುರಿಸಬೇಕಾದ ಸಾಲು. ಏಕೆ ಎಂದು ಹೇಳಿಲ್ಲ.

ಈ ದೇಶದ ಮುಂದೆ ಯುದ್ಧಕಾಲದ ಒಂದು ಆಯ ವ್ಯಯವನ್ನು ಕೇಂದ್ರದ ಆರ್ಥಿಕ ಮಂತ್ರಿ ಯವರು ಮಂಡಿಸಿದ್ದಾರೆ. ಅದು ಫೆಬ್ರವರಿ 28ನೇ ತಾರೀಖು ಲೋಕಸಭೆಯಲ್ಲಿ ಮಂಡನೆಯಾಯಿತು. ಮಾರನೆಯ ದಿನ ಈ ರಾಜ್ಯದಲ್ಲಿ ರಾಜ್ಯದ ಆಯವ್ಯಯವನ್ನು ಸಭೆಯ ಮುಂದೆ ಒಪ್ಪಿಸಲಾಯಿತು. ಇದು 40 ಲಕ್ಷ ರೂಪಾಯಿ ಮಾತ್ರ ಕೊರತೆಯಿರತಕ್ಕ ಆಯವ್ಯಯವೆಂದು ಹೇಳಿದ್ದಾರೆ. ಅದನ್ನು ಶ್ರೀಮಾನ್ ಬಿ. ಎಲ್. ಗೌಡರು arithmetical jugglery ಎಂದರು. ಅದನ್ನು ಪೂರ್ತಿ ವಿವರಿಸ ಲಿಲ್ಲ. ಈ ಅಂಕಿ ಸಂಖ್ಯೆಗಳನ್ನು ಕೊಟ್ಟು ನಂತರದಲ್ಲಿ ಸುಳ್ಳು ಮತ್ತು ಹಸಿ ಸುಳ್ಳುಗಳನ್ನು ಹೇಳುವು ದಕ್ಕೆ ಸಾಧ್ಯವಾಗುತ್ತದೆ. ಇಲ್ಲಿ ಲೆಕ್ಕವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಕೇಂದ್ರದಲ್ಲಿ ಯುದ್ಧದ ಪರಿಸ್ಥಿತಿಯನ್ನು ಕಾರಣವಾಗಿಟ್ಟುಕೊಂಡು, ಪಂಚವಾರ್ಷಿಕ ಯೋಜನೆಯನ್ನು ಕಾರಣ ವಾಗಿಟ್ಟುಕೊಂಡು, ಅವರು ತಯಾರಿಸಿರತಕ್ಕ ಆದಾಯ ಮುಂಗಡಪತ್ರದಲ್ಲಿ ಸುಮಾರು 275-50 ಕೋಟಿ ರೂಪಾಯಿ ಹೊಸ ತೆರಿಗೆಯನ್ನು ಹಾಕಿದ್ದಾರೆ, ಒಂದೇ ವರ್ಷ 1963–64ನೇ ಸಾಲಿನಲ್ಲಿ ಪಡೆದುಕೊಳ್ಳಬೇಕಾದ ಹೊಸ ತೆರಿಗೆ. ಕರ್ಣಾಟಕರಾಜ್ಯ ಭಾರತದ ಗಣತಂತ್ರದಲ್ಲಿ ಒಂದು ಅವಿಭಾಜ್ಯ ಅಂಗ. ಅಲ್ಲಿ ತೆರಿಗೆಯನ್ನು ಹಾಕಿದರೆ ರಾಜ್ಯದಲ್ಲಿರುವ ಎಲ್ಲ ನಾಗರೀಕರ ಮೇಲೆಯೂ ತೆರಿಗೆ ಬೀಳು ವುದೆನ್ನುವ ಮಾತನ್ನು ನಾವು ಚೆನ್ನಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಸೀಮೆಎಣ್ಣೆ, ಸಾಬೂನು, ಕಾಫಿ, ಟೀ, ತಂಬಾಕು, ಸೌಂದರ್ಯದ ಉಪಕರಣಗಳು, ವನಸ್ಪತಿ, ಬರೆಯುವ ಕಾಗದ, ಉತ್ತಮ ಹತ್ತಿಯ ನೂಲು, ಸಿಲ್ಕ್, ರೇಡಿಯೋ, ವಿದ್ಯುಚ್ಛಕ್ತಿ, ಬೀಸಣಿಗೆ, ಈ ಎಲ್ಲ ವಸ್ತುಗಳ ಮೇಲೆಯೂ ತೆರಿಗೆ ಹೆಚ್ಚಾಗಿದೆ. ಕಬ್ಬಿಣದ ಮೇಲೆ ಹೆಚ್ಚಾಗಿದೆ. ಅಂಚೆಯ ದರ ಹೆಚ್ಚಾಗಿದೆ. ಕಡ್ಡಾಯವಾಗಿ ಉಳಿತಾಯ ಮಾಡಬೇಕು, ಎಂದು ಹೇಳಿದ್ದಾರೆ. ಕಾರ್ಪೊರೇಟ್ ತೆರಿಗೆಗಳನ್ನು ಹಾಕಿದ್ದಾರೆ, super profits ಮೇಲೆ ತೆರಿಗೆ ಹಾಕಿದ್ದಾರೆ. ಈ ತೆರಿಗೆಗಳು ನಮ್ಮ ಮೇಲೆ, ನಮ್ಮ ಜನಜೀವನದ ಮೇಲೆ, ಭಾರತದೇಶದ ಜನಜೀವನದ ಮೇಲೆ ದೊಡ್ಡ ದುಷ್ಪರಿಣಾಮವನ್ನುಂಟುಮಾಡುತ್ತದೆ ಎನ್ನುವು ದನ್ನು ನಾವು ತಿಳಿದುಕೊಳ್ಳಬೇಕು.

ಜೊತೆಗೆ ಈ ವರ್ಷ ನಾವು ಚೀಣಾ ಧಾಳಿಯನ್ನು ಎದುರಿಸುವುದಕ್ಕಾಗಿ ನಮ್ಮ ರಕ್ಷಣಾವೆಚ್ಚ ವನ್ನು ಒಂದಕ್ಕೆ ಎರಡರಷ್ಟು ಮಾಡಿಕೊಂಡಿದ್ದೇವೆ. ಸುಮಾರು 867 ಕೋಟಿ ರೂಪಾಯಿಗಳ ರಕ್ಷಣಾವೆಚ್ಚವನ್ನು ನಾವು ಈ ವರ್ಷ ಇಟ್ಟುಕೊಂಡಿದ್ದೇವೆ. ಕೇಂದ್ರ ಸರ್ಕಾರದ ಆದಾಯ ವೆಚ್ಚದಲ್ಲಿ ರೆವೆನ್ಯೂ ಕೊರತೆಯೇ ಸುಮಾರು 260-67 ಕೋಟಿ ರೂಪಾಯಿಗಳು ಇದೆ. ಹೊಸ ತೆರಿಗೆಗಳಿಂದ 275-50 ಕೋಟಿ ರೂಪಾಯಿಗಳು ಬರುತ್ತದೆ. ವಿದೇಶಿ ಸಾಲದಿಂದ 462-4 ಕೋಟಿ ರೂಪಾಯಿ ಗಳನ್ನು ನಾವು ಪಡೆದರೂ ಕೂಡ ಒಟ್ಟು ಖೋತ 454 ಕೋಟಿ ರೂಪಾಯಿಗಳು ಆಗುತ್ತವೆಂದು ನಮಗೆ ಅವರ ಲೆಕ್ಕದಿಂದ ತಿಳಿಯುತ್ತದೆ. ಈ ದೃಷ್ಟಿಯಿಂದ ನಮ್ಮ ರಾಜ್ಯದ ಕಡೆಗೆ ತಿರುಗಿ ನೋಡಿ

(ಶ್ರೀ ಎಸ್ ಗೋಪಾಲಗೌಡ)

ದರೆ ಶ್ರೀಮಾನ್ ಜತ್ತಿಯವರು ಅತಿ ಬುದ್ಧಿವಂತಿಕೆಯಿಂದ ಈ ಸಭೆಯ ಮುಂದೆ ಇಟ್ಟಿರತಕ್ಕ ಆದಾಯ ವೆಚ್ಚದ ಪಟ್ಟಿಯನ್ನು ನೋಡಿ ಬಹಳ ಆಶ್ಚರ್ಯವಾಯಿತು. ನಾನು ಬಹಳ ಭಾರವಾದ ಹೃದಯದಿಂದ, ನೊಂದ ಮನಸ್ಸಿನಿಂದ ಹೇಳುತ್ತೇನೆ. ಈ ದೇಶದ ಸ್ಥಿತಿಗತಿಗಳನ್ನು ನೋಡಿದರೆ ನನಗಂತೂ ತುಂಬ ಕಳವಳವುಂಟಾಗಿದೆ, ಭಯ ಕೂಡ ಉಂಟಾಗಿದೆ ಎಂದು ಹೇಳುತ್ತೇನೆ.

ಸ್ವಾಮಿ, ಯಾವ ರಾಜ್ಯದಲ್ಲಿ, ಯಾವ ದೇಶದಲ್ಲಿ ಇಂಥ ಒಂದು ಸಣ್ಣಪುಟ್ಟ ವ್ಯಾಪಾರಿಗಳು ಬರೆಯುವ ಖಿರದಿ ಇದ್ದ ಹಾಗೆ ಇರುವ, ಲೆಕ್ಕದ ಪತ್ರವನ್ನು ಸರಕಾರ ಇಡುತ್ತದೆ? ಅವರು ಹೇಳಿದ್ದಾರೆ. ನಾನು ಯಾವುದನ್ನೂ ಹೇಳುವುದಿಲ್ಲ. ಸ್ಥೂಲವಾಗಿ ಹಣಕಾಸಿನ ವಿವರಗಳನ್ನು ಮತ್ತು ಅಂದಾಜುಗಳ ಮುಖ್ಯ ಮುಖ್ಯವಾದ ಅಂಶಗಳನ್ನು ಹೇಳುತ್ತೇನೆ ಎಂದು. ನಾಲ್ಕನೆಯ ಪ್ಯಾರಾದಲ್ಲಿ ಏನು ಹೇಳಿದ್ದಾರೆ, ಒಂದು ಮಾತಿನಲ್ಲಿ ಹೇಳಬೇಕಾದರೆ 1960-61ರಲ್ಲಿ ಬೆಳೆ ಇಷ್ಟಾಯಿತು, ಇಷ್ಟು ಎಕರೆಗಳಲ್ಲಿ ಇಷ್ಟು ಬೆಳೆಯಾಯಿತು, 1961-62ರಲ್ಲಿ ಇಷ್ಟು ಬೆಳೆಯಾಯಿತು ಎಂದು ಹೇಳಿದ್ದಾರೆ. ಈ ಅಂಕಿ ಸಂಖ್ಯೆಗಳು ಇನ್ನೆಲ್ಲಿಯೂ ಸಿಕ್ಕುವುದಿಲ್ಲ, ತಮಗೆ ಮಾತ್ರ ಸಿಕ್ಕುತ್ತದೆಂದು ಅದನ್ನು ಆಯುವ್ಯಯ ಅಂದಾಜುಪಟ್ಟಿಯಲ್ಲಿ ಹೇಳಬೇಕೇ? ಇದರಿಂದ ಗೊತ್ತಾಗುವುದಾದರೂ ಏನು? ಏನು ತೋರಿಸಿ ಕೊಡುತ್ತದೆ? ಬಹಳ ಎಕರೆಗಳನ್ನು ಸಾಗುವಳಿಗೆ ತಂದಿದ್ದಾರೆಯೋ ಏನೋ ಎಂದು ತಿಳಿಯುತ್ತದೆ. ಭದ್ರ, ತುಂಗಭದ್ರ ಜಲಾಶಯಗಳ ಕೆಳಗೆ ಎಷ್ಟು ಎಕರೆಗಳನ್ನು ಸಾಗುವಳಿಗೆ ತಂದಿದ್ದೀರಿ? ಭದ್ರ ಅಣೆಕಟ್ಟನ್ನು ಯಾವಾಗ ಪ್ರಾರಂಭ ಮಾಡಿ ಯಾವಾಗ ಮುಗಿಸಿದಿರಿ ಸ್ವಾಮಿ? ಸಂತಾನಂ ಅವರು ಇದರ ಬಗ್ಗೆ ಏನು ಹೇಳಿದ್ದಾರೆ? ಇದನ್ನು ಮುಚ್ಚಿಟ್ಟುಕೊಳ್ಳುವುದಕ್ಕೆ ಹೀಗೆ ಹೇಳಿದ್ದೀರಿ ಎಂದು ಕಾಣುತ್ತದೆ. ಈ ಸಂದರ್ಭದಲ್ಲಿ ಒಂದು ಕತೆ ನೆನಪಿಗೆ ಬರುತ್ತದೆ. ಹಿಂದೆ ಹಡಗನ್ನು ಹತ್ತಿ ಹೋಗುವಾಗ ಯಾವುದೋ ಒಂದು ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡುತ್ತಿದ್ದರು. ಅಲ್ಲಿ ಒಬ್ಬ ಪೂಜಾರಿ ಇದ್ದ. ಅವನು ಹರಕೆ ಕಟ್ಟಿಕೊಂಡು ಪರದೇಶಗಳಿಗೆ ಹೋಗಿ ಸುರಕ್ಷಿತವಾಗಿ ಬಂದು ಪುನಃ ಸೇರಿದ ಹಡಗುಗಳ ಹೆಸರುಗಳನ್ನು ಮಾತ್ರ ಬರೆದಿಟ್ಟುಕೊಂಡಿದ್ದ. ಒಬ್ಬ ಸಂದೇಹಗಾರ ಹೋದ ಅವನಿಗೆ ಒಂದು ಹಡಗು ಪರದೇಶಕ್ಕೆ ಹೋಗಿದ್ದು ಅದು ಮುಳುಗಿ ಹೋಗಿ ವಾಪಸು ಬರಲಿಲ್ಲವೆಂದು ತಿಳಿದಿತ್ತು. ಅವನು ಪೂಜಾರಿ ಬರೆದಿಟ್ಟುಕೊಂಡಿದ್ದ ಪಟ್ಟಿಯಲ್ಲಿ ಅದರ ಹೆಸರು ಏಕೆ ಇಲ್ಲ ಎಂದು ಕೇಳಿದನಂತೆ. ಹಾಗೆ ಆಗಿದೆ ಇಲ್ಲಿಯ ಪರಿಸ್ಥಿತಿಯೂ ಇದರಲ್ಲಿ ನಿಜವಾಗಿಯೂ. ತಪ್ಪು ಮಾಡಿರುವ, ಮತ್ತು ಅವಮಾನದಿಂದ ತಲೆ ತಗ್ಗಿಸತಕ್ಕ ಪ್ರಶ್ನೆಗಳ ಬಗ್ಗೆ ಒಂದು ಸಮಜಾಯಿಷಿಯಾಗಲೀ, ಯಾವ ಒಂದು ಒಳ್ಳೆಯ ಪ್ರಯತ್ನ ಮಾಡುತ್ತೇವೆ, ತಪ್ಪು ತಿದ್ದಿಕೊಳ್ಳುತ್ತೇವೆ ಎನ್ನುವ ಮಾತಾಗಲೀ ಈ ಪುಸ್ತಕದಲ್ಲಿ ಎಲ್ಲಿಯೂ ಇಲ್ಲ.

ಆದರೆ ಕೆಲವು ಸತ್ಯಗಳನ್ನು ಅವರು ಹೇಳಲೇ ಬೇಕಾಗುತ್ತದೆ ಅದನ್ನು ಮುಚ್ಚಿಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಇಲ್ಲಿ ಅಂತಹ ಒಂದು ಮಾತಿದೆ:—

"ವಿದ್ಯುಚ್ಛಕ್ತಿಯ ಉತ್ಪಾದನೆಯಲ್ಲಿ ಒಂದು ಕಾಲಕ್ಕೆ ಎಲ್ಲರಿಗಿಂತ ಮುಂದೆ ಇದ್ದ ಈ ರಾಜ್ಯವು ಈಗ ಹಿಂದುಳಿದಿದೆ" ಎಂದು ಕಾಂಗ್ರೆಸ್ಸು ಸರಕಾರ ಬಂದು ಎಷ್ಟು ವರ್ಷಗಳಾಯಿತು? ಈ ದೇಶಕ್ಕೆ ಸ್ವಾತಂತ್ರ ಬಂದು ಹದಿನೈದು ವರ್ಷಗಳಾಯಿತು. ತಾವೂ ಕೂಡ ಅಧಿಕಾರಕ್ಕೆ ಬಂದು ಹೆಚ್ಚು ಕಡಿಮೆ ಹದಿನೈದು ವರ್ಷಗಳಾದವು. ಹೊಸ ರಾಜ್ಯ ೧೯೫೬ ನೇ ಇಸವಿಯಲ್ಲಿಯೇ ಆದರೂ, ತಾವು ವರ್ಷದಿಂದ ವರ್ಷಕ್ಕೆ ಯಾವ ಯಾವ ಕೆಲಸಗಳನ್ನು ಮಾಡಿದ್ದೀರಿ ಎನ್ನುವುದಕ್ಕೆ ಇಲ್ಲಿ ಹೇಳಿದ್ದೀರಿ.

ಶ್ರೀ ಬಿ. ಡಿ. ಜತ್ತಿ.—ಪ್ರದೇಶ ವಿಸ್ತಾರ

ಶ್ರೀ ಎಸ್. ಗೋಪಾಲ ಗೌಡ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ..........
ಇದರಲ್ಲಿ.

"ವಿದ್ಯುಚ್ಛಕ್ತಿಯನ್ನು ಅತ್ಯಧಿಕ ಪ್ರಮಾಣದಲ್ಲಿ ಉತ್ಪಾದಿಸುವ ಹಿಡಿತ ವೆಚ್ಚದ ಯೋಜನೆಗಳಿದ್ದರೂ, ೧ನೆಯ ಮತ್ತು ಎರಡನೆಯ ಯೋಜನೆಗಳಲ್ಲಿ ಸಾಕಷ್ಟು ನಿಧಿಗಳನ್ನು ಒದಗಿಸದಿದ್ದುದೇ ಇದಕ್ಕೆ ಕಾರಣವಾಗಿದೆ" ಎಂದು ಹೇಳಿದ್ದಾರೆ. ಈ ಮಾತನ್ನು ಕೇಳಿದಾಗ ಸರಕಾರ ಯೋಜನೆಗಳನ್ನು ಹಾಕಿಕೊಂಡು ಕೆಲಸಮಾಡುತ್ತಿದ್ದಾರೆಯೇ ಎನ್ನತಕ್ಕ ಒಂದು ದೊಡ್ಡ ಅನುಮಾನ ಬರುತ್ತದೆ. ಎರಡು ಯೋಜನೆಗಳನ್ನು ನೀವೇ ಮಾಡಿ, ನಿಮ್ಮ ಮಾತಿನಲ್ಲಿಯೇ ಹೇಳಿ ಮುಗಿಸುವುದಾದರೆ ಯಶಸ್ವಿಯಾಗಿ ಮಾಡಿ ಮುಗಿಸಿದ್ದೀರಿ, ಮೂರನೆ ಯೋಜನೆಯು ಮೂರನೇ ವರ್ಷದಲ್ಲಿದ್ದೀರಿ. ಹಾಗಿದ್ದಾಗ್ಯೂ ಸರಕಾರದಲ್ಲಿ ಆಹಾರ ಧಾನ್ಯಗಳ ಬಗೆಗಾಗಲೀ, ಕೈಗಾರಿಕೋತ್ಪನ್ನ,

ಬೆಳೆಗಳು, ಜೀವನ ವೆಚ್ಚ ಇತ್ಯಾದಿ ಯಾವುದೇ ವಿಷಯದಲ್ಲಿ vital statistics ಎಂದರೆ ಉಪಯುಕ್ತ ಅಂಕೆ ಸಂಖ್ಯೆಗಳು ಯಾವುದಾದರೂ ನಂಬಿ ಕೊಳ್ಳುವಂತಹುದು ನಮ್ಮ ಮುಂದೆ ಇದೆಯೇ ಅಥವಾ ದೇಶದ ಮುಂದೆ ಇಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಿದೆಯೇ? ಇವೊತ್ತಿಗೂ ಕೂಡ ಜನ ನಮ್ಮ ಭಾಗಕ್ಕೆ ಈ ಸೇತುವೆ ಬೇಕು, ಈ ರಸ್ತೆ ಬೇಕು, ಈ ಸೇತುವೆ ಮುರಿದು ಬಿದ್ದು ಹೋಗಿದೆ, ಈ ರಸ್ತೆ ಕೆಲಸ ಅರ್ಧಕ್ಕೆ ಮುಗಿದು ಹೋಗಿದೆ, ಈ ರಸ್ತೆ ಅಗಲೇ ಇಲ್ಲ. ಎಂದು ಪ್ರತಿಯೊಂದನ್ನು ಈ ಸಭೆಯಲ್ಲಿ ನಮ್ಮ ಭಾಷಣದಲ್ಲಿ ಹೇಳದೇ ಯಾವ ಕೆಲಸವೂ ನಡೆಯುವುದಿಲ್ಲ. ಅಲ್ಲದೆ ನಿಮ್ಮ ಆಫೀಸಿನಲ್ಲಿ ಬಂದು ನಿಮ್ಮ ಕೈಕಾಲು ಹಿಡಿದು ಕೇಳಿಕೊಂಡರು ಕೂಡ ಆಗುವುದಿಲ್ಲ. ಹಿಂದೇನೋ ರಾಜರುಗಳ ಕಾಲವಾಗಿತ್ತು, ಆಗ ಜನ ಅವರಲ್ಲಿಗೆ ಹೋಗಿ ತಮ್ಮ ಅಹವಾಲುಗಳನ್ನು ಹೇಳಿಕೊಂಡು ಕಂದಾಯವನ್ನು ಮಾಫಿ ಮಾಡಿಸಿಕೊಳ್ಳುತ್ತಿದ್ದರು. ಯೋಜನೆಯ ಹೆಸರಿನಲ್ಲಿ ಯಾವ ಯಾವ ಕಡೆ ಎಷ್ಟು ಉತ್ಪತ್ತಿ ಮಾಡಿ ಶೇಖರಿಸಿದ್ದೀರಿ, ಯಾವ ಹೆಚ್ಚಿನ ಕೈಗಾರಿಕೆಯನ್ನು ಬೆಳೆಸಿದ್ದೀರಿ, ಎನ್ನುವುದನ್ನು ತೆಗೆದು ಕೊಂಡು ದೇಶದ ಮುಂದೆ ಇರುವ ಒಂದು ದಾರುಣ ಚಿತ್ರವನ್ನು ನೋಡಿದರೆ, ತಾವು ನಿಜವಾಗಿಯೂ ಯೋಜನೆಯನ್ನು ಮಾಡಿ ದೇಶ ಕಟ್ಟುತ್ತೀರಾ ಎನ್ನುವ ಒಂದು ದೊಡ್ಡ ಅನುಮಾನ ನಮ್ಮಲ್ಲಿ ಬರುತ್ತದೆ.

ಆದರೆ, ನಮ್ಮ ದೇಶದಲ್ಲಿ ಹೆಚ್ಚಿನ ಆಹಾರ ಉತ್ಪತ್ತಿಯನ್ನು ಮಾಡಲು ಎಷ್ಟು ಮುಂದೆ ಹೋಗಿದ್ದೀರಿ? ತಾವು ಸ್ಥಾಪನೆ ಮಾಡಿರತಕ್ಕ ಕೈಗಾರಿಕೆಗಳಲ್ಲಿ ಎಷ್ಟು ಉತ್ಪನ್ನ ಈಗ ಬರುತ್ತಿದೆ. ಈಗಾಗಲೇ ಖಾಸಗೀ ಕ್ಷೇತ್ರದಲ್ಲಿ ಬೆಳೆದು ನಿಂತಿರುವ ಕೈಗಾರಿಕೆಗಳು ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಿಗೆ ದೊಡ್ಡ ಪೆಟ್ಟನ್ನು ಕೊಡುತ್ತಿವೆ. ಅಲ್ಲದೆ, ಎರಡು ಕ್ಷೇತ್ರಗಳನ್ನು ಒಟ್ಟಿಗೆ ಬೆಳೆಸುತ್ತೇವೆನ್ನುವುದರಲ್ಲಿ ಅರ್ಥವಿಲ್ಲ. ಇದನ್ನು ಯೋಚನೆ ಮಾಡಿದ್ದೀರಾ? ನಮ್ಮ ಶಿವಮೊಗ್ಗದಲ್ಲಿ ಒಂದು ಬೆಂಕಿಕಡ್ಡಿ ಕಾರ್ಖಾನೆ ಇತ್ತು. ಈ ಕಾರ್ಖಾನೆ WIMCO ನಂತಹ ಕಾರ್ಖಾನೆಯನ್ನು ಎದುರಿಸುವುದಕ್ಕಾಗದೆ ಅದು ಮುಚ್ಚಿ ಹೋಯಿತು. ಹಾಗೂ ಭದ್ರಾವತಿಯಲ್ಲಿರುವ ಕಬ್ಬಿಣದ ಕಾರ್ಖಾನೆ ಸ್ಥಾಪನೆಯಾಗುವಾಗಲೇ ದಿವಂಗತ ಎಂ. ವಿಶ್ವೇಶ್ವರಯ್ಯನವರು ಅದರ ವಿಸ್ತರಣಾ ಯೋಜನೆ ಹಾಕಿದ್ದರು. ಆದರೆ ಅದು ಇನ್ನೂ ಕಬ್ಬಿಣ ಮಾಡಬೇಕೇ, ಇನ್ನೇನಾದರೂ ಮಾಡಬೇಕೇ, ಉಕ್ಕನ್ನು ಮಾಡಬೇಕೇ, ಅಲಾಯನ್ನು ಮಾಡಬೇಕೇ ಅಥವಾ ಇನ್ನೇನಾದರೂ ಮಾಡಬೇಕೇ ಎಂದು ಇನ್ನೂ ಯೋಚನೆ ಮಾಡಿ, ಇದಕ್ಕೆ ಇನ್ನೂ ಏಳು ಕೋಟಿಯಷ್ಟು ಖರ್ಚು ಮಾಡಿ ವಿಸ್ತರಣೆ ಮಾಡಬೇಕೆಂದಿದ್ದೀರಿ. ಇದು ತಾತಾರವರ ಉಕ್ಕಿನ ಕಾರ್ಖಾನೆಯ ಮುಂದೆ ನಿಲ್ಲಬಲ್ಲುದೆ! ಇನ್ನು ಸ್ವಲ್ಪ ದಿವಸದಲ್ಲಿಯೇ ಬಂಗಾರದ ಗಣಿಯನ್ನು ಕೇಂದ್ರ ಸರಕಾರಕ್ಕೆ ವಹಿಸಿಕೊಟ್ಟ ಹಾಗೆ ಈ ಭದ್ರಾವತಿ ಕಾರ್ಖಾನೆಯನ್ನೂ ಕೇಂದ್ರಕ್ಕೆ ಕೊಡುತ್ತೀರಿ ಎನ್ನುವಂತಹ ಒಂದು ಅನುಮಾನ ನನಗೆ ಬಂದಿದೆ. ನಿಮ್ಮಿಂದ ಈ ಕೈಗಾರಿಕೆ ನಡೆಸಲು ಸಾಧ್ಯವಿಲ್ಲ. ನೀವು ಸ್ಥಾಪನೆ ಮಾಡತಕ್ಕ ಕೈಗಾರಿಕೆಗಳಿಗೂ ಖಾಸಗೀ ಕ್ಷೇತ್ರದಲ್ಲಿ ಸ್ಥಾಪನೆ ಮಾಡತಕ್ಕ ಕೈಗಾರಿಕೆಗಳಿಗೂ ಬಹಳ ವ್ಯತ್ಯಾಸವಿದೆ. ಅವು ದೇಶದಲ್ಲಿ ಈಗಾಗಲೇ ಬೆಳೆದು ನಿಂತಿರುವ ಕೈಗಾರಿಕೆಗಳಿಂದ ಹೆಚ್ಚಿನ ಒಂದು ಪೆಟ್ಟನ್ನು ತಿಂದು ಅವು ಬದುಕಲಾರದೇ ಇರುವ ಸ್ಥಿತಿಗೆ ತಂದು ಇಡುತ್ತಿವೆ: ಇಂತಹ ಸ್ಥಿತಿಯಲ್ಲಿ ಇವೆರಡು ಕ್ಷೇತ್ರಗಳನ್ನೂ ಒಟ್ಟಿಗೆ ಬೆಳೆಸುತ್ತೇವೆಂದು ಹೇಳುವುದರಲ್ಲಿ ಏನರ್ಥ? ನನಗೊಂದೂ ಗೊತ್ತಾಗುತ್ತಿಲ್ಲ. ಇದು ನಮ್ಮ ದೇಶದ ದೌರ್ಭಾಗ್ಯವೆಂದೇ ಹೇಳಬೇಕು.

ಇವೊತ್ತು ಆದಾಯ ವೆಚ್ಚದ ಹೊಂದಾಣಿಕೆಯಲ್ಲಿ ನಾವು ಏನು ನೋಡುತ್ತೇವೆ ಎಂದರೆ ಒಂದು ಆಷಾಢಭೂತಿ ಗಾಂಧಿವಾದ, ನಕಲಿ ಸಮಾಜವಾದ ಇವೆರಡೂ ನಮ್ಮ ಇಂದಿನ ಕುತ್ತಾಗಿವೆ. ಈ ಕಡೆ ಖಾದಿಗಾಗಿ ಒಂದು ಬೋರ್ಡನ್ನು ಸೃಷ್ಟಿಮಾಡಿ ಅದನ್ನು ಸಾರ್ವಜನಿಕ ಹಣದಿಂದ ನಡೆಸಿಕೊಂಡು ಹೋಗಬೇಕು. ಖಾದಿ ಹಾಕತಕ್ಕವರಿಗೆ ರೀಬೇಟು ಕೊಡಬೇಕು. ಆ ಕಡೆ M.S.K. Mills ಗಾಗಿ ಲಕ್ಷಗಟ್ಟಲೆ ದುಡ್ಡು ಕೊಡಬೇಕು ಅದನ್ನು ನಡೆಸಬೇಕು. ಹೀಗೆ ಸರಕಾರದ ಹಣ ಕೊಟ್ಟು ದೇಶದಲ್ಲಿ ಕೈಗಾರಿಕೆ ನಡೆಸುತ್ತಿದ್ದರೆ ಇದು ಹೇಗೆ ನಡೆಯಬೇಕು? ಇದು ಎಲ್ಲಿಗೆ ಹೋಗುತ್ತದೆ? ಇದರ ಕಡೆ ಲಕ್ಷ್ಯ ವಿಟ್ಟು ಇನ್ನೂ ನಿರ್ಣಯಮಾಡದೇ ಇರತಕ್ಕ ವಿಷಯ. ಈ ಒಂದು ಸಮಸ್ಯೆ ಇವೊತ್ತು ನಮ್ಮನ್ನು ತೀರಾ ಕಳವಳ ಸ್ಥಿತಿಗೆ ಈಡುಮಾಡುತ್ತಿದೆ. ಶ್ರೀಮತಿ ಷಾರವರು ಶ್ರೀಮಾನ್ ಜತ್ತಿಯವರ ಆಯ ವ್ಯಯ ಪಟ್ಟಿಯನ್ನು ಅಭಿವಂದಿಸುತ್ತಾರೆಂದು ಇವರು ಮೆಚ್ಚಿಕೊಳ್ಳಬಹುದು. ಆದರೆ ಕಣ್ಣಿರತಕ್ಕವರು ವಿಚಾರ ಮಾಡುವಾಗ ಈ ತೆರಿಗೆಗಳ ಪರಿಣಾಮ ಅರ್ಥ ಮಾಡಿಕೊಳ್ಳತಕ್ಕಂತಹವರು ಯಾರಾದರೂ ಅಭಿವಂದನೆ ಮಾಡುವ ಒಂದು ಆಯುವ್ಯಯ ಎಂದರೆ ಇದು ಎಷ್ಟು ಸಮರಸ ಎನ್ನುವುದನ್ನು ವಿಚಾರ ಮಾಡಬಹುದು.

ಶ್ರೀ ಬಿ. ಡಿ. ಜತ್ತಿ.—ಅಭಿವಂದನೆಯ ಮಾತನ್ನು ಯೋಚಿಸಲು ಯಾರಿಗೂ ಗೊತ್ತಿಲ್ಲದೆ ಹೋದರೆ ಇನ್ನೊಬ್ಬರಿಗೆ ಕಲಿಸುವುದಕ್ಕೂ ಆಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಆಲೋಚನೆ ಒಳ್ಳೆಯದು ತಾವು. ಅಭಿವಂದನೆಗೆ ಅರ್ಹರು ಎಂದು ಅವರು ಹೇಳುತ್ತಾರೆ. ತಾವು ಅದನ್ನು ನಂಬಿಕೊಂಡು ಇರುವುದು ಒಳ್ಳೆಯದು. ಅಂತಹವರಿಂದ ಅಭಿವಂದನೆ ಬರಬೇಕು, ಅದನ್ನು ಒಪ್ಪಿಕೊಂಡು ಸರಕಾರವನ್ನು ನಡೆಸಿಕೊಂಡು ಹೋಗಬಹುದು.

ಇನ್ನು ಬೆಲೆಗಳನ್ನು ಸ್ಥಿಮಿತದಲ್ಲಿ ಇಡುತ್ತೇವೆಂದು ಇಲ್ಲಿ ದೊಡ್ಡದಾಗಿ ಹೇಳಿದರು. ಇದು ಒಂದು ದೊಡ್ಡ ಸುಳ್ಳು. ಬತ್ತ ಮತ್ತಿತರ ಆಹಾರ ಧಾನ್ಯಗಳನ್ನು ಕೊಳ್ಳುವ ಗತಿಯನ್ನು ಸಂಕ್ಷೇಪವಾಗಿ ಇಲ್ಲಿ ಹೇಳುತ್ತೇವೆ. ಹಿಂದೆ ಶ್ರೀಮಾನ್ ಎ. ಪಿ. ಜೈನ್‌ರವರು ಆಹಾರಧಾನ್ಯದ ಮಂತ್ರಿಗಳಾಗಿ ಕೇಂದ್ರ ಸರಕಾರದಲ್ಲಿದ್ದರು. ಅವರು ರಾಜ್ಯವೇ ವ್ಯಾಪಾರ ಕೈಗೊಳ್ಳುವುದೆಂದು ದೇಶಾದ್ಯಂತ ಸಾರಿದರು. ಆದರೆ, ಅವರ ನೀತಿಯು ವಿಫಲವಾಯಿತು. ಅವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಕೊಡಬೇಕಾಗಿ ಬಂತು. ಅವರಿಗೆ ಅಲ್ಲಿ ಬೆಲೆ ಇರಲಿಲ್ಲ. ಅವರು ಲಾಯಕ್ಕಾದವರಾಗಿರಲಿಲ್ಲ. ತತ್ವವೇ ತಲೆಕೆಳಗಾಯಿತು. ಇದಾದ ಮೇಲೆ ಮಾನ್ಯ ಸಚಿವರಾದ ಕೃಷ್ಣಪ್ಪನವರು ಬೆಲೆ ಹತೋಟಿ ಬೇಕು, ಆದರೆ ಈ ಹತೋಟಿ ಕೆಲಸ ರಾಜ್ಯಕ್ಕೆ ಸಂಬಂಧಪಟ್ಟಿದ್ದಲ್ಲ. ಕೇಂದ್ರ ಸರಕಾರದವರು ಮಾಡ ಬೇಕಾದದ್ದು ಎಂದು ಹೇಳಿದರೆ ಯಾವ ರೀತಿ ಹತೋಟಿಯನ್ನು ಮಾಡುವುದಕ್ಕೆ ಸಾಧ್ಯ ಎಂದು ಇನ್ನೊಂದು ಕಡೆಯಿಂದ ಹೇಳುತ್ತಾರೆ. ಹೀಗೆ ಏಕೆ ಈ ರಾಜ್ಯ ಸರಕಾರಕ್ಕೆ ಈ option ಕೊಡಬೇಕಾಗಿತ್ತು? ಇದನ್ನು ಕೊಡಬೇಕಾಗಿಲ್ಲ ಎಂದು ಹೇಳಿದರು. ಮೈಸೂರು ಸರಕಾರ ಸರ್‌ಪ್ಲಸ್‌ನಲ್ಲಿದ್ದೇವೆ. ಆಹಾರ ಧಾನ್ಯಗಳ ಅಭಾವವಿಲ್ಲ. ಆ ಪ್ರಕರಣ ಬಂದಾಗ ತೆಗೆದುಕೊಳ್ಳುತ್ತೇವೆ ಎಂದರೆ ತೆಗೆದು ಕೊಳ್ಳುವುದಕ್ಕೆ ಎಷ್ಟು ಸಮಯಬೇಕು? ಐವತ್ತು ಸಾವಿರ ಪಲ್ಲದಷ್ಟು ಬತ್ತವನ್ನು ಈಗಾಗಲೇ ಕೊಂಡಿದ್ದೇವೆಂದು ಹೇಳಿದರು. ಇವರು ಕೊಳ್ಳುತ್ತಿರುವುದು ಯಾವಾಗ ಎಂದರೆ ಭತ್ತದ ಬೆಳೆಯೆಲ್ಲಾ ಆಗಿ ಸುಗ್ಗಿ ಕಟಾವು ಆದ ಮೇಲೆ ಬತ್ತ ಮತ್ತು ಬೆಳೆಯುವವರ ಕೈಬಿಟ್ಟ ಮೇಲೆ ಕೊಳ್ಳುತ್ತಿರುವುದು. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ, ಹೆಚ್ಚು ಬೆಳೆಯುತ್ತಾರೆ. ಅವರೇ ಹೇಳುವ ಪ್ರಕಾರ ಶೇಕಡಾ ಹದಿನೈದರಷ್ಟು ಎಂದರೆ ಸುಮಾರು ಹದಿನೈದು ಲಕ್ಷ ಪಲ್ಲದಷ್ಟು ಬೆಳೆ ಹೊರಕ್ಕೆ ಈ ವರ್ಷ ಹೋಗ ಬಹುದು. ಇಂತಹದರಲ್ಲಿ ಎರಡು ಕೋಟಿ ರೂಪಾಯಿಗಳಷ್ಟು ಧಾನ್ಯವನ್ನು ಕೊಳ್ಳುತ್ತೇವೆಂದರೆ ಆ ಹಣದಲ್ಲಿ ಎಷ್ಟು ಕೊಳ್ಳಲು ಸಾಧ್ಯ? ನಮ್ಮ ಕಡೆಯಲ್ಲಿ ಸಾಗುವಳಿ ಎಷ್ಟಾಗಿದೆ? ಅರ್ಧವಾಗಿದೆಯೋ ಮಳೆಗಾಲದಲ್ಲಿ ಯಾವ ಯಾವ ಕಟ್ಟೆಗಳು ಒಡೆದಿವೆ? ಇತ್ಯಾದಿ, ಅದರ ಲೆಕ್ಕ ಪತ್ರವನ್ನೇನಾದರೂ ಕೊಟ್ಟಿದ್ದೀರಾ?

ಜನರಿಗೆ ಕೊಂಡುಕೊಳ್ಳುವ ಶಕ್ತಿ ಇಲ್ಲದೇ ಇರುವ ಕಾಲದಲ್ಲಿ ಬೆಲೆ ನಿಯಂತ್ರಣ ಮಾಡಿದ್ದೇವೆಂದು ಹೇಳುವುದರಲ್ಲಿ ಏನು ಅರ್ಥವಿದೆ?

2.30 P.M.

ಇವತ್ತು ಪದಾರ್ಥಗಳ ಬೆಲೆ ಜಾಸ್ತಿಯಾಗಿದೆ. ಒಂದು ಸಿಗರೇಟ್ ಪ್ಯಾಕೆಟ್ಟಿಗೆ ನಾಲ್ಕಾಣೆ ಬೆಲೆ ಜಾಸ್ತಿಯಾಗಿದೆ. ಒಂದು ಸೀಮೆ ಎಣ್ಣೆ ಬಾಟ್ಲಿ, ಒಂದು ಸಾಮಾನ್ಯ ಬಳಕೆ ವಸ್ತುವಿನ ಬೆಲೆ ಏನಾಗಿದೆ ನೋಡಬೇಕು. ಇವುಗಳ ಬೆಲೆ ಏರುವುದನ್ನು ತಡೆಗಟ್ಟಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಸರಕಾರದ ಮುಂದೆ ಒಂದು ಒಳ್ಳೆಯ ಬೆಲೆಯ ನೀತಿಯಿಲ್ಲ. ವ್ಯವಸಾಯಗಾರನು ಬೆಳೆಯುವ ಬೆಳೆಗೆ ಪ್ರತಿವರ್ಷ ಬೆಲೆ ಬಿದ್ದುಹೋಗಿ ಈ ದೇಶದಲ್ಲಿ 200 ಕೋಟಿ ರೂಪಾಯಿಯಷ್ಟು ನಷ್ಟ ಅವರಿಗೆ ಉಂಟಾಗುತ್ತಿದೆ. ರೈತನು ತಾನು ಬೆಳೆದ ಬೆಳೆಯನ್ನು ಮಾರಾಟ ಮಾಡಿದ ಮೇಲೆ ದೊಡ್ಡವರ ಗೋಡೌನ್ ಸೇರಿದ ಮೇಲೆ ಬೆಲೆ ಏರುತ್ತಾ ಹೋಗುತ್ತದೆ. ಮಾರ್ಚಿ ತಿಂಗಳಿನಿಂದ ಆಗಸ್ಟ್ ತಿಂಗಳವರೆಗೆ ಬೆಲೆ ಏರಿದೆ ಎಂದು ಸರಕಾರ ಹೇಳುತ್ತದೆ. ಪ್ರತಿವರ್ಷ ಸುಗ್ಗಿಯ ಕಾಲದಲ್ಲಿ ಬೆಲೆ ಬೀಳುತ್ತದೆ ಮತ್ತು ಮಾರ್ಚಿ, ಆಗಸ್ಟ್‌ನಲ್ಲಿ ಬೆಲೆ ಏರುತ್ತದೆ. ಕೊಂಡುಕೊಳ್ಳುವವರಿಗೆ ಬೆಲೆ ಹೆಚ್ಚು ಕೊಡಬೇಕಾಗುತ್ತದೆ. ಲೋಕಸಭೆಯಲ್ಲಿ ಆಹಾರ ಧಾನ್ಯಗಳ ಬೆಲೆ ಬಿದ್ದುಹೋಗಿದೆ, ಹೆಚ್ಚು ಮಾಡಬೇಕೆಂದು ಕೆಲವು ಸದಸ್ಯರು ಹೇಳಿದರೆ, ಇನ್ನು ಕೆಲವು ಸದಸ್ಯರು ಬೆಲೆ ಹೆಚ್ಚಾಗಿದೆ ಅದನ್ನು ಕಡಿಮೆ ಮಾಡಬೇಕೆಂದು ಹೇಳಿದಾಗ್ಗೆ, ಬೆಲೆ ಸರಿಯಾಗಿದೆ ಸಮವಾಗಿದೆ ಎಂದು ಪಂಡಿತ ನೆಹರು ಅವರು ಹೇಳಿ ನಕ್ಕುಬಿಟ್ಟರು, ಅಲ್ಲಿದ್ದವರೆಲ್ಲರೂ ನಕ್ಕುಬಿಟ್ಟರು. ಜನವರಿ ತಿಂಗಳಿನಲ್ಲಿ whosesale price 126ಕ್ಕೆ ಇದೆ. ಮೂರನೇ ಪಂಚವಾರ್ಷಿಕ ಯೋಜನೆಯ ಮೊದಲನೇ ವರ್ಷದಲ್ಲಿ ಅದು 127.5 ಆಗಿದೆ. ಮಾರ್ಚಿ-ಆಗಸ್ಟ್ 1962ರಲ್ಲಿ ಅದು 6.1 ಪರ್ಸೆಂಟ್ ಹೆಚ್ಚಾಗಿದೆ. ಇದನ್ನು ಅವರ ಲೆಕ್ಕದ ಪ್ರಕಾರ ಹೇಳುತ್ತಿದ್ದೇನೆ. 1963-64ನೇ ಸಾಲಿನಲ್ಲಿ ಕೇಂದ್ರದವರು ಇಟ್ಟಿರುವ ಆಯವ್ಯಯಪಟ್ಟಿಯ ಪರಿಣಾಮವಾಗಿ ಜೀವನದ ವೆಚ್ಚ cost of living ನೂರಕ್ಕೆ 20-25ರಷ್ಟು ಹೆಚ್ಚಾಗಿದೆ. ಸರಕಾರಿ ನೌಕರರಿಗೆ 5-7-10 ರೂಪಾಯಿ ಕೊಡುಗೆಯನ್ನು ಪುನಃ ಕೊಡುತ್ತೇವೆಂದು ಹೇಳಿದಿರಿ, ಈ ಬಜೆಟ್ ಭಾಷಣದ ಪುಸ್ತಕದಲ್ಲಿ ಈ ರೀತಿ ಉದ್ದಕ್ಕೆ ಇದನ್ನು ಪ್ರಕಟಿಸಬಾರ

ದಾಗಿತ್ತು. ಇದಕ್ಕೆ ವಿವರಣೆ ಸಹ ಕೊಟ್ಟಿದ್ದಾರೆ. ಭಾಷಣಮಾಡಿ ಮುಗಿಸಿಬಿಡಬೇಕು ಎಂಬ ಅಭಿಪ್ರಾಯದಿಂದ ಬರೆದಿದ್ದಾರೆಂದು ಕಾಣುತ್ತದೆ. ಒಂದು ರೂಪದಲ್ಲಿ 5 ರೂಪಾಯಿ ಕೊಟ್ಟು ಇನ್ನೊಂದು ಕಡೆ 10 15 ರೂಪಾಯಿ ಕಿತ್ತುಕೊಳ್ಳುತ್ತಿದ್ದಾರೆ. ಇದರಿಂದ ಏನಾಗಿದೆ ಎಂದರೆ ಜೀವನಾವಶ್ಯಕ ವಸ್ತುಗಳ ಬೆಲೆ ಹೆಚ್ಚಾಗಿದೆ. ಆದರೆ ಕೊಂಡುಕೊಳ್ಳುವ ಶಕ್ತಿ ಕಡಿಮೆಯಾಗಿ ಜೀವನ ನಡೆಸುವುದು ಬಹಳ ಕಷ್ಟವಾಗಿದೆ. ವರಮಾನದಲ್ಲಿರುವ ಹೆಚ್ಚು ಕಡಿಮೆಯನ್ನು ಸಮ ಮಾಡುವುದು ಆಗಿಲ್ಲ. 50 ರೂಪಾಯಿ ಸಂಬಳ ಪಡೆಯುವ ಜನ ಇದ್ದಾರೆ. 3000—5000 ರೂಪಾಯಿ ಖರ್ಚು ಮಾಡತಕ್ಕಂಥ ಜನ ಇದ್ದಾರೆ. ಕೆಲವು ಬಿಳಿ ಆನೆಗಳನ್ನು ಸಾಕಿದ್ದೀರಿ. ಈ ಈ ಬಡದೇಶದಲ್ಲಿ ಇಂಥ ಬಿಳಿ ಆನೆ ಸಾಕುವುದು ಸಾಧ್ಯವೇ ? ಒಂದು ವಿಷಯ ಗಮನಕ್ಕೆ ಬರುತ್ತದೆ. ಈ ದೇಶ ಸ್ವತಂತ್ರವಾದ ಮೇಲೆ ರಾಜ್ಯಾಂಗ ಮಾಡಿಕೊಂಡಿದ್ದೇವೆ. ಇದನ್ನು ಆಮೂಲಾಗ್ರ ತಿದ್ದುಪಡಿ ಮಾಡುವ ಕಾಲ ಈಗ ಬಂದಿದೆ. ಚೈನಾ ದಾಳಿಯಿಂದ ಅದು ಇನ್ನೂ ಹೆಚ್ಚಾಗಿ ಬಂದಿದ್ದೆಂದು ಹೇಳಬಹುದು. ಈ ಹದಿನೈದು ವರ್ಷ ರಾಜ್ಯಭಾರ ಮಾಡಿದನಂತರ ರಾಜ್ಯಾಂಗ ತಿದ್ದುಪಡಿ ಮಾಡುವ ಆವಶ್ಯಕತೆಯುಂಟಾಗಿದೆ. ಕೆಲವು ಪ್ರಗತಿ ಪರವಾದ ಕಾನೂನುಗಳನ್ನು ಜಾರಿಗೆ ತರಲು ನಿಮಗೆ ಸಾಧ್ಯವಾಗಿಲ್ಲ. ತೀವ್ರಗತಿಯ ಹೆಜ್ಜೆ ಇಡಲು ನಿಮಗೆ ಅಡ್ಡಿಯಾಗಿದೆ. ಉದಾಹರಣೆಗಾಗಿ ಒಂದು ವಿಷಯ ಹೇಳಬಹುದು. ಗವರ್ನರ ಪದವಿಯು ಇರಬೇಕೇ ಇಡಬೇಡವೇ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗಿದೆ. ಒಂದು ವೇಳೆ ಇರುವದಾದರೆ ಅದು ಹೇಗೆ ಇರಬೇಕು ? ಲೆಜಿಸ್ಲೇಟಿವ್ ಕೌನ್ಸಿಲ್ ಇರಬೇಕೇ, ಬೇಡವೇ ಎನ್ನುವ ವಿಷಯ ಇದೆ.

Mr. SPEAKER.—The Governorship is provided under the Constitution. It is not under the budget. If the Hon. Member has any other point, let him come to it.

ಶ್ರೀ ಎಸ್. ಗೋಪಾಲಗೌಡ.—ಈ ಸಲಹೆ ಅನೇಕ ಸಲ ಕೊಟ್ಟಿದ್ದೀರಿ. ಏಕೆ ಈ ಸಲಹೆ ಕೊಡುತ್ತೀರೋ ನನಗೆ ಅರ್ಥವಾಗಿಲ್ಲ.

Mr. SPEAKER.—I call upon Srimati Nagaratnama Hiremath to speak. Sri Gopala Gowda shall resume his seat. ಅದು ನನ್ನ ತಪ್ಪು ಅಲ್ಲ. ಸಲಹೆ ಕೊಡುವುದು ಬೇಡ ಅಂದರೆ ನಾನು ಕೊಡುವದಿಲ್ಲ. ಮಾತನಾಡುವ ಟೈಂ ಆದ ಮೇಲೆ ಬೆಲ್ ಹೊಡೆಯುತ್ತೇನೆ. ಸದಸ್ಯರು ಸುಮ್ಮನೆ ಕುಳಿತುಕೊಳ್ಳಬೇಕು.

ಶ್ರೀ ಎಸ್. ಗೋಪಾಲಗೌಡ.—ಅದು ಸಾಧ್ಯವಿಲ್ಲ.

Mr. SPEAKER.—please sit down.

ಶ್ರೀ ಎಸ್. ಗೋಪಾಲಗೌಡ.—ಈ ವಿಷಯಕ್ಕೆ ತಾವು ದಯವಿಟ್ಟು ಉತ್ತರ ಕೊಡಬೇಕು.

Mr. SPEAKER.—please sit down.

ಶ್ರೀ ಎಸ್. ಗೋಪಾಲಗೌಡ.—ಅದು ಸಾಧ್ಯವಿಲ್ಲ.

Mr. SPEAKER (Addressing Sri Gopala Gowda).—I ask him to obey the Chair. I am on my legs. He must obey the Chair. Either under the rules or under my direction, he is bound to sit down. What does he mean by saying that he cannot ? If he says that again I will call upon him to apologise to the House.

ಶ್ರೀ ಎಸ್. ಗೋಪಾಲಗೌಡ.—ದಯವಿಟ್ಟು ಇದರ ವಿವರಣೆ ಕೊಡಿ.

Mr. SPEAKER.—Without obeying, without following the rules, he is calling upon me to explain. Please do not do that again. Now Srimati Hiremath will speak.

ಶ್ರೀ ಎಸ್. ಗೋಪಾಲಗೌಡ.—ದಯವಿಟ್ಟು ಇದಕ್ಕೆ ವಿವರಣೆ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

Mr. SPEAKER.—I am again on my legs. Will he resume his seat or not ? He will not get up again till I call upon him. Let him not get up again unless I call upon him. I ask Sri Gopala Gowda not to get up for the rest of the day. Now Srimati Hiremath will speak.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ಸಭೆಯಲ್ಲಿ ಏನು ಕಾರ್ಯಕಲಾಪ ನಡೆಯುತ್ತದೆ ಎನ್ನುವುದನ್ನು ಎಲ್ಲರೂ ಗಮನಿಸಬೇಕಾಗುತ್ತದೆ. ಸದಸ್ಯರು ಕೂತುಕೊಳ್ಳಬೇಕು, ಮಾತನಾಡುವುದನ್ನು ಮುಂದುವರಿಸುವುದು ಬೇಡ ಎಂದು ಹೇಳುವುದಕ್ಕೆ ಇಷ್ಟೊಂದು ಉದ್ರಿಕ್ತವಾಗಿ ಹೇಳುವುದು ಏಕೆ ? ಮಾತನಾಡುವುದಕ್ಕೆ ಅವಕಾಶ ಕೊಡಬಹುದು ಅಥವಾ ಕೊಡದೇ ಇರಬಹುದು. ಮನಸ್ಸನ್ನು ಸಮಾಧಾನವಾಗಿಟ್ಟುಕೊಂಡು ಹೇಳಬಹುದು. ಇಷ್ಟು ಉದ್ರಿಕ್ತವಾಗಿ ಹೇಳುವದಾದರೆ ಈ ಸಭೆಯಲ್ಲಿ ಕಾರ್ಯಕಲಾಪ ಹೇಗೆ ನಡೆಯುವುದು ? ತಾವು ವಯಸ್ಸಾದ ಹಿರಿಯರು ತಮಗೆ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬಹಳ ವಿನಯದಿಂದ ಅಪೀಲು ಮಾಡಿಕೊಳ್ಳುತ್ತೇನೆ. ನಾವು ಸದಸ್ಯರು, ತಪ್ಪು ಮಾಡಿದರೆ ಅದನ್ನು ನುಂಗಿಕೊಳ್ಳಬೇಕು. ನಮಗೆ ಅನೇಕ ವಿಷಯ ತಿಳಿಯದು. ತಮ್ಮ ಕಾಲಾವಧಿಯಲ್ಲಿ ನಮ್ಮನ್ನು ತಯಾರು ಮಾಡಬೇಕಾಗಿದೆ. ತಮ್ಮ ಅವಧಿಯಲ್ಲಿ ಇಷ್ಟು ಜನ ಸದಸ್ಯರು ಒಳ್ಳೇ ರೀತಿಯಿಂದ ತಯಾರಾಗಿದ್ದಾರೆಂದು ಮುಂದೆ ನಾವು ಹೆಮ್ಮೆಯಿಂದ ಹೇಳಬಹುದು. ಶ್ರೀ ಗೋಪಾಲಗೌಡರು ಮಾತನಾಡುವಾಗ್ಗೆ ಸಭಾಪತಿಯವರ ಬಗ್ಗೆ ಚೇರ್ ಬಗ್ಗೆ ಯಾವ ರೀತಿಯ ಇನ್‌ಸಿನ್ಯುಯೇಷನ್ ಅಗೌರವ ಇರಲಿಲ್ಲ. ಅವರು ಭಾಷಣವನ್ನು ಕನ್‌ಕ್ಲೂಡ್ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾವು ಯಾವ ಮಟ್ಟದಲ್ಲಿದ್ದೇವೆ ಎಂಬುದನ್ನು ಅರಿತುಕೊಂಡಿದ್ದೇವೆ. ತಾವು ಹೇಳಿದ ಹಾಗೆ ನಡೆದುಕೊಳ್ಳುವುದಕ್ಕೆ ತಯಾರು ಇದ್ದೇವೆ. ಅವರಿಗೆ ಈಗ ಭಾಷಣ ಮುಗಿಸುವದಕ್ಕೆ ಅವಕಾಶ ಕೊಡಬೇಕು, ಇಷ್ಟೇ ನನ್ನ ಪ್ರಾರ್ಥನೆ.

MR. SPEAKER.—Please do not make the Position worse. Now, I am very happy that Sri Muckannappa has come forward with his observations and the House knows what transpired. I gave him more than one warning that he should conclude. I also gave two minutes ; after that he began to talk on points other than the Budget and Sri V. S. Patil raised a point of Order more than once, and how am I to enforce the rule if no respect is given to the Chair and if he persists the saying "I won't sit down."

Sri C. J. MUCKANNAPPA.—He did not say.

Mr. SPEAKER.—Either you were absent minded or it has faded out of your mind.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ವಿಷಯ ನನಗೆ ಗೊತ್ತಿಲ್ಲ.

Mr. SPEAKER.—If you take it from me, I will always cherish the highest respect, If any Member says : "I won't sit down" after getting an opportunity, it will not be fair I have not taken more drastic steps. Even when the time is over, I never call upon them to sit immediately. I give them two minutes more. I may say that I always give sufficient opportunity to every member. Why do I do it ? Is it because I want to enforce rules or is it because that I want to raise the level of the debate ? If Sri Gopala Gowda feels that he has been denied the chance, that is not the way for him to refuse to sit down. I even now give him 5 minutes.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ತಾವು ಶ್ರೀ ಗೋಪಾಲಗೌಡರು

(SRI K. LAKKAPPA rose)

Mr. SPEAKER.—What does he want ?

ಶ್ರೀ ಕೆ. ಲಕ್ಕಪ್ಪ.—ತಮಗೆ ಅಧಿಕಾರವಿದೆ. I want a clarification.

Sri C. J. MUCKANNAPPA.—You have conceded the request of the Hon'ble Member. There is no use in simply beating a dead Horse.

Mr. SPEAKER.—I am not giving clarification. What do you mean by it ?

Sri K. LAKKAPPA.—I have no Point of Order.

Mr. SPEAKER.—Then please sit down.

Sri K. LAKKAPPA.—I want a clarification.

Mr. SPEAKER.—This is not the time for speaking clarification. I call upon you to sit down, and if the Member cannot be controlled by the Leader, I know how to deal with him.

ಶ್ರೀ ಕೆ. ಲಕ್ಕಪ್ಪ.—ಏನು, ಸ್ವಾಮಿ......

Mr. SPEAKER.—I know how to deal. What is that ?

Sri K. LAKKAPPA.—I want you to give a clarification.

Mr. SPEAKER.—I call upon Sri Lakkappa to sit down. This has become a habit for certain members to make remarks. I cannot allow a running commentary. I warn you now. Hereafter, if you repeat it, it will not be dignified.

Sri K. LAKKAPPA.—We are obeying the Chair always.

Mr. SPEAKER.—This is how you obey the Chair.

ಶ್ರೀ ಕೆ. ಲಕ್ಕಪ್ಪ.—ಕುಳಿತುಕೊಳ್ಳುತ್ತಾ ಇದ್ದೇನೆ ಸ್ವಾಮಿ.

ಶ್ರೀ ಎಸ್. ಗೋಪಾಲಗೌಡ.—ಗವರ್ನರ್ ಇನ್‌ಸ್ಟಿಟ್ಯೂಷನ್ ಏನಿದೆ ಇದರ ಅವಶ್ಯಕತೆಯನ್ನು ಪರಿಶೀಲನೆಮಾಡಿ, ರಾಜ್ಯಾಂಗವನ್ನು ಸೂಕ್ತವಾಗಿ ತಿದ್ದುಪಡಿ ಮಾಡುವುದು ಒಳ್ಳೆಯದು ಅಂತ ಹೇಳುತ್ತಾ ಇದ್ದೆ. ಹಾಗೇನೇ ಕೌನ್ಸಿಲ್‌ಗಳನ್ನು ಕೂಡ ರದ್ದುಮಾಡುವುದರ ಅವಶ್ಯಕತೆ ಏನಿದೆ ಅದನ್ನೂ ಹಾಗೆಯೇ...

Mr. SPEAKER.—Are you developing a new point ? From the Governor you are going to the Council. Sri Muckannappa requested the Chair to give you time for concluding that idea. But you are developing a new point from Governor to the Council.

ಶ್ರೀ ಎಸ್. ಗೋಪಾಲ ಗೌಡ.—ಇಲ್ಲ. ಐದು ನಿಮಿಷಗಳನ್ನು ಕೊಟ್ಟಿದ್ದೀರಿ. ನನಗೆ ಬಹಳ ಸಂತೋಷ ಮತ್ತು ಶಿಕ್ಷೆಯನ್ನು ಬಹುಶಃ ರದ್ದು ಮಾಡಿದ್ದೀವೆಂದು ತಿಳಿದುಕೊಂಡಿದ್ದೇನೆ.

Mr. SPEAKER.—I am not going to punish you. If you feel that it is a proper idea, you are entitled to entertain it. I have not entertained any such idea uptill now. You are putting that idea in my mind. Please don't do that.

ಶ್ರೀ ಎಸ್. ಗೋಪಾಲಗೌಡ.—ಈಗ ತಾವು, ಗವರ್ನರ ವಿಷಯದಲ್ಲಿ ನಾವು ಚರ್ಚೆ ಮಾಡಬಹುದೇ, ಬೇಡವೇ ? ಅವರು ಇರಬೇಕೇ, ಬೇಡವೇ ? ಎಂದು ಹೇಳುವುದಕ್ಕೆ ಅವಕಾಶವಿದೆಯೇ, ಇಲ್ಲವೇ ? ಎನ್ನುವುದನ್ನು ತಿಳಿಸಬೇಕು.

Mr. SPEAKER.—On the Budget, you have no right to say that the Constitution should be amended. ರಿಲೆವೆನ್ಸಿ ಇದ್ದರೆ ಮಾತನಾಡಬಹುದು, irrelevant ಇದ್ದರೆ ಮಾತನಾಡಬಾರದು.

ಶ್ರೀ ಎಸ್. ಗೋಪಾಲಗೌಡ.—Charged Amount ಏನಿದೆ ಅದರ ಬಗ್ಗೆ ಚರ್ಚೆಮಾಡಿದ ಹೊರತು ನಾವು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೇನೆ; ಈ ಸಭೆಗೆ ಹಕ್ಕು ಇಲ್ಲ ಎಂದು ತಿಳಿದುಕೊಂಡಿದ್ದೇನೆ. ನಾನು ವಕೀಲನಲ್ಲ, ನಾನು ಅಷ್ಟು Constitution ಓದಿದವನಲ್ಲ, ಅಷ್ಟು ತಿಳುವಳಿಕೆ ಇಲ್ಲ. ನಾನು ಸ್ವಲ್ಪಮಟ್ಟಿಗೆ ತಿಳಿದುಕೊಂಡಹಾಗೆ ಚರ್ಚೆ ಮಾಡಬಹುದು, ಸಲಹೆ ಕೊಡಬಹುದು. ಯಾವುದರ ಬಗ್ಗೆ ಹಣ ಕೊಡುತ್ತೇವೆಯೋ ಅದರ ಮೇಲೆ ಹೇಳಬಹುದೆಂದು ತಿಳಿದುಕೊಂಡಿದ್ದೇನೆ. ತಮ್ಮ ಅಭಿಪ್ರಾಯವನ್ನು ಸ್ಪಷ್ಟಮಾಡಿಟ್ಟರೆ, ಮುಂದೆ ಅನುಕೂಲವಾಗುತ್ತದೆಂದು ಕೇಳಿಕೊಂಡು ನನ್ನ ಮಾತು ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ಮಾನ್ಯ ಸಭಾಪತಿಗಳೇ, ಆರ್ಥಿಕ ಮಂತ್ರಿಗಳು ಮಂಡಿಸಿರುವ ಆಯವ್ಯಯ ವರದಿಯನ್ನು ಅನುಮೋದಿಸುತ್ತಾ ತಮ್ಮ ಮೂಲಕ ಒಂದೆರಡು ವಿಷಯಗಳನ್ನು ಹೇಳಬೇಕೆಂದು ಮಾಡಿದ್ದೇನೆ.

ಆರ್ಥಿಕ ಮಂತ್ರಿಗಳು ಮಂಡಿಸಿರುವ ಆಯವ್ಯಯ ವರದಿಯು, ಏನೋ ಒಂದು ವಿಧವಾದ ನಿಸ್ತೇಜತೆ, ಏನೋ ಒಂದು ವಿಧವಾದ ಸಂಕೋಚ, ಏನೋ ಒಂದು ವಿಧವಾದ ಅನಿರ್ದಿಷ್ಟತೆ, ಏನೋ ಒಂದು ವಿಧವಾದ ಕಳವಳ, ಏನೋ ಒಂದು ವಿಧವಾದ ಆಶಾಭಾವನೆಗಳಿಂದ ಕೂಡಿರುವಂತೆ ಕಂಡು ಬರುತ್ತಿದೆ. ರಾಷ್ಟ್ರದಲ್ಲಿರುವ ಸದ್ಯದ ತುರ್ತುಪರಿಸ್ಥಿತಿಯಿಂದ ಆಯವ್ಯಯವು ಉಬ್ಬರವಿಳಿತಕ್ಕೆ ಒಳಗಾಗಬಹುದಾದ್ದರಿಂದ ಅನಿರ್ದಿಷ್ಟತೆಯ ವರದಿ ಮಂಡಿಸಿರಬಹುದೆಂದು ಭಾವಿಸಿದ್ದೇನೆ. ಅಂತೆಯೇ ಆರ್ಥಿಕ ಮಂತ್ರಿಗಳಿಗೆ ನನ್ನ ಸಹಾನುಭೂತಿಯುಂಟು. ತಾತ್ಕಾಲಿಕವಾಗಿ 40 ಲಕ್ಷ ರೂಪಾಯಿಗಳ ಖೋತಾ ಕಂಡುಬಂದರೂ ಮುಂದಿನ ವರ್ಷದೊಳಗಾಗಿ 5 ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಕೊರತೆ ಬೀಳಬಹುದೆಂಬ ವಾಸ್ತವಿಕಾಂಶವನ್ನು ಒಪ್ಪಿಕೊಂಡಿರುವ ಆರ್ಥಿಕ ಮಂತ್ರಿಗಳ ಪ್ರಾಮಾಣಿಕತೆ ಮೆಚ್ಚತಕ್ಕದ್ದಾಗಿದೆ. ನಾಡಿನಲ್ಲಿ ಸಾಧಿಸಿರುವ, ಸಾಧಿಸಲಿರುವ ನಾನಾ ಯೋಜನೆಗಳ ಕಾರ್ಯಕ್ರಮಗಳ ಬಗ್ಗೆ, ಖಾತೆ ಖಾತೆಗಳ ವ್ಯವಹಾರವನ್ನು ಪಕ್ಷಿನೋಟದಿಂದ ನೋಡಿ, ಪಕ್ಷಿನೋಟದ ವರದಿಯನ್ನು ಮಂಡಿಸಿದ್ದಾರೆ. ತುರ್ತುಪರಿಸ್ಥಿತಿಯ ದೆಸೆಯಿಂದ ನಾವೂ ಸಹ ಪಕ್ಷಿನೋಟದಿಂದಲೇ ವಿಮರ್ಶಿಸಿ ಅಸ್ತು ಅನ್ನಬೇಕಾಗಿದೆ.

ಪ್ರತ್ಯಕ್ಷ ತೆರಿಗೆ ಸಧ್ಯಕ್ಕೆ ಇಲ್ಲದಿದ್ದರೂ ವಿಧೇಯಕಗಳ ಮೂಲಕ ಸಭೆಯ ಒಪ್ಪಿಗೆಗೆ ಇಡಬೇಕಾದೀತೆಂದು ಆರ್ಥಿಕ ಮಂತ್ರಿಗಳು ತಿಳಿಸಿದ್ದಾರೆ. ಚಿಂತೆ ಇಲ್ಲ, ಇಡಲಿ, ಅವಶ್ಯವಿದ್ದಲ್ಲಿ ತೆರಿಗೆಗಳನ್ನು ಹಾಕಲಿ, ಆದರೆ ಒಂದು ಸಂದೇಹ ಮಾತ್ರ ಜನತೆಗಿದೆ. ನಾವು ಕೊಟ್ಟ ಹಣ ಅಪವ್ಯಯವಾಗಬಾರದು. ರಾಷ್ಟ್ರದ ಆದಾಯ ಕೆಲವು ಬುದ್ಧಿವಂತರ, ಕೆಲವು ಲೂಟಿಗಾರರ, ಕೆಲವು ಕಾರ್ಯಪಾಸಿಗಳ ಮೂಲಕ ದುರುಪಯೋಗವಾಗಬಾರದು. ಲಂಚಾಚಾರ, ವಂಚಾಚಾರ, ಸ್ವಾರ್ಥಾಚಾರ, ಭ್ರಷ್ಟಾಚಾರಗಳಿಗೆ ರಾಷ್ಟ್ರಾದಾಯ ಸಲ್ಲಬಾರದು ಎಂದು ಜನತೆ ಅಪೇಕ್ಷಿಸುವುದು ಸ್ವಾಭಾವಿಕವಾಗಿದೆ.

ಸತ್ಯಾಚಾರದಿಂದ ನಡೆಯುವ ಸರ್ಕಾರ ಇದೆ ಎಂಬ ಭರವಸೆಯು ಬಂದಲ್ಲಿ ಜನತೆ ತೆರಿಗೆಗಳನ್ನು ಸ್ವಯಂಪ್ರೇರಿತರಾಗಿ ಕೊಡಬಲ್ಲರು. ತುರ್ತು ಪರಿಸ್ಥಿತಿಯು ಸರ್ಕಾರದ ಸತ್ವಪರೀಕ್ಷೆಯ ಕಾಲವಾದ್ದರಿಂದ ನಾನು ಸರ್ಕಾರದವರಲ್ಲಿ ಸೂಚಿಸುವುದಿಷ್ಟೇ ;

ಟೀಕೆಗಳನ್ನು ಅರ್ಥಮಾಡಿಕೊಂಡು, ಸಮಸ್ಯೆಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದಲ್ಲಿ ಆಡಳಿತ ಸುಗಮವಾಗಬಲ್ಲದು. A mistake which is not examined becomes a misfortune. ತಿದ್ದಿಕೊಳ್ಳದ ತಪ್ಪು ತಾಪತ್ರಯ ತರುತ್ತದೆ ಎಂಬುದನ್ನು ಆಡಳಿತ ವರ್ಗ ಗಮನಿಸುತ್ತಾರೆಂದು ನಂಬಿದ್ದೇನೆ. ಹಾಗೂ ನಿಮ್ಮ ಬುದ್ಧಿಯು ನಿಮ್ಮ ಹಿಡಿತದಲ್ಲಿರಲು । ನೀವೇ ನಿಜ ಸಚಿವರನುಮಾನವಿಲ್ಲ । ನೀವು ನೀವೆರಡಾಗಿ ನಿಮ್ಮೊಳಗೆ ಜಗಳಾಡಿ । ನಿಮ್ಮತನ ಗೆದ್ದಾಗ ನಿಮಗೆ ಸಮವಿಲ್ಲ ॥ ಎಂಬ ಹಿತವಾಕ್ಯವನ್ನು ನಮ್ಮ ಅಭಿಮಾನದ ಸಚಿವರಿಗೆ ಅಭಿಮಾನ ಪೂರ್ವಕ ಜ್ಞಾಪಿಸಿ ಕೊಡುತ್ತೇನೆ.

ಇನ್ನು ಕೃಷ್ಣ, ಗೋದಾವರಿ ನದಿ ನೀರಿನ ಹಂಚಿಕೆ ಬಗ್ಗೆ ನಮ್ಮ ಮುಖ್ಯಮಂತ್ರಿಗಳು ವಿಧಾನ ಸಭೆಯಲ್ಲಿ ಕೊಟ್ಟಿರುವ ವಿವೇಕ ಪೂರ್ಣ ಗಂಭೀರ ಹೇಳಿಕೆಯನ್ನು ಶ್ಲಾಘಿಸುತ್ತೇನೆ. ಅಂದಮೇಲೆ, ಈ ಬಗ್ಗೆ ವಿಮರ್ಶೆ ಬೇಕಾಗಿಲ್ಲ. ಆದರೆ ರವೆಲುಂಡೆಗೆ ಕ್ಷಯ ಬಂದಂತೆ ನದಿ ನೀರಿಗೂ ಕ್ಷಯ ಬಂದೀತೇನೋ ಎಂಬ ಒಂದು ಸಂದೇಹ ನನಗುಂಟು. ಈ ನದಿ ನೀರಿನ ಮಾತುಕತೆಗಳು ಸಂಬಂಧಪಟ್ಟವರೊಂದಿಗೆ ನಡೆಯುತ್ತಿರುವಾಗಲೇ ನಾಗಾರ್ಜುನ ಸಾಗರ, ಶ್ರೀಶೈಲಂ ಯೋಜನೆಗಳು ಒಳಗೊಳಗೇ ನೀರನ್ನು ನುಂಗುತ್ತಾ ಹೋದರೆ ನೀರಿಗೆ ಕ್ಷಯ ಬಂದೇಬರುತ್ತದೆ. ಅಲ್ಲದೆ ಆಂಧ್ರದ ಮುಖ್ಯಮಂತ್ರಿಗಳು ನದಿ ನೀರಿನ ಬಗ್ಗೆ ಸದ್ದಿಲ್ಲದೆ, ಗದ್ದಲವಿಲ್ಲದೆ ಕೆಲಸ ಮಾಡುತ್ತಾರೆಂದು ಹೇಳಿದ್ದಾಗಿ ಕೆಲವು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ನಿಜವಿದ್ದರೆ ನೀವೂ ಸಹ ಮೂಕರಂತೆ ಕೈಸನ್ನೆ, ಕಣ್ಣುಸನ್ನೆಗಳಿಂದಲೇ ಕೆಲಸ ಸಾಧಿಸಿದರೆ ತಪ್ಪಾಗಲಾರದು.

ನದೀ ನೀರಿನ ಬಗ್ಗೆ ಇಲ್ಲಸಲ್ಲದ ಗೊಂದಲವನ್ನುಂಟು ಮಾಡುತ್ತಿರುವ ಕೆಲವು ಸ್ವಹಿತಾಸಕ್ತಿ ವ್ಯಕ್ತಿಗಳ ಕಡೆ ಇಲ್ಲಸಲ್ಲದ ವರದಿ ಕೊಡಬಹುದಾದ ನಮ್ಮ ಲೋಕೋಪಯೋಗಿ ಶಾಖೆಯ ಕೆಲವು ಅಧಿಕಾರಿಗಳ ಬಗ್ಗೆ ಸರ್ಕಾರ ಗಮನವಿಟ್ಟಿರಬೇಕು. ಏಕೆಂದರೆ, ಇಂಥಹವರು ದೇಶದ ಒಳ ಶತ್ರುಗಳಾದ್ದರಿಂದ ಇಂತಹ ವಿಚಾರಗಳನ್ನು ಎಚ್ಚರಿಕೆಯಿಂದ ಗಮನಿಸಬೇಕೆಂದು ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ.

ಸರ್ಕಾರದ ಯೋಜನೆಗಳೇನೋ ಹಿರಿದಾಗಿಯೇ ಇವೆ. ಆದರೆ, ಖಜಾನೆ ಬರಿದಾಗಿದೆ. ರಾಷ್ಟ್ರದ ಮೀಸಲು ಹಣ ಕರಗಿಹೋಗಿದೆ. ಸಾಲವೂ ಕೋಟ್ಯಾಂತರ—ಬಡ್ಡಿಯೂ ಕೋಟಿಗಟ್ಟಳೆ ಸಲ್ಲಿಸ

ಬೇಕಾಗಿದೆ. ಸರ್ಕಾರ ಕೊಟ್ಟಿರುವ ಸಾಲ ವಸೂಲಾಗುವಂತಿಲ್ಲ. ಐವತ್ತೇಳು ಕೋಟಿ ರೂಪಾಯಿ ಸಾಲ ವಸೂಲಾಗದೇ ನಿಂತಿರುವುದನ್ನು ನೋಡಿದರೆ ''ಕೊಟ್ಟವನು ಕೋಡಂಗಿ, ತೆಗೆದುಕೊಂಡವನು ವೀರಭದ್ರ''ನಂತಾಗಿದೆ. ಈ ಸಾಲಿನಲ್ಲಿ 5-6 ಕೋಟಿ ವಸೂಲಾಗುವ ನಿರೀಕ್ಷಣೆ ಇದೆ ಎಂದು ಆರ್ಥಿಕ ಮಂತ್ರಿಗಳು ಹೇಳಿದ್ದಾರೆ. ವಸೂಲು ಮಾಡುವುದರಲ್ಲಾದರೂ ಸರ್ಕಾರ ವೀರಭದ್ರನಂತಾದರೆ ಮಾತ್ರ ವಸೂಲು ಸಾಧ್ಯ. ಚಾಕಚಕ್ಯತೆಯಿಂದ ಉಪಾಯಾಂತರದಿಂದ ಸಾಲ ವಸೂಲ್ಮಾಡುವ ಪ್ರಯತ್ನ ಮಾಡಲೆಂದು ಸೂಚಿಸುತ್ತೇನೆ.

ಹೆಸರು ಗಂಗಾಧರ ಕುಡಿಯಲು ನೀರಿಲ್ಲವೆಂಬಂತೆ ಇರುವ ಹಾರ್ಟಿಕಲ್ಚರಲ್ ಇಲಾಖೆಯಂತಹವುಗಳಿಗೆ ಕೊಡುವ ಹಣದಲ್ಲಿ ಕಡಿಮೆ ಮಾಡಿ, ಆರೋಗ್ಯ, ವ್ಯವಸಾಯ, ವಿದ್ಯಾಭ್ಯಾಸ ಮುಂತಾದ ಅತ್ಯುಪಯುಕ್ತ ಇಲಾಖೆಗೆ ಕೊಟ್ಟಲ್ಲಿ ದೇಶಕ್ಕೆ ಹೆಚ್ಚಿನ ಉಪಕಾರವಾದೀತು. ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಹಣ ಕೊಟ್ಟಿದೆ ? ಯಾವ ಯಾವ ಇಲಾಖೆಯಿಂದ ಹೆಚ್ಚಿನ ಪ್ರಯೋಜನವಾಗಿದೆ ಎಂಬುದನ್ನು ವರ್ಷಾಂತ್ಯದಲ್ಲಿ ಕರಾರುವಾಕ್ಕಾಗಿ ವಿಮರ್ಶಿಸಿ ನಿರೀಕ್ಷಿಸಿದಂತೆ ಉಪಯೋಗವಾಗದ ಖಾತೆಗಳ ಹಣ ಕಡಿಮೆ ಮಾಡಿ ಉಪಯುಕ್ತ ಇಲಾಖೆಗೆ ಕೊಡುವ ಒಂದು ಪರಿಪಾಠವನ್ನು ಸರ್ಕಾರ ಕಟ್ಟುನಿಟ್ಟಾಗಿ ಕೈಕೊಳ್ಳಲೆಂದು ಸೂಚಿಸುತ್ತೇನೆ.

ಆಯುವ್ಯಯದಲ್ಲಿ ವೈದ್ಯಕೀಯ ಹಾಗೂ ಜನಾರೋಗ್ಯ ರಕ್ಷಣಾ ಖರ್ಚಿಗೆ ತೆಗೆದಿರುವ 6 ಕೋಟಿ 87 ಲಕ್ಷ ರೂಪಾಯಿಗಳು ಸಾಲದು. ರಾಜ್ಯದ ಕೇಂದ್ರಸ್ಥಾನವಾದ ಬೆಂಗಳೂರಿನಲ್ಲೇ ಅತ್ಯಾಧುನಿಕ ವೈದ್ಯಕೀಯ ಯಂತ್ರೋಪಕರಣಗಳಿಂದ ಸುಸಜ್ಜಿತವಾದ ಆಸ್ಪತ್ರೆ ಇಲ್ಲದಿರುವುದು ರಾಜ್ಯಕ್ಕೆ ಭೂಷಣವಲ್ಲ ಎಂದು ವಿಶಾದದಿಂದ ಹೇಳಬೇಕಾಗಿದೆ. ಈ ಕೊರತೆಯಿಂದ ನಮ್ಮವರು ಚಿಕಿತ್ಸೆಗಾಗಿ ವೆಲ್ಲೂರ್ ಮೀರಜ್-ಬೊಂಬಾಯಿ ಮುಂತಾದ ಬೇರೆ ಸ್ಥಳಗಳಿಗೆ ಹೋಗಬೇಕಾಗಿದೆ. ನೀವು ನಂಬಿರಿ, ಬಿಡಿರಿ, ಅನೇಕರು ಚಿಕಿತ್ಸೆಗಾಗಿ ಮಂಗಳೂರು, ಮಣಿಪಾಲ್ ಆಸ್ಪತ್ರೆಗಳನ್ನು ಆರಿಸಿಕೊಳ್ಳಬಲ್ಲರೇ ಹೊರತು ಬೆಂಗಳೂರನ್ನು ಆರಿಸಿಕೊಳ್ಳುವುದಿಲ್ಲ. ಇದನ್ನು ಅನೇಕ ವರ್ಷಗಳಿಂದ ವಿಮರ್ಶಿಸಿ ಹೇಳುತ್ತಿದ್ದೇನೆ, ಇಷ್ಟೇ ಅಲ್ಲದೆ, ವೈಕುಂಠ ಬೇಕಾದವರು ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿರಿ,—ಕೈಲಾಸ ಬೇಕಾದವರು ಬೌರಿಂಗ್ ಆಸ್ಪತ್ರೆಗೆ ಹೋಗಿರಿ—ತ್ರೀ ಶಂಕು ಸ್ವರ್ಗ ಬೇಕಾದರೆ ವಾಣಿವಿಲಾಸಕ್ಕೆ ಹೋಗಿರಿ—ಎಂದು ಜನಸಾಮಾನ್ಯರು ವ್ಯಂಗ್ಯೋಕ್ತಿಯಲ್ಲಿ ಮಾತನಾಡುತ್ತಿದ್ದಾರೆ. ಬೆಂಕಿಯಿಲ್ಲದೇ ಹೊಗೆ ಬರಲಾರದಲ್ಲವೇ ? ಅದರಂತೆ ಏನೂ ಕೊರತೆಗಳಿಲ್ಲದೆ ಈ ವ್ಯಂಗ್ಯ ಮಾತುಗಳು ಬರಲಾರವು. ಜನರು ಹೇಳುತ್ತಿರುವುದು ವ್ಯಂಗ್ಯೋಕ್ತಿಯೇ ಇರಲಿ, ಹಾಸ್ಯೋಕ್ತಿಯೇ ಇರಲಿ, ಆಡಳಿತ ವರ್ಗ ಅದನ್ನು ಕಡೆಗಣಿಸಲಾರದು. ಕುಂದು ಕೊರತೆಗಳು ಏನಿದೆ ಎಂಬದನ್ನು ವಿಮರ್ಶಿಸಿ ತಿದ್ದುವುದು ಆಡಳಿತದ ಧರ್ಮ. ಸ್ವತಃ ವೈದ್ಯರಾದ ಆರೋಗ್ಯ ಮಂತ್ರಿಗಳು ಆಸ್ಪತ್ರೆಗಳ ಕುಂದು ಕೊರತೆಗಳನ್ನು ಲಕ್ಷ್ಯವಿಟ್ಟು ವಿಮರ್ಶಿಸಿ ಸರಿಪಡಿಸಬೇಕಾಗಿ ವಿನಂತಿಸುತ್ತೇನೆ. ಅಲ್ಲದೇ, ನಮ್ಮಲ್ಲಿ ವೈದ್ಯ ಪದವೀಧರರಾದ ನಂತರ, ಎಂ. ಡಿ. ಮತ್ತು ಇತರೇ ತರಬೇತಿಗಳನ್ನು ಹೊಂದಲು ನಮ್ಮವರು ಮದ್ರಾಸ್, ಗೂಂಟೂರು, ಲಕ್ನೋ ಮುಂತಾದ ಸ್ಥಳಗಳಿಗೆ ಹೋಗಬೇಕಾಗಿದೆ. ನಮ್ಮಲ್ಲಿಯೇ ಈ ತರಬೇತಿ ತರಗತಿಗಳನ್ನು ಪ್ರಾರಂಭಿಸುವ ಕಾರ್ಯವನ್ನು ಆದಷ್ಟು ಜಾಗ್ರತೆ ಕೈಕೊಳ್ಳಬೇಕೆಂದು ಸೂಚಿಸಬಯಸುತ್ತೇನೆ.

ಇನ್ನೂ ರಾಜ್ಯದ ಎಲ್ಲ ಆಸ್ಪತ್ರೆಗಳಲ್ಲೂ ಕೂಡ ಬಡವರಿಗೆ ಅವಶ್ಯಕತೆ ಇದ್ದಲ್ಲಿ ಉಚಿತ ರಕ್ತದಾನ ಮಾಡಬೇಕು. ಇಂಥಾ ಒಂದು ಕೆಲಸವನ್ನು ಕಟ್ಟುನಿಟ್ಟಾಗಿ ಮಾಡುವಂತೆ ಆಸ್ಪತ್ರೆಗಳ ಮುಖ್ಯಾಧಿಕಾರಿಗಳಿಗೆ ಮಾನ್ಯ ಸಚಿವರು ಸೂಚಿಸಬೇಕು ಎಂಬುದಾಗಿ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಿದ್ಯಾ ಇಲಾಖೆಗೆ 18 ಕೋಟಿ ರೂಪಾಯಿಗಳ ಮೇಲ್ಪಟ್ಟು ಒದಗಿಸಿದ್ದೀರಿ, ತುಂಬಾ ಸಂತೋಷದ ವಿಚಾರ, ಆದರೆ ವಿದ್ಯಾಖಾತೆಯಲ್ಲಿ, ರೀತಿ ನೀತಿಗಳನ್ನು ರೂಡಿಸುವುದರಲ್ಲಿ ಸರ್ಕಾರ ಇನ್ನೂ ಯಶಸ್ವಿಯಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ವಿಶ್ವವಿದ್ಯಾನಿಲಯದ ಆಡಳಿತ ಅಷ್ಟು ತೃಪ್ತಿಕರವಾಗಿಲ್ಲವೆಂಬ ಒಡಕು ಶಬ್ದ ತುಂಬಾ ಹರಡಿದೆ. ಉಪಕುಲಪತಿಗಳನ್ನು ನೇಮಿಸುವ ವಿಚಾರದಲ್ಲಿ ಒಳಗಿನವರೇ, ಹೊರಗಿನವರೇ ಎಂಬ ಮೀನಾಮೇಷ ನಡೆಯುತ್ತಿದೆ. ಯೋಗ್ಯರಾದವರು, ಸಮರ್ಥರು ನಮ್ಮಲ್ಲಿ ಇಲ್ಲವೆಂದು ಹೇಳಿದರೆ ತಪ್ಪಾದೀತು. ಆದರೆ ಜಾತಿ ಮತಗಳ ಜಿಜ್ಞಾಸದಿಂದ ದಕ್ಷತೆ ಯೋಗ್ಯತೆಗಳಿದ್ದರೂ ಗಣನೆಗೆ ಬಾರದಂತಾಗುತ್ತಿದೆ ಎಂಬ ಮಾತು ಕಥೆ ದೇಶದಲ್ಲಿ ತುಂಬಾ ನಡೆಯುತ್ತಿದೆ. ನಮ್ಮಲ್ಲಿರುವ ಯೋಗ್ಯತೆ ಅರ್ಹತೆಯುಳ್ಳವರು ಅವರು ಯಾರೇ ಆಗಿರಲಿ ಅಂತಹವರನ್ನು ಸರ್ಕಾರ ಕೂಡಲೇ ನೇಮಿಸುವುದು ಸೂಕ್ತವಾಗಿದೆ. ವಿದ್ಯಾ ಇಲಾಖೆಯ ರೀತಿ ನೀತಿಗಳನ್ನು ಪೂರ್ವಭಾವಿಯಾಗಿ ತುಂಬಾ ಯೋಚಿಸಿ ನಮ್ಮ ಆರ್ಥಿಕತೆ, ಸನ್ನಿವೇಶ, ಸಂಸ್ಕೃತಿಗಳಿಗೆ ಅನುಸರಿಸಿ ರೂಪಿಸಬೇಕು. ಒಮ್ಮೆ ಶುಲ್ಕ ಏರಿಸುವುದು, ಒಮ್ಮೆ ಇಳಿಸುವುದು, ಒಮ್ಮೆ ಜಾತಿಪಂಥ ಆಧಾರ ಇಟ್ಟುಕೊಳ್ಳುವುದು, ಒಮ್ಮೆ ಆರ್ಥಿಕ ಪರಿಸ್ಥಿತಿಯ ಮೇಲೆ ಎನ್ನುವುದು, ಒಮ್ಮೆ ಶಾಲಾ ಕಾಲೇಜುಗಳನ್ನು ಖಾಸಗೀಯವರಿಗೆ ವಹಿಸೋಣ ಎನ್ನುವುದು, ಒಮ್ಮೆ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಕೊಂಕಣಿಯಲ್ಲೇ ಪಾಠ ಹೇಳುತ್ತೇವೆ ಎನ್ನುವುದು. ನನಗೆ ತಿಳಿದಂತೆ ಕೊಂಕಣಿಗೆ ಪ್ರತ್ಯೇಕ ಲಿಪಿ ಇದ್ದಂತೆ ಕಾಣಲಿಲ್ಲ. ಹೀಗಿರುವಾಗ ಒಂದಕ್ಕೊಂದು ಸಂಬಂಧವಿಲ್ಲದ ಉವಾಚಗಳು ನಮ್ಮ ವಿದ್ಯಾ ಮಂತ್ರಿಗಳಿಂದ ಬರುವುದು ಸೂಕ್ತವೇ ಎಂದು ಪ್ರಶ್ನಿಸಬೇಕಾಗಿದೆ. "ನುಡಿದರೆ ಮುತ್ತಿನ ಹಾರ ದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕೆಂದು ಬಸವಣ್ಣನವರು ಹೇಳಿದ್ದಾರೆ. ಇದರಂತೆ ನಡೆಯದಿದ್ದರೆ "ತನ್ನ ನಾಲಗೆ ತನಗೆ ಚ್ಯುತಿಯಂತಹುದು" ಎಂಬ ಮಾತು ನಿಜವಾಗು ತ್ತದೆ. ಕಾರಣ "ಮಾತಿನಲ್ಲಿ ಅರಮನೆ ಕಟ್ಟುವುದಕ್ಕಿಂತಲೂ ಕಾರ್ಯತಃ ಗುಡಿಸಲು ಕಟ್ಟಿ" ಎಂದು ವಿದ್ಯಾಮಂತ್ರಿಗಳಿಗೆ ವಿನಂತಿಸುತ್ತೇನೆ.

ವಿದ್ಯುಚ್ಛಕ್ತಿಯ ಅಪವ್ಯಯ ನಿಲ್ಲಿಸಿ, ಇದರಿಂದ ದೇಶದ ಉನ್ನತಿಗೆ ಅಪಾಯ ಎಂಬ ನೀತಿ ಯನ್ನು ಅಕ್ಷರಶಃ ಪಾಲಿಸಬೇಕೆಂಬ ಸೂಚನೆಯನ್ನು ಸರ್ಕಾರ ವಿದ್ಯುತ್ ಮಂಡಳಿಗೆ ಕೊಡಬೇಕೆಂದು ಅಪೇಕ್ಷಿಸುತ್ತೇನೆ. ರಾಜ್ಯದ ವಿದ್ಯುಚ್ಛಕ್ತಿ ಮಂಡಳಿ ರಾಜ್ಯದ ಎಲ್ಲಾ ಕಡೆಯೂ ಒಂದೇ ವಿಧವಾದ ನೀತಿಯನ್ನು ಜಾರಿಗೆ ತರಬೇಕಾಗಿದೆ. ವಿದ್ಯುತ್ ಮಿತವ್ಯಯವನ್ನು ವ್ಯವಸಾಯ ಗ್ರಾಮೋದ್ಯೋಗ ಸಂಸ್ಥೆಗಳಿಗೆ ಕಡ್ಡಾಯ ಮಾಡಿದಲ್ಲಿ ಉತ್ಪಾದನೆಗೆ ಅಡಚಣೆಯಾಗುತ್ತದೆ. ದೇಶದ ನೂರಾರು ಸಿನಿಮಾ ಮಂದಿರಗಳಿಗೆ ಪ್ರತಿದಿನ 3-4 ಪ್ರದರ್ಶನಗಳಿಗೆ ವಿದ್ಯುತ್ ಸರಬರಾಜು ಕೊಡಬಹುದು, ಜಾಹಿರಾತು, ಅಲಂಕಾರಗಳಿಗೆ ಕೊಡಬಹುದು, ಶ್ರೀಮಂತರೂ, ಪ್ರಭಾವಶಾಲಿಗಳೂ ಆದವರ ಕೈಗಾರಿಕೋದ್ಯಮಗಳಿಗೆ ಕೊಡಬಹುದು, ವ್ಯವಸಾಯ ಸಣ್ಣಪುಟ್ಟ ಕೈಗಾರಿಕೆಗಳವರಿಗೆ ಅಡ್ಡಿ ಆತಂಕ ಗಳನ್ನೊಡ್ಡುವುದು ಇದು ಯಾವ ಧರ್ಮ? ಅನೇಕ ಶ್ರೀಮಂತರೂ, ಪ್ರಭಾವಶಾಲಿಗಳೂ ಆದವರ ಕೈಗಾರಿಕೋದ್ಯಮಗಳಿಗೆ 24 ಘಂಟೆ ವಿದ್ಯುತ್ ಸರಬರಾಜು ಇರಬಹುದು. ಸಣ್ಣಪುಟ್ಟವರಿಗೆ ಇಂತಿಷ್ಟೇ ಅವಧಿ ಎಂದು ನಿಗದಿ ಮಾಡುವುದು ಇದು ಯಾವ ಲೆಕ್ಕಾಚಾರ, ನನಗಂತೂ ಅರ್ಥವಾಗಿಲ್ಲ. ವರ್ಷಕ್ಕೆ ಕೋಟ್ಯಾಂತರ ರೂಪಾಯಿನ ವ್ಯವಹಾರ ನಡೆಸುವ ರಾಷ್ಟ್ರದ ಜೀವನಾಡಿಗಳಲ್ಲಿ ಒಂದಾದ ವಿದ್ಯುತ್ ಮಂಡಳಿ ಅಕ್ರಮ, ಅನ್ಯಾಯ, ಪಕ್ಷಪಾತಗಳಿಗೆ ಆಸ್ಪದ ಕೊಟ್ಟಲ್ಲಿ ದೇಶಕ್ಕೆ ತುಂಬಾ ಅಪಚಾರ ಮಾಡಿದಂತಾಗುತ್ತದೆ. ನೌಕರಿಗಳ ನೇಮಕದಲ್ಲಿ ಪಕ್ಷಪಾತ ನಡೆಯುತ್ತಿದೆ. ದಕ್ಷರಾದ ವರನ್ನು, ಅರ್ಹತೆಯುಳ್ಳವರನ್ನು ಟೆಕ್ನಿಕಲ್ ಶಬ್ದ ಕೇಳಿದೆವು, ಹೇಳಲಿಲ್ಲ. ಅದರಿಂದ ಬಿಡಲಾಗಿದೆ ಎಂಬ ಕುಂಟು ನೆಪ ಬೋರ್ಡಿನ ಜವಾಬ್ದಾರಿ ಸ್ಥಾನದಲ್ಲಿರುವವರು ಹೇಳುತ್ತಾರೆ. ಹೀಗೆಲ್ಲಾ ನಡೆಯಬಾರದು. ವಿದ್ಯುತ್ ಹಂಚಿಕೆ ವಿನಿಮಯ, ತುರ್ತುಪರಿಸ್ಥಿತಿಯ ಮಿತವ್ಯಯದ ಬಗ್ಗೆ ಕಟ್ಟು ನಿಟ್ಟಾಗಿ ನಡೆಯುವಂತೆ ವಿದ್ಯುತ್ ಮಂಡಳಿಗೆ ಸರ್ಕಾರ ಸೂಚಿಸಬೇಕೆಂದು ಸಲಹೆ ಮಾಡುತ್ತೇನೆ. ರೈತರಿಗೂ, ಗ್ರಾಮಾಂತರ ಪ್ರದೇಶಗಳಿಗೂ, ಉತ್ಪಾದನಾ ಕಾರ್ಯಗಳಿಗೂ ಸರಬರಾಜು ಸರಿ ಯಾಗಿ ಆಗುವಂತೆ ನೋಡಿಕೊಳ್ಳಬೇಕೆಂದು ಸರ್ಕಾರ ಬೋರ್ಡಿಗೆ ಒತ್ತಾಯದ ಸೂಚನೆ ಕೊಡು ವುದು ಸೂಕ್ತವೆಂದು ನನ್ನ ಅಭಿಪ್ರಾಯ.

ಕೇಂದ್ರ ಸರ್ಕಾರದಿಂದ ದೊರೆಯಬೇಕಾದ ಸಹಾಯಧನ, ಕೈಕೊಳ್ಳಬೇಕಾದ ಯೋಜನೆಗಳಿಗೆ ಪುರಸ್ಕಾರ ಜನತೆ ನಿರೀಕ್ಷಿಸಿದಂತೆ ಆಗುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಹೀಗೇಕೆ? ಎಂಬ ಸಂದೇಹ ಸಂದೇಹವಾಗಿಯೇ ಉಳಿದಿದೆ. ಗುಂತಕಲ್, ಹೊಸಪೇಟೆಗೆ ಬ್ರಾಡ್‌ಗೇಜ್ ಆಗ ಬಹುದು. ಹೊಸಪೇಟೆಯಿಂದ ಹುಬ್ಬಳ್ಳಿಗೆ ಸಾಧ್ಯವಿಲ್ಲ. ಪೂನಾ-ಮೀರಜ್ ಬ್ರಾಡ್‌ಗೇಜ್ ಆಗ ಬಹುದು. ಮೀರಜ್-ಹುಬ್ಬಳ್ಳಿಗೆ ಸಾಧ್ಯವಿಲ್ಲ. ಹಾಸನ—ಮಂಗಳೂರು—ಹುಬ್ಬಳ್ಳಿ—ಕಾರವಾರ, ಚಾಮರಾಜನಗರ—ಸತ್ಯಮಂಗಲ ಈ ರೈಲ್ವೆ ದಾರಿಗಳು ಆಗಬೇಕೆಂಬುದು ಜನತೆಯ ಒಕ್ಕೊರಲ ಕೂಗು. ಆದರೂ ನರಿಯ ಕೂಗು ಗಿರಿಗೆ ಮುಟ್ಟೀತೇ? ಎಂಬಂತೆ ನಮ್ಮ ಕೂಗು ದೆಹಲಿಗೆ ಮುಟ್ಟಿರ ಲಾರದು—ಮುಟ್ಟಿದರೂ ನರಿಯ ಕೂಗೆಂದು ನಿರ್ಲಕ್ಷಿಸಿರಬಹುದೆಂದು ಕಾಣುತ್ತದೆ. ರಸ್ತೆ, ಸೇತುವೆ, ಮುಂತಾದ ಕಾಂಗಾರಿಗಳಿಗೆ ಯೋಜನೆಯ ಅವಧಿಯಲ್ಲಿ 30 ಕೋಟಿ ರೂಪಾಯಿ ಹಣ ಬೇಕಾಗಿತ್ತು. ಆದರೆ 9 ಕೋಟಿ ಮಾತ್ರ ಒದಗಿದೆ. ಏನು ಮಾಡುವುದು ಎಂದು ಲೋಕೋಪ ಯೋಗಿ ಸಚಿವರು ವಿಧಾನ ಸಭೆಯ ಉತ್ತರ ಭಾಷಣದಲ್ಲಿ ಹೇಳಿದ್ದಾರೆ, ಈಗ ನಮಗೆ ಬೇರೆ ದಾರಿಯೇ ಇಲ್ಲ. ಅಕ್ಕಪಕ್ಕದ ರಾಜ್ಯಗಳಿಗೆ ಸಹಾಯ ಮಾಡಿದಂತೆ ನಮಗೂ ಮಾಡುತ್ತೀರೋ? ಬುದ್ಧಿ ರವಾನಿಸೋಣವೋ ಎಂದು ಕೇಂದ್ರ ಸರ್ಕಾರವನ್ನು ಕೇಳಬೇಕಾಗಿದೆ.

3.00 P. M.

ಈ ಬುದ್ಧಿಯನ್ನು ರವಾನಿಸತಕ್ಕದ್ದು ಹೇಗೆ ಎಂಬುದಕ್ಕೆ ಒಂದು ಕಥೆಯಿದೆ. ಚಿತ್ರಪುರಿ-ಮದನ ಪುರಿ ಎಂಬವು ಎರಡು ಅಕ್ಕಪಕ್ಕದ ರಾಜ್ಯಗಳು. ಚಿತ್ರಪುರಿ ರಾಜ ಆ ಮದನಪುರಿ ರಾಜ್ಯವನ್ನು ಗೆಲ್ಲ

ಬೇಕೆಂತ ಯೋಚಿಸಿದ. ಅದಕ್ಕಾಗಿ ಆ ಮದನಪುರಿ ರಾಜನ ಬುದ್ಧಿಯನ್ನು ಪರೀಕ್ಷೆ ಮಾಡೋಣ ಎಂದು ಅವರಿಗೆ ಹೀಗೆ ಒಂದು ಪತ್ರ ಬರೆಸಿದ—"ನಮಗೆ ಬುದ್ಧಿ ಬೇಕಾಗಿದೆ. ಮೂರು ತಿಂಗಳೊಳಗೆ ನೀವು ಆ ಬುದ್ಧಿಯನ್ನು ರವಾನಿಸಿದರೆ ಸರಿ, ಇಲ್ಲವಾದರೆ ನಿಮ್ಮ ಮೇಲೆ ನಾವು ದಂಡೆತ್ತಿ ಬರುತ್ತೇವೆ" ಎಂದು. ಆ ಪತ್ರ ನೋಡಿ ಮದನಪುರಿ ರಾಜನಿಗೆ ಆಶ್ಚರ್ಯವಾಯಿತು. ಆಗ ಆತನು ಮಂತ್ರಿಗಳನ್ನು ಕರೆಸಿ ಬುದ್ಧಿಯನ್ನು ಹೇಗೆ ರವಾನಿಸುವುದು ? ಎಂದು ಅವರ ಸಲಹೆ ಕೇಳಿದ. ಆ ರಾಜನ ಆಸ್ಥಾನದಲ್ಲಿ ಹತ್ತು ಜನ ಮಂತ್ರಿಗಳೂ, ನಾಲ್ಕು ಜನ ಉಪ ಮಂತ್ರಿಗಳೂ ಇದ್ದರು. ಆದರೆ ಆ ಸಮಯದಲ್ಲಿ ಆ ಪೈಕಿ ಒಬ್ಬ ಉಪಮಂತ್ರಿ "ಸ್ವಾಮಿ, ನಾನು, ಆ ಬುದ್ಧಿಯನ್ನು ರವಾನಿಸುತ್ತೇನೆ. ಆ ಬುದ್ಧಿ ತಲುಪಿತು ಎಂದು ಚಿತ್ರಪುರಿ ರಾಜನಿಂದ ಉತ್ತರ ಬರುವವರೆಗೂ ತಾವು ನನ್ನನ್ನು ಏನು ಮಾಡಿದೆ ಎಂತ ಕೇಳಬಾರದು." ಎಂಬುದಾಗಿ ಹೇಳಿದನು. ಅದಕ್ಕೆ ರಾಜ ಆಗಲಿ ಎಂದ. ಆ ನಂತರ ಉಪಮಂತ್ರಿ ಮನೆಗೆ ಬಂದು ಹಿತ್ತಲಲ್ಲಿ ಬೆಳೆದಿದ್ದ ಒಂದು ಕುಂಬಳ ಬಳ್ಳಿಯಲ್ಲಿ ಆಗತಾನೆ ಬಿಟ್ಟಿದ್ದ ಒಂದು ಸಣ್ಣ ಕಾಯಿಯನ್ನು ಒಂದು ಗಡಿಯೊಳಕ್ಕೆ ಇಟ್ಟು ಆ ಕಾಯಿ ಆ ಗಡಿಗೆಯೊಳಗೇ ಗಡಿಗೆ ಗಾತ್ರದಷ್ಟು ಬೆಳೆಯುವವರೆಗೂ ಬಿಟ್ಟಿದ್ದು, ಆ ನಂತರ ಆ ಕಾಯಿಯ ತೊಟ್ಟನ್ನು ಬಳ್ಳಿಯಿಂದ ಕತ್ತರಿಸಿ, ಆ ಗಡಿಗೆ ಸಮೇತ ಕುಂಬಳ ಕಾಯಿಯನ್ನು ಬೇರೊಂದರಲ್ಲಿ ಪ್ಯಾಕ್‌ಮಾಡಿ, ಇದರಲ್ಲಿ ಬುದ್ಧಿಯಿದೆ, ತೆಗೆದುಕೊಳ್ಳಿ ಎಂಬುದಾಗಿ ಚಿತ್ರಪುರಿ ರಾಜನಿಗೆ ರವಾನೆ ಮಾಡಿದನು. ಆ ಚಿತ್ರಪುರಿ ರಾಜ ಒಪ್ಪಿಕೊಂಡು, ಬುದ್ಧಿ ತಲುಪಿದೆ, ನಾವೂ ನೀವೂ ಸಮಾನಸ್ಕಂಧರು. ನಾವೂ ನೀವೂ ಅನ್ಯೋನ್ಯ ರೀತಿಯಲ್ಲಿ ಒಬ್ಬರಿಗೊಬ್ಬರು ಸಹಾಯಕರಾಗಿ ಇರೋಣ ಎಂತ ಪತ್ರ ಬರೆಸಿದನು. ಮದನಪುರಿ ರಾಜ ತನ್ನ ಉಪಮಂತ್ರಿ ಮಾಡಿದ್ದನ್ನೆಲ್ಲ ಕೇಳಿ ಸಂತೋಷಪಟ್ಟು ಆತನನ್ನು ಪೂರ್ಣ ಮಂತ್ರಿ ಪದವಿಗೇರಿಸಿದನಂತೆ. ಹೀಗೆ ನಮ್ಮಲ್ಲಿಯೂ ಬುದ್ಧಿಯನ್ನು ದೆಹಲಿಗೆ ರವಾನಿಸಿ ಅಲ್ಲಿಂದ ಸಹಾಯವನ್ನು ತರಬಲ್ಲಂಥ ಯುಕ್ತಿವಂತರು ಬೇಕಾಗಿದೆ. ನಮ್ಮ ಮಂತ್ರಿಮಂಡಲದಲ್ಲಿ ಯಾರಿಗಾದರೂ ಸರಿಯೇ ಅಂಥ ಯುಕ್ತಿಯನ್ನು ಪರಮಾತ್ಮನು ಅನುಗ್ರಹಿಸಲೆಂದು ಹಾರೈಸುತ್ತೇನೆ.

ಸ್ವಾಮಿ, ವಾಕ್ಪತಿಗಳೇ-ಒಂದು ದೊಡ್ಡ ರಾಜ್ಯದ ಆಯವ್ಯಯದ ಮುಖ್ಯ ವಿಮರ್ಶೆ ಮಾಡಬೇಕೆಂದರೂ ಘಂಟೆಗಟ್ಟಲೆ ಕಾಲಬೇಕು. ಅದು ಸಾಧ್ಯವಿಲ್ಲದ ಮಾತು. ಆದ ಕಾರಣ ಕೊನೆಯದಾಗಿ ಒಂದು ಮುಖ್ಯ ವಿಚಾರವನ್ನು ತಿಳಿಸಿಬಿಡುತ್ತೇನೆ. ಆಯವ್ಯಯದ ಕೊರತೆಯನ್ನು ತುಂಬಿಕೊಳ್ಳಲು—ಮಿತವ್ಯಯ ಮತ್ತು ನಮಗಿರತಕ್ಕ ಸಾಧನ ಸಂಪತ್ತುಗಳನ್ನು ರೂಢಿಸಿಕೊಳ್ಳುವುದು, ಇವೆರಡೇ ದಾರಿಗಳು. ಕಾಗದದ ಉಳಿತಾಯ, ಸ್ಟೇಷನರಿ ಉಳಿತಾಯ, ಕೆಲವು ಸಣ್ಣಪುಟ್ಟ ನೌಕರರನ್ನು ನೇಮಿಸಿಕೊಳ್ಳದಿರುವುದು ಇತ್ಯಾದಿ ಜುಜುಬಿ ಉಳಿತಾಯದ ಹೊರತು ಸರ್ಕಾರದ ಮಟ್ಟದಲ್ಲಿ ಏನು ಅಂಥಾ ಮಿತವ್ಯಯ ನಡೆದಿದೆ ಎಂದು ನಾನೀಗ ಪ್ರಶ್ನಿಸಬೇಕಾಗಿದೆ. ಇಂಥ ಸಣ್ಣಪುಟ್ಟ ಬಾಬುಗಳಿಂದ ಅಷ್ಟಿಷ್ಟು ಹಣ ಉಳಿತಾಯವಾದರೂ ಆ ಹಣ ಮಂತ್ರಿಗಳ ವಸತಿಗಳಿಗೆ ಬೇಕಾಗುವ ಅಲಂಕಾರ, ಇನ್ನಿತರ ಸೌಲಭ್ಯಗಳನ್ನೊದಗಿಸಲು ಸಾಲದಾಗಿರುತ್ತದೆ. ಆದರೆ, ಸರ್ಕಾರದವರು ಆವಶ್ಯಕವಾದ ಕಾರ್ಯಗಳಿಗೆ ಮಾತ್ರವೇ ಖರ್ಚುಮಾಡುತ್ತೇವೆಂದು ಉತ್ತರ ಹೇಳಬಹುದು. ಈ ವಿಚಾರವನ್ನು ನಾನೂ ತಿಳಿದುಕೊಂಡಿದ್ದೇನೆ. ಆದರೆ, ಇದು ಏನನ್ನು ಸೂಚಿಸುತ್ತದೆ ಎಂದರೆ A Government which would not sacrifice something at least, expects the people to sacrifice ಎಂಬುದನ್ನು ಸೂಚಿಸುತ್ತಿದೆ. ಆದರೆ ಶಾಸ್ತ್ರ ಪರಿಜ್ಞಾನ, ಸಹಜ ವ್ಯವಹಾರ ಜ್ಞಾನ ದಕ್ಷತೆ ಇವುಗಳಿಲ್ಲದ ಅಧಿಕಾರಿಗಳಿಂದ ಸಾರ್ವಜನಿಕರ ಹಣ ಅದೆಷ್ಟು ನಷ್ಟವಾಗುತ್ತಿದೆ ಎಂಬುದನ್ನು ಪತ್ತೆ ಹಚ್ಚಿದರೆ ಆದರೆ ಅದು ಒಂದು ಆಶ್ಚರ್ಯ ಸಂಗತಿಯೇ ಆಗುತ್ತದೆ. ಇಂಥ ಅದಕ್ಷತೆಯ ಆಡಳಿತದಿಂದ ಅಮೆರಿಕಾ ದೇಶದಲ್ಲಿ ವರ್ಷಕ್ಕೆ 2,500 ಕೋಟಿ ರೂ.ಗಳು ನಷ್ಟವಾಗುತ್ತಿದೆಯೆಂಬುದಾಗಿ ತಿಳಿದುಬಂದಿದೆ. ಈ ಲೆಕ್ಕಾಚಾರದ ಮೇಲೆ ನಮ್ಮಲ್ಲಿ ಏನಿಲ್ಲ ಎಂದರೂ ಪ್ರತಿವರ್ಷವೂ 2-3 ಕೋಟಿ ರೂ.ಗಳು ನಷ್ಟವಾಗುತ್ತಿದೆ. ಈ ಬಗ್ಗೆ ಯಾರಾದರೂ ಅದು ಹೇಗೆ ಎಂದು ಕೇಳಿದರೆ ಅದು ಹೀಗೆ ಎಂದು ನಾನು ಹೇಳಬಲ್ಲೆ. ಹೇಗೆ ಎಂದರೆ—"ಮಹಾ ವಿಜ್ಞಾನಿಯಾದ ನ್ಯೂಟನ್ನನು ತನ್ನಲ್ಲಿದ್ದ ದೊಡ್ಡ ಬೆಕ್ಕು ಮತ್ತು ಒಂದು ಮರಿ ಬೆಕ್ಕು ಈ ಎರಡಕ್ಕೂ ಒಂದು ಗೂಡನ್ನು ಮಾಡಲು ಹೇಳಿ, ದೊಡ್ಡ ಬೆಕ್ಕಿಗೆ ಓಡಾಡಲು ದೊಡ್ಡ ಬಾಗಿಲೂ ಮರಿ ಬೆಕ್ಕು ಓಡಾಡಲು ಒಂದು ಸಣ್ಣ ಬಾಗಿಲನ್ನು ಇಡಬೇಕೆಂದು ಹೇಳಿದ. ಆ ಮಾತುಗಳನ್ನು ಕೇಳಿದ ಬಡಗಿಗೆ ಆಶ್ಚರ್ಯವಾಯಿತಂತೆ ! ಆಗ ಬಡಗಿ ದೊಡ್ಡದೂ ಸಣ್ಣದೂ ಎರಡೂ ಒಂದೇ ಬಾಗಿಲಲ್ಲಿ ಓಡಾಡಬಹುದೆಂದು ತಿಳಿಸಿದ್ದಕ್ಕೆ ನ್ಯೂಟನ್ನನು ತನ್ನ ತಿಳಿವಳಿಕೆ ತಪ್ಪೆಂದು ಒಪ್ಪಿಕೊಂಡನಂತೆ." ಇದರಂತೆ ನಮ್ಮ ಸಚಿವರುಗಳೂ ಇಂಗ್ಲೀಷ್ ಪದವೀಧರರಾಗಿದ್ದು, ಬುದ್ಧಿವಂತರಾಗಿದ್ದರೂ ಕನ್ನಡ ಬಲ್ಲ ನಮ್ಮಂಥ ಬಡಗಿಗಳ ಸಲಹೆಯಂತೆ ಕೆಲವು ವೇಳೆ ನಡೆಯಬೇಕಾದೀತು ಎಂಬುದನ್ನು ಅವರು ಮರೆಯಬಾರದು. ವಿಧಾನ ಸೌಧದಲ್ಲಿ ಎಲ್ಲ ಸಚಿವರೂ ಕೆಲಸದ ಮೇಲೆ ಹಾಜರಿದ್ದರು ಎಂಬ ಸುದ್ದಿಯನ್ನು ತಿಂಗಳಿಗೆ ಒಂದೆರಡು ಸಲವಾದರೂ ನಾವು ಪತ್ರಿಕೆಗಳಲ್ಲಿ ಓದುವಂತಾದರೆ ಆಗ ನಮ್ಮ ಸರ್ಕಾರ ಮಿತವ್ಯಯ ದಾರಿ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಯನ್ನು ಹಿಡಿದಿದೆ ಎಂದು ಜನರು ನಂಬುತ್ತಾರೆ. ನಮ್ಮಲ್ಲಿ ನಿರುದ್ಯೋಗ ತುಂಬಾ ಇದೆ. ಇತ್ತೀಚೆಗೆ ಅಕ್ಕಸಾಲಿಗರೂ ಈ ಗುಂಪಿಗೆ ಸೇರಿಕೊಂಡಿದ್ದಾರೆ. ಇವರಿಗಂತೂ ಅತಿ ತುರ್ತು ಪರಿಹಾರ ಒದಗಿಸಬೇಕಾಗಿದೆ. ಸರ್ಕಾರಿ ಕಾರ್ಖಾನೆಗಳಲ್ಲಿ ಕೇಂದ್ರದ ಕಾರ್ಖಾನೆಗಳಲ್ಲಿ ನಮ್ಮವರಿಗೆ ಹೆಚ್ಚು ಹೆಚ್ಚು ಉದ್ಯೋಗಗಳು ದೊರೆಯುವಂತೆ ನೋಡಿಕೊಳ್ಳಬೇಕಾಗಿದೆ. ನೀವು ಬೆಂಗಳೂರಿನ ಕಥೆ ಕೇಳ ಬಲ್ಲಿರಾ ? ಇದು ನಮ್ಮ ರಾಜಕ್ಕೆ ರಾಜಧಾನಿ ! ಆದರೇಂ ಕನ್ನಡಿಗಂ ಪರದೇಶಿಯಿಲ್ಲಿ ! ಬೇರೆಯವರ ಕೈಲಿದೆ ಇವನ ಜುಟ್ಟು !! ಎಂಬ ಮಾರ್ಮಿಕ ನುಡಿಯಿಂದ ಕನ್ನಡಿಗರ ಕರ್ಮ ಕಥೆಯನ್ನು ಸರ್ಕಾರ ಅರ್ಥಮಾಡಿಕೊಳ್ಳಲಿ ಎಂಬುದು ನನ್ನ ಅಪೇಕ್ಷೆ. ಒಟ್ಟಿನಲ್ಲಿ ಇಷ್ಟು ಹೇಳುತ್ತೇನೆ. " ಕನ್ನಡ ನಾಡಲಿ ತುಂಬಿದೆ ನೋಡಿರಿ ಅಪಾರ ಸಾಧನ ಸಂಪತ್ತು ! ತನುಮನ ಧನದಿಂ ರೂಢಿಸಿ ಅದನು ! ಏಳಿಗೆ ಪಡೆವುದೆ ವಿದ್ವತ್ತು !" ಈ ವಿದ್ವತ್ತನ್ನು ನಮ್ಮ ಸರ್ಕಾರ ಕಲಿತು ಇದನ್ನು ಜನರಿಗೂ ಕಲಿಸುವುದು ಅವರ ಧರ್ಮವಾಗಿದೆ. ಕಾರಣ ಕಾರ್ಯ ದಕ್ಷತೆಯಿಂದ ಯೋಜನೆಗಳಿಗೆ ಶ್ರಮಿಸಿ ಶಾಂತಿ ಸುಖ ಬಾಳುವೆಯ ಫಲವನ್ನು ಬೆಳಸಿ ಎಂದು ವಿನಂತಿಮಾಡಿಕೊಂಡು ಈ ಆಯವ್ಯಯವನ್ನು ನಾನು ಅನುಮೋದಿಸುತ್ತೇನೆ.

† **Sri L. B. BIRJE** (Khanapura).—

[Spoke in Marathi]

† **Smt. VIJAYA RAGHAVENDER DESAI** (Chitapur).—Sir, I rise to support the Budget for 1963-64 presented to this House. At the outset, I would like to congratulate the Finance Minister for having presented such a progressive, satisfactory budget, even during the period of emergency. Some of the Hon. Members were criticising that the budget was not progressive and was anything but satisfactory. We all know we are in an era of planning and the arena of planning activity is enlarging to a commendable extent.

We the members coming from the Hyderabad Karnatak area are very happy to note that the M. S. K. Mills is being revived. As everyone knows, the mill is one of the oldest textile mills in the area. There are about 36,000 spindles, 610 looms and processing is also done there. To-day roughly 2,500 to 3,000 workers are working. Because of mismanagement by the Board, the mills had to suffer losses and that is why they could not even pay the wages of some of the workers. Similarly, they had also incurred debts and could not repay them. Therefore, they did not have any other go but to come to the Mysore Government for financial assistance. Considering the backwardness of the area and also the paucity of industries, Government thought it advisable to give about 14 to 16 lakhs to M. S. K. Mills. I think now they are having that much capital so as to run the mills properly. Even this sort of assistance they could not proceed. Government then came forward to advance a loan of about 60 to 65 lakhs to the mills and I believe the Government will be considerate and see that it is run efficiently.

As regards the Budget Estimates of the Scientific Departments, the revised estimate for the maintenance of Musuems for 1962-63 is Rs. 2 lakhs and the estimate for 1963-64 is 1.8 lakhs. I feel that for maintenance of Museums, even Rs. 2 lakhs is also meagre. These Museums represent the glorious Indian traditions and customs that were there in the past in ancient India. These are places where curios are

stored and they serve as links between the past and the present. I request the Government to maintain a Museum in the Hyderabad-Karanatak area. Here, I suggest, to have a Museum at Gulbarga, which was the capital of Bahamani Kingdom when Mr. Hassan Gangu was the Ruler. I request the Government to look into this matter and maintain a Museum in that area.

3-30 P.M.

As we all know, grant is provided in the Budget estimates for the Indian Institute of Science. This Institute is an All-India Institute. There is scope for higher studies and research in this Institute. Mr. Ganji Veerappa pointed that Government must always consider to give more and more benefits to those students who do research in Applied Sciences, and this is one of the Institute where Government is giving grant for Applied Sciences. While selecting the candidates for these courses, the Government authorities cannot make discrimination between Mysoreans and non-Mysoreans. There is Government of India's contribution to this Institute, and so, students from all over the country get into this Institute. The only method to have more Mysoreans in this Institute, is to raise the standard of education and get more Mysoreans admitted for the Applied Science Courses. I believe the students trained in this Institute are—217 for B. E., for M. E., It is nearly 90 *plus* 88, and for the part-time evening classes it is 122. This number is not encouraging. We must try to get the grant increased from the Centre, at least up to 70 per cent, and increase the number of students for these Applied Science Courses. I hope the Government will highly consider these things and will see that more Mysoreans come up for the Applied Science Courses.

Budget Estimates for the Education is up to 18.75 Crores. Sri K S. Sooryanarayana Rao, was kind enough to suggest to the Government that we must have a Directorate for Technical Education and two or three Joint Directors. I suggest that we must have a separate Directorate for Girls' Education also. As we know, all Indian women have been kept in the 'parda'. I feel that there should be many more educational facilities for woman as the men get. I think we must have a Directorate for Girls' Education with one Director, two Joint Directors, trained personnel and also the necessary staff. We had in Gulbarga one Vocational Girls' Institute and the Government was very kind enough to close it with an intention to start a Polytechnic for Girls. That idea was before the Government for two years and I do not know when it will come up. I would like to know if they have a proposal to start a Polytechnic for Girls.

Sri B. D. JATTI.—There is a proposal to have about two more Polytechnics for the State of Mysore for girls.

Smt. VIJAYADEVI RAGHAVENDRARAO DESAI.—I would like to have a clarification from the Government regarding the scholarship and free-studentship. It is said that the concession of free-studentship applies

(SMT. VIJAYADEVI RAGHAVENDRARAO DESAI)

to those whose parents' income is Rs. 2,400 per annum and sometimes it is said that it is for an income of Rs. 3,600 and less, and it applies only to High School students as also for College students and so on. I would like to know from the Government what they propose to do as regards earning students who are also learning in High Schools and Colleges. That is not very clear in the Government Order-whether this Government is depriving these students of that free-studentship. What is the answer Sir ?

Sri B. D. JATTI.—I have no clear idea about it. The total income of the family is taken into consideration. Here, if the students are earning, that also may be considered as total income.

Smt. VIJAYADEVI RAGHAVENDRA RAO DESAI.—The other day, the Education Minister was very kind enough to make a statement, but still the doubt has not been cleared-whether it is for a particular student, for a particular subject and so on. If we have about 10 zones for the whole State, the standard of the 10th zone may go low. I request the Government to minimise the zones and also to have the departmental books, if possible.

As regards the Triple-benefit Scheme for the Aided Schools, I think, these Aided schools are not getting maintenance grants since 2½ years. Here, I may give a concrete example Let not Mr. V. S. Patil say that I am quoting an example of my own constituency.

Sri V. S. PATIL.—I want to clear my objection. I have objected, because certain Members of this House were indulging in giving datails. If the Hon'ble Member want to explain by quoting a few examples, that won't be irrelevant.

Smt. VIJAYADEVI RAGHAVENDRARAO DESAI.—The Chitapur High School in Gulbarga District, did not get maintenance grant for two years. Now, they are thinking of closing the Institution. I cannot understand how the Government can think of having Triple-benefit Scheme without sanctioning the grant ? I request the Government to sanction maintenance grants for such of these schools who have not yet got it and then to implement the Scheme.

The House adjourned for recess at Three of the Clock and re-assembled at Thirty Minutes past Three of the Clock.

[MR. DEPUTY SPEAKER in the Chair.]

Regarding Medical Department, many of our Hon'ble Members have already offered very valuable suggestions and I feel I must not get into details on this. But still I have got one thing to say and that is as regards the recommendations of the Government for Post-graduates

studies in the All-India Institute of Medical Sciences. In the year 1962 in the month of December the students who were working here as temporary lecturers in the Bangalore Medical College. had applied for post-graduate studies in the All-India Institute of Medical Sciences. I believe Government did not recommend th se applications on the ground that they are temporary candidates and they may come in the way of their permanent servants. Still, two of these students got admission and they are there in the All-India Institute of Medical Sciences as Mysoreans. Are they not working for post-graduate studies there as Mysoreans ? Are they not prospering as Mysoreans ? I really do not know why we must deprive those students who are having merit and who after their post-graduate studies return to us for service ? I really do not know why Government should take such a drastic step as regards temporary lecturers.

Sri K. NAGAPPA ALVA (Minister for Health).—Rules cannot be changed for the sake of two persons.

Smt. VIJAYADEVI RAGHAVENDRARAO DESAI.—This year it may be two, next year it may be four and the third year it may be ten.

Sri K. NAGAPPA ALVA.—When their case comes up, it may be considered. For the sake of one or two individuals, rules cannot be changed.

Smt. VIJAYADEVI RAGHAVENDRARAO DESAI.—Thanks. As regards the fisheries industry, my friend Smt. Mirjankar has already given detailed plan and outlay for the development of that industry. But still, I think that we must have a research station in which we can find out the calcium, phospherous and iron content of every specie of every specimen of fish so that we can find out whether it can be utilised in the manufacture of crude oil such as shark liver oil, cod liver oil and so forth.

As regards the State Social Welfare Advisory Board, various criticisms and various kinds of criticisms have cropped up on me on the floor of this House. First thought that I can give also is, I think it should be closed. But a subsequent prove into the matter has given me to understand that I must as a buffer for any criticism that may crop up here. I do agree with some of them in saying that we must have a Co-operative agency, we must have grama sevikas, conveners and so forth. But that is not the only duty that is being done by the State Social Welfare Advisory Board. It also consider grant-in-aid applications for orphanages, Mahila Mandals, nursery schools and also for some of the girls hostels and hostels for de-notified tribes. It can also give grant to the condensed course of training and it can also run urban pilot projects for factory women and children. Not only this, they can also hold Holiday Homes for children as well. When such duties are there, how can we expect the State Social Welfare Advisory Board to be closed ? I admit that we have some defects and difficulties. But if they are pointed out correctly and rightly, we would like to rectify our defects. I would

(SMT. VIJAYADEAI RAGHAVENDRARAO DESAI)

only appeal to the Hon'ble Members that they must co-operate with the Members of the Board in getting the activities of the Board into a form of success.

Now, coming to payment of compensation to the landlords on the abolition of zamindary system, page 130 in the Memorandum...the compensation estimated is nearly 65 lakhs for 1963-64. I have expressed my view several times as regards compensation to be paid for the Salar Jung Estate in Koppal Taluk, Raichur District. Actually, there are no legal heirs for this Estate. But many people have already come forward and they have filed their suits saying that they are legal heirs for that estate. Now the hearing is going on before the NIZAMATHIA-Jahgir Administrator-Hyderabad. I request the Government of Mysore to have a representative present at these hearings. I think if the claim of anybody is upheld as the legal heir to these estates, heavy compensation will have to be paid by the Government of Mysore and there would be a heavy strain on the State Exchequer for compensation.

It is an admitted fact Sir, that Gulberga needs a Medical College. How many times you want us to repeat the same thing over and over again? Since six years, we have been saying that Gulbarga must have a Medical College and I do not know whether they are hearing it or not. Again, I want a definite answer from the Government whether they intend starting a medical college this year or whether they want private institutions to come forward and start it. I would request the Government to upgrade the hospital first and then to sanction the medical college as early as possible.

Sri K. NAGAPPA ALVA.—That suggestion is very welcome.

Smt. VIJAYADEVI RAGHAVENDRARAO DESAI.—With these few remarks, I close Sir.

ಶ್ರೀ ಆರ್. ಎಲ್. ಲಕ್ಷ್ಮೀಪತಿ (ಗೌರಿಬಿದನೂರು).—ಮಾನ್ಯ ಸಭಾಪತಿಯವರೆ, ಈ ಸಭೆಯಲ್ಲಿ ಮಾತನಾಡಿದ ಅನೇಕ ಜನ ಸದಸ್ಯರ ಭಾಷಣ ಕೇಳಿದಾಗ, ಬಹಳ ಜನ ಎಲ್ಲರೂ ರೈತರ ವಿಷಯವಾಗಿ ಬಹಳ ಅನುಕಂಪದಿಂದ ಮಾತನಾಡಿದ್ದಾರೆ, ಬಹಳ ಸಂಕಟಪಟ್ಟು ಮಾತನಾಡಿದ್ದಾರೆ, ಕಣ್ಣೀರು ಸುರಿಸುವುದು ಒಂದು ಬಾಕಿ ಇತ್ತು. ಆದರೆ ವಾಸ್ತವಾಂಶ ನೋಡಿದರೆ, ಇದರಿಂದ ಪರಿಣಾಮ ಏನಾಗಿದೆಯೆಂದರೆ ರೈತನ ಕಷ್ಟ ಹೆಚ್ಚಾಗುತ್ತಾ ಇದೆ. ನಮ್ಮ ಹಣಕಾಸಿನ ಸಚಿವರು ಖೋತಾ ಬಜೆಟ್ ಇದ್ದರೂ ತೆರಿಗೆ ಹಾಕಿಲ್ಲವೆಂದು ಹೇಳಿದ್ದಾರೆ. ತೆರಿಗೆಯನ್ನು ರೈತಾಪಿ ಜನಗಳ ಮೇಲೆ ಹೊರಿಸುವುದಕ್ಕೆ ಮಾರ್ಗವಿದೆಯೇ? ಹಿಂದಿನ ಮಾನ್ಯ ಸಭೆಯಲ್ಲಿ ಸರ್ಚಾರ್ಜ್ ಹಾಕಿದ್ದಾರೆ. ಈ ಸರ್ಚಾರ್ಜ್ ಹಾಕಿದ್ದರೂ, ಇವತ್ತಿನ ದಿವಸ ರೈತನಿಗೆ ಕಂದಾಯ ಜಾಸ್ತಿ ಮಾಡಿದ್ದಾರೆ, ಎನ್ನುವುದೇ ಗೊತ್ತಿಲ್ಲ. ನಮ್ಮ ಊರ ಶಾನುಭೋಗ 1½ ರೂಪಾಯಿ ಕಂದಾಯ ಕೊಡುತ್ತಿದ್ದ ರೈತನನ್ನು 2½ ರೂಪಾಯಿ ಈ ಸಾರಿ ಕೊಡಬೇಕೆಂದು ಕೇಳಿದ್ದಕ್ಕೆ ಅವನು ನನ್ನ ಹತ್ತಿರ ಓಡಿಬಂದು, 2½ ರೂಪಾಯಿ ಹೇಗೆ ಎಂದು ಕೇಳಿದ "ಕಾಂಗ್ರೆಸ್ ಸರ್ಕಾರ ಇಷ್ಟೊಂದು ಜಾಸ್ತಿ ಮಾಡಿದರೆ, ನನಗೆ ಆಶ್ಚರ್ಯವಾಗಿದೆ" ಅಂದ. ಆತನನ್ನು ಸಮಾಧಾನ ಮಾಡಲು ಬಹಳ ಕಷ್ಟಪಟ್ಟೆ. "ಅಪ್ಪಾ, ಮಹಾತ್ಮ ಗಾಂಧಿ ಕಾಂಗ್ರೆಸ್ ಅಲ್ಲ ಇದು. ಈಗ ಕಾಂಗ್ರೆಸ್ ಬದಲಾವಣೆ ಆಗಿ ಹೋಗಿದೆ ಈಗ ನಮ್ಮ ತಾಲ್ಲೂಕಿನ ಪರಿಸ್ಥಿತಿ ಬಗ್ಗೆ ಒಂದು ನೂರಾರು ಹೇಳಬೇಕಾಗಿದೆ. ಈಗ ವೆಂಕಟರೆಡ್ಡಿ ಕಾಂಗ್ರೆಸ್ ಆಗಿ ಹೋಗಿಬಿಟ್ಟಿದೆ. ನಿಜವಾಗಿ ದುಡಿಮೆ ಮಾಡುವವನಿಗೆ, ಕಷ್ಟಪಡುವ ಜನಗಳಿಗೆ ಇಲ್ಲಿ ಅವಕಾಶವಿಲ್ಲ. ಕಷ್ಟಪಟ್ಟರೂ ಜೀವನ ಮಟ್ಟವನ್ನು ಹೆಚ್ಚಿಸಿಕೊಳ್ಳುವ ಕಾಲ ಬಂದಿಲ್ಲ." ಎಂದು ಅವನಿಗೆ ಸಮಾಧಾನ ಹೇಳಿದೆ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ನೀವೂ ಕಾಂಗ್ರೆಸಿನಲ್ಲಿದ್ದಿರಲ್ಲವೇ ?

ಶ್ರೀ ಆರ್. ಎಚ್. ಲಕ್ಷ್ಮೀಪತಿ.—ದುಡಿಯುವ ಕಾಲದಲ್ಲಿ, ಕಷ್ಟಪಟ್ಟು ಜೈಲಿಗೆ ಹೋಗುವ ಕಾಲದಲ್ಲಿ ಎಲ್ಲರೂ ಕಾಂಗ್ರೆಸ್ಸಿನಲ್ಲಿದ್ದರು. ಈಗಿನ ಕಾಂಗ್ರೆಸ್ ಸಂಸ್ಥೆಯಲ್ಲಿ ಅನೇಕ ಜನ ಹೊಸಬರಿದ್ದಾರೆ. ಏನು ಮಾಡುವುದು ? ವೆಂಕಟರೆಡ್ಡಿಯವರೂ ಕಾಂಗ್ರೆಸಿನಲ್ಲಿದ್ದಾರೆ ; ಅಂಥ ಕಾಂಗ್ರೆಸ್ ಆಗಿ ಹೋಗಿಬಿಟ್ಟಿದೆ.

Mr. DEPUTY SPEAKER.— Please do not mention names.

ಶ್ರೀ ಆರ್. ಎಚ್. ಲಕ್ಷ್ಮೀಪತಿ.—ಮುಖ್ಯ ಕಾರಣವೆಂದರೆ ರೈತನಲ್ಲಿ ಒಂದು ಸಂಘಟನೆ ಇಲ್ಲ, ಒಗ್ಗಟ್ಟಿಲ್ಲ. ಫ್ಯಾಕ್ಟರಿ ಕಾರ್ಮಿಕರು ಒಂದು ಸಂಘ ಮಾಡಿಕೊಂಡಿದ್ದಾರೆ ; ಅವರಿಗೆ ಒಬ್ಬ ನಾಯಕ ಇರುತ್ತಾನೆ ; ತೊಂದರೆ ಬಂದರೆ ತಮಗೆ ಬೇಕಾದ ಸೌಲಭ್ಯ ಒದಗಿಸಿಕೊಳ್ಳುತ್ತಾರೆ. ಆದರೆ ಆ ಒಂದು ಚೈತನ್ಯ ರೈತನಿಗಿಲ್ಲ ; ಅವನಿಗೆ ಒಂದು ಒಗ್ಗಟ್ಟು ಆಗುವ ಅವಕಾಶವಿಲ್ಲ. ಆದ್ದರಿಂದ ಸರ್ಕಾರದವರು ರೈತನಿಗೆ ಎಲ್ಲಾ ರೀತಿಯಲ್ಲಿಯೂ ನಿಗಾ ಕೊಟ್ಟು ಸಹಾಯ ನೀಡಬೇಕು. ರೈತರ ಜೀವನ ಯಾವ ರೀತಿ ಇದೆ ನೋಡಿ. ಯಾವ ಹಳ್ಳಿಯೊಳಗೇ ನೋಡಿ 10 ಎಕರೆ ನೀರಾವರಿ ಜಮೀನಿದ್ದರೆ 5 ಸಾವಿರ ರೂಪಾಯಿ ಸಾಲ ಅವನಿಗಿರುತ್ತದೆ. ಜಮೀನು ಹೆಚ್ಚಿದಂತೆಲ್ಲಾ ಅವನ ತಲೆಭಾರ ಹೆಚ್ಚುತ್ತದೆಯೇ ವಿನಃ ಸಾಲ ಕಡಿಮೆಯಾಗುವುದಿಲ್ಲ. ಸಾಯುವಾಗ ಅವನ ಮಕ್ಕಳಿಗೆ ಸಾಲ ಒಂದು ಬಿಟ್ಟು ಹೋಗುತ್ತಾನೆ. ಈ ರೀತಿ ರೈತನ ಸ್ಥಿತಿ ಮಾಡಿಬಿಟ್ಟಿದ್ದೀರಿ. ಆದ್ದರಿಂದ ರೈತನ ಸ್ಥಿತಿಯನ್ನು ಅಭಿವೃದ್ಧಿಪಡಿಸುವುದಕ್ಕೆ ಹೆಚ್ಚು ಗಮನ ಕೊಡಬೇಕಾಗಿದೆ.

ರೈತನು ಬೆಳೆಯುವ ಮಾಲಿಗೆ ಎಲ್ಲರೂ ಒಪ್ಪಿಕೊಂಡಿರುವಹಾಗೆ ಬೆಲೆ ಬಹಳ ಕಡಿಮೆಯಾಗುತ್ತಾ ಇದೆ. ಬರೀ ಬಾಯಿ ಮಾತಿನಲ್ಲಿ ಸಾಮಾನಿನ ಬೆಲೆ ಕಡಿಮೆಯಾಗಿದೆಯೆಂದು ಹೇಳುವುದಕ್ಕೆ ಹೊರಟಿದ್ದಾರೆಯೇ ಹೊರತು, ಯಾವ ರೀತಿ ನೆರವನ್ನು ರೈತನಿಗೆ ಕೊಡಬೇಕೆಂಬುದನ್ನು ಯೋಚನೆ ಮಾಡಿಲ್ಲ. ಸೊಸೈಟಿಗಳಿಂದ ಸಾಲ ಕೊಡುವರು ಬಹಳ ಶ್ಲಾಘನೀಯ ವ್ಯವಸ್ಥೆ ಮಾಡಿದ್ದಾರೆ ಆದರೆ ಆ ಸೊಸೈಟಿಯಿಂದ ತೆಗೆದುಕೊಂಡ ಸಾಲ ತೀರಿಸುವ ಮಾರ್ಗ ಹೇಗೆ ? ತಾನು ಬೆಳೆದ ಸರಕಿನಿಂದ ತೀರಿಸಬೇಕು. ನಮ್ಮ ತಾಲ್ಲೂಕಿನಲ್ಲಿ ಬೆಲ್ಲ ಮತ್ತು ಮೆಣಸಿನಕಾಯಿ ಬಹಳ ಜಾಸ್ತಿ ಬೆಳೆಯುತ್ತದೆ. ಅವುಗಳ ರೇಟು cost of production ಗಿಂತಲೂ ಕಡಿಮೆ ಇರುತ್ತದೆ; ಆವಾಗ ಸಾಲ ತೀರಿಸುವುದಕ್ಕೆ ಅವಕಾಶವಿಲ್ಲ. ಸಾಲದ ಕಂತು ಕೊಡುವುದಕ್ಕೆ ಸೊಸೈಟಿಯಲ್ಲಿ ಒಂದು ಕಾಲ ಪರಿಮಿತಿ ಇಟ್ಟಿರುತ್ತಾರೆ. ಆ ಕಂಡಿಷನ್ ಪ್ರಕಾರ ಕಾಲಪರಿಮಿತಿಯೊಳಗೆ ಹಣ ಕಟ್ಟದಿದ್ದರೆ penal interest ಹಾಕುತ್ತಾರೆ, ಹೀಗೆ ವಿಪರೀತ ಬಡ್ಡಿಯನ್ನು ಸೊಸೈಟಿಗೆ ಕೊಡುತ್ತಾನೆ.

ತಾನೇ ಪಡೆಯುವುದಕ್ಕೆ ಶಕ್ತಿ ಇಲ್ಲದೆ ರೈತನು ವರ್ತಕನಿಗೆ ಮಾರುತ್ತಾನೆ. ಅದೇ ಪದಾರ್ಥ ಒಂದಕ್ಕೆ ಎರಡರಷ್ಟಾಗುತ್ತದೆ. ಆ ಶಕ್ತಿಯನ್ನು ರೈತನಿಗೆ ಕೊಡಬೇಕಾಗುತ್ತದೆ. ಇಲ್ಲದೇ ಇದ್ದರೆ ನೀವುಮಾಡುವುದೆಲ್ಲಾ ಬೂಟಾಟಿಕೆಯಾಗುತ್ತದೆ. ರೈತನ ಹೆಸರಿನಲ್ಲಿ ಒಳ್ಳೆಯ ಮಾತನಾಡಿಕೊಂಡು ಅವನನ್ನು ಶೋಷಣೆ ಮಾಡುತ್ತಾ ಇದ್ದೀರಿ ಎಂದು ಹೇಳಬೇಕಾಗುತ್ತದೆ.

ಹಳ್ಳಿಗಳಲ್ಲಿ ಸರ್ಕಾರದವರು ಕೆಲವು ಯೋಜನೆಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಾರೆ. ರಾಜ್ಯಪಾಲರ ಭಾಷಣಕ್ಕೆ ಶ್ರೀಮಾನ್ ಗೋಪಾಲಗೌಡರು ಒಂದು ತಿದ್ದುಪಡಿ ಕಳುಹಿಸಿದ್ದರು, ಬಹಳ ಸಂತೋಷಪಟ್ಟೆ. ಅದು old age pension ಅಂತ ಹೇಳಿ ಕೊಡಬೇಕೆಂದು ಇತ್ತು. ಸರ್ಕಾರಿ ನೌಕರರು ಅಥವಾ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವವರಿಗೆ ತಾವು ಪ್ರಿವಿಲೇಜ್ ಲೀವ್ ಕೊಡುತ್ತೀರಿ, ಫರ್ಲೋ ಲೀವ್ ಕೊಡುತ್ತೀರಿ, ಕ್ಯಾಷ್ಯುಯಲ್ ಲೀವ್ ಕೊಡುತ್ತೀರಿ. ಘಾಯ ಆಯಿತು ಎಂದರೆ, ಖಾಯಿಲೆ ಬಂದರೆ ಎಲ್ಲಾ ವಿಧವಾದ ಸೌಕರ್ಯ ಒದಗಿಸುತ್ತಾ ಇದ್ದೀರಿ, ರೈತನಿಗೆ ಯಾವ ವಿಧವಾದ ಸೌಕರ್ಯ ಇದೆ ? ಐದು-ಆರು ವರ್ಷ ವಯಸ್ಸಾದನಂತರ 80 ವರ್ಷದವರೆಗೂ ಅವನು ದುಡಿಯಬೇಕು. ಯಾವ ಸೌಲಭ್ಯವೂ ಇಲ್ಲ, ಯಾವ ಸೌಕರ್ಯವೂ ಇಲ್ಲ, ಪೆನ್ಷನ್ ಇಲ್ಲ. ನಮ್ಮ ಹಳ್ಳಿಯಲ್ಲಿ ಒಬ್ಬ ಬಂದ, ಕಲ್ಲು ಕೆಲಸ ಮಾಡುತ್ತಾ ಇದ್ದ. ಅವನು ಖಾಯಿಲೆಯಿಂದ ನರಳುತ್ತಾ ಇದ್ದ. ಏಕೆ ಕೆಲಸ ಮಾಡುತ್ತಾ ಇದ್ದೀಯ ಎಂದು ಕೇಳಿದ್ದಕ್ಕೆ ಹೊಟ್ಟೆಗೆ ಇಲ್ಲ ಆದ್ದರಿಂದ ಕೆಲಸ ಮಾಡುತ್ತೇನೆ ಎಂದು ಹೇಳಿದ. ಹಾಗೆ ದುಡಿಯುತ್ತಾ ಇದ್ದರೆ ದುಡಿಸಿಕೊಂಡು ವಯಸ್ಸಾದ ತಕ್ಷಣ ಕಳುಹಿಸಿ ಬಿಡುತ್ತಾರೆ. ಆಗ ಯಾರೂ ಇರುವುದಿಲ್ಲ, ಮಕ್ಕಳು ಇಲ್ಲ, ಜಮೀನು ಇಲ್ಲ, ಕೈಕೆಲಸದಿಂದ, ಶ್ರಮದಿಂದ ಜೀವನ ಮಾಡುತ್ತಾ ಇದ್ದ ಮನುಷ್ಯನನ್ನು ಸಮಾಜದಲ್ಲಿ ಹೊರೆಯಾಗಿ ಪರಿಣಮಿಸುವಂಥ ಪರಿಸ್ಥಿತಿಗೆ ಗುರಿಮಾಡಿದಂತಾಗುತ್ತದೆ. ಆದ್ದರಿಂದ ಗೋಪಾಲಗೌಡರು ರಾಜ್ಯಪಾಲರ ಭಾಷಣಕ್ಕೆ ತಿದ್ದುಪಡಿ ತಂದಂಥ old age pension ಯೋಜನೆಯನ್ನು ಜಾರಿಗೆ ತರಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇವತ್ತು ತೆರಿಗೆ ವಿಧಿಸಿದ್ದೀರಿ. ನಮ್ಮ ಸಂಸ್ಥಾನದಲ್ಲಿ ತೆರಿಗೆ ವಿಧಿಸಿಲ್ಲ ಎಂದು ಹೇಳುತ್ತೀರಿ. ತಮಗೆ ಅವಕಾಶವಿಲ್ಲದೇ ಹಾಕಿಲ್ಲವೇ ಹೊರತು ಅವಕಾಶವಿದ್ದಿದ್ದರೆ ಖಂಡಿತವಾಗಿಯೂ ಹಾಕುತ್ತಾ

(ಶ್ರೀ ಆರ್. ಎಚ್. ಲಕ್ಷ್ಮೀಕಾಂತಪ್ಪ)

ಇದ್ದೀರಿ. ಈಗ ರೈತ ಎಷ್ಟು ಹೊರೆ ಹೊರಬಹುದೋ ಅಷ್ಟು ಹೇರಿದ್ದೀರಿ. ಶಕ್ತಿಮೀರಿ ತೆರಿಗೆಗಳನ್ನು ಅವನು ಈಗಾಗಲೇ ಕೊಡುತ್ತಾ ಇದ್ದಾನೆ. ಅದರ ಮೇಲೆ ಕೇಂದ್ರ ಸರ್ಕಾರದವರು ಟ್ಯಾಕ್ಸ್ ಹಾಕಿದ್ದಾರೆ. ಈ ರೀತಿ ಅಪ್ರತ್ಯಕ್ಷ ತೆರಿಗೆಗಳು ಬಹಳ ಜಾಸ್ತಿಯಾಗುತ್ತಾ ಇವೆ. ಸೀಮೆಎಣ್ಣೆಯ ಮೇಲೆ ಈಗ ತೆರಿಗೆ ಬಿದ್ದಿದೆ. ಈ ರೀತಿ ತೆರಿಗೆಗಳನ್ನು ಹೆಚ್ಚು ಹೆಚ್ಚು ಮಾಡುತ್ತಾ ಹೋದರೆ ವಿಷಮ ಪರಿಸ್ಥಿತಿ ಬಂದೀತು. ತೆರಿಗೆ ಕೊಡೋಣ, ಕೊಡಬೇಕಾದ್ದೇ. ಆದರೆ ಕಷ್ಟಪಟ್ಟು, ಹೊಟ್ಟೆಪಾಡಿಗೆ ಸಾಲದೇ ಇದ್ದಾಗ್ಯೂ, ತೆರಿಗೆ ಕೊಡಬೇಕೆಂದು ಹೇಳಿ ಜನರಿಂದ ವಸೂಲುಮಾಡಿದ ಹಣ ಯಾವರೀತಿ ವಿನಿಯೋಗವಾಗುತ್ತಾ ಇದೆ, ವಿತರಣೆಯಿಂದ ಖರ್ಚಾಗುತ್ತಾ ಇದೆಯೇ ? ಜನರಿಗೆ ಸೌಲಭ್ಯ ಸೌಕರ್ಯ ಮಾಡಲಾಗಿದೆಯೇ ? ಎಂಬುದನ್ನು ನೋಡಬೇಕಾಗಿದೆ. ಮಂತ್ರಿಗಳು ಟೂರ್ ಹೋಗಲು ಬೇಡ ಎಂದು ಹೇಳುವುದಿಲ್ಲ. ಎಂಟು-ಹತ್ತು ಜನ ಮಂತ್ರಿಗಳು ಒಂದೇ ದಿವಸ ಒಂದು ಸ್ಥಳಕ್ಕೆ ಹೋದರೆ ಅಧಿಕಾರಿಗಳು ಯಾವರೀತಿ ಕೆಲಸ ಮಾಡಬೇಕು ? ಪ್ರತಿಯೊಬ್ಬ ಮಂತ್ರಿಗಳೂ ಏಕೆ ಬರಬೇಕು ? ಅವರಿಗೆ ಟಿ.ಎ. ಗೆ ಆಗತಕ್ಕ ಖರ್ಚೆಷ್ಟು ? ಎಂಬುದನ್ನು ಆಲೋಚನೆ ಮಾಡಬೇಕು. ಆದ್ದರಿಂದ ನಿಮ್ಮ ಟೂರ್‌ನ್ನು ಸದ್ಯಕ್ಕೆ ಕಡಿಮೆ ಮಾಡಿ. ರೈತ ಕಷ್ಟಪಡುವವನು, ದೇಶಕ್ಕೆ ಸಂಪತ್ತು ತರುವವನು, ಸರ್ಕಾರಕ್ಕೆ ದುಡ್ಡು ಕೊಡುವವನು, ಗಾಂಧೀಜಿಯವರು ಹೇಳುತ್ತಾ ಇದ್ದರು. ನೀವು ಮಂತ್ರಿಗಳಾದ ತಕ್ಷಣ ರೈತ ಯಾವ ರೀತಿ ಯಾವ ಸ್ಥಿತಿಯಲ್ಲಿದ್ದಾನೆ ಎಂಬುದನ್ನು ನೋಡಿಕೊಳ್ಳಿ. ಮಕ್ಕಳು ತಂದೆ ತಾಯಿಗಳ ಹತ್ತಿರ ಹೇಗೆ ಹೋಗುತ್ತಾರೋ ಹಾಗೆ ಅವರು ಮಂತ್ರಿಗಳ ಹತ್ತಿರ ಹೋಗುವಂತಾಗಬೇಕು ಎಂದು, ಈ ದಿನ ಯಾವ ಪರಿಸ್ಥಿತಿ ಇದೆ. ಮಂತ್ರಿಗಳು ಕಾರಿನಲ್ಲಿ ಬಂದರೆ ಅವರ ಆಟಾಟೋಪ ನೋಡುವುದಕ್ಕಾಗುವುದಿಲ್ಲ. ರೈತ ಅವರನ್ನು ನೋಡಿ ಎಲ್ಲೋ ಒಂದು ಕಡೆ ಹೆದರಿ ನಿಂತುಕೊಂಡಿರುತ್ತಾನೆ. ರೈತನ ಅನುಗ್ರಹದಿಂದ ನಿಮಗೆ ಮಂತ್ರಿ ಪದವಿ ಬಂತು ಎಂಬುದನ್ನು ತಾವು ತಿಳಿದುಕೊಳ್ಳುವುದಿಲ್ಲ. ಎಲ್ಲಾ ನನ್ನಿಂದಲೇ ಆಗುವುದು, ಯಾರಿಗೆ ಏನು ಬೇಕಾದರೂ ಮಾಡಬಲ್ಲೆ ಎಂಬ ಭಾವನೆ ಇಟ್ಟುಕೊಂಡು ಯಾವ ರೀತಿ ಬರುತ್ತಾರೋ ಆ ಮನಸ್ಸನ್ನು ಪರಿವರ್ತನೆ ಮಾಡಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೋ-ಆಪರೇಟೀವ್ ಇನ್ಸ್‌ಟಿಟ್ಯೂಷನ್ ಮೇಲೆ ಸ್ವಲ್ಪ ವಿಶದವಾಗಿ ಕೆಲವು ವಿಷಯಗಳನ್ನು ತಮಗೆ ಹೇಳಬೇಕೆಂದು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಒಂದು ಸಕ್ಕರೆ ಕಂಪನಿ ಪ್ರಾರಂಭ ಮಾಡುವುದಕ್ಕೆ ಲೈಸೆನ್ಸ್ ಕೊಟ್ಟಿದ್ದಾರೆ. ಅದಕ್ಕಾಗಿ ನಮ್ಮ ಸರ್ಕಾರದವರನ್ನು ಮತ್ತು ಕೇಂದ್ರ ಸರ್ಕಾರದವರನ್ನು ಅಭಿನಂದಿಸುತ್ತೇನೆ. ಲೈಸೆನ್ಸ್ ಕೊಟ್ಟ ತಕ್ಷಣ ನಾವು ಬಹಳ ಸಂತೋಷಪಟ್ಟೆವು. ಆದರೆ ಅದಕ್ಕೆ ನಾಮಕರಣ ಮಾಡಬೇಕಾಗಿದೆ, ಛೇರ್ಮನ್‌ರು ಮತ್ತು ಡೈರೆಕ್ಟರುಗಳನ್ನು. ನಾನು ಈ ನಮ್ಮ ಈ ಸಭೆಯಲ್ಲಿ ಕುಳಿತುಕೊಂಡಿದ್ದಾಗ ಒಬ್ಬ ಸಚಿವರು ನನ್ನ ಹತ್ತಿರ ಬಂದು ಸಕ್ಕರೆ ಕಂಪನಿ ಕೊಟ್ಟಿದ್ದಾರೆ, ಅದಕ್ಕೆ ಡೈರೆಕ್ಟರುಗಳನ್ನು ನಾಮಕರಣ ಮಾಡಬೇಕಾಗಿದೆ, ನಿಮ್ಮ ತಾಲ್ಲೂಕಿನಲ್ಲಿ ಬಹಳ ವಿಷಮ ಪರಿಸ್ಥಿತಿ ಇದೆ, ಆದ್ದರಿಂದ ಯಾರ್ಯಾರನ್ನು ನಾಮಕರಣ ಮಾಡೋಣ ಎಂದು ಕೇಳಿದರು. ಪರಿಶುದ್ಧವಾದ ಮನಸ್ಸಿನಿಂದ ಬೇರೆ ಯಾವ ಯೋಚನೆಯೂ ಮಾಡದೆ ಹೇಳಿದೆ, ನಮ್ಮ ತಾಲ್ಲೂಕಿನಲ್ಲಿ ಎರಡು ಪಾರ್ಟಿ ಇದೆ, ಅದು ತಮಗೂ ಗೊತ್ತು. ಖಂಡಿತವಾಗಿಯೂ ಅದನ್ನು ಸರಿತೂಗಿಸಿ ಈ ನಾಮಕರಣ ಮಾಡಿ. ಎಲ್ಲರ ಪ್ರಯತ್ನದಿಂದ ಕೇಂದ್ರದವರು ಸಕ್ಕರೆ ಕಂಪನಿ ಕೊಟ್ಟಿದ್ದಾರೆ, ಎಲ್ಲರೂ ಕೂಡ ಪಾರ್ಟಿ, ಪಕ್ಷಗಳ ವ್ಯತ್ಯಾಸ ಬಿಟ್ಟು ಕಂಪನಿಗಾಗಿ ದುಡಿಯುವುದಕ್ಕೆ ತಯಾರಾಗಿದ್ದೇವೆ. ಪ್ರಮೋಟರ್ಸ್ ಅಂತ ಮಾಡಿಕೊಂಡಿದ್ದೇವೆ. ಷೇರು ಬಂಡವಾಳ ವಸೂಲು ಮಾಡಿದ್ದೇವೆ. ಆದರೆ ಈಗ ಸರ್ಕಾರ ತಮ್ಮ ಕೈಯಲ್ಲಿ ಅಧಿಕಾರವಿದೆ ಎಂದು ಚೈನಾ ದೇಶದವರು ನಮ್ಮ ದೇಶದಮೇಲೆ ಧಾಳಿ ಬಂದಿರುವ ಹಾಗೆ ಹೊಸ ಕಾಂಗ್ರೆಸ್‌ನವರು ಹಳೇ ಕಾಂಗ್ರೆಸ್‌ನವರ ಮೇಲೆ ಧಾಳಿ ಬಂದಿದ್ದಾರೆ. ಮಂತ್ರಿಗಳು ಬಂದರೆ ಅವರನ್ನು ತಮ್ಮ ಹೆಗಲಮೇಲೆ ಕೂಡಿಸಿಕೊಂಡು ಹೋಗುತ್ತಾರೆ. ಅಂತಹವರನ್ನು ಕಟ್ಟಿಕೊಂಡು ಒಂದು ಪಕ್ಷ ಕಟ್ಟಿದ್ದಾರೆ. ಕಟ್ಟಲಿ, ಒಪ್ಪಿಕೊಳ್ಳೋಣ. ಅವರಿಗೂ ಅವಕಾಶ ಕೊಡಲಿ. ಏಕೆಂದರೆ ಅವರು ನನ್ನ ಜೊತೆಯಲ್ಲಿದ್ದರೆ ನಾನು ಸ್ವಾಭಾವಿಕವಾಗಿ ಏನು ಮಾಡುತ್ತೇನೆ ಎಂದರೆ ನನಗೆ ಬೇಕಾದವರಿಗೆ, ನನ್ನ ಮನಸ್ಸಿಗೆ ಬಂದವರನ್ನು ಹಾಕಬಹುದು. ಅದಕ್ಕೆ ಆಕ್ಷೇಪಣೆ ಮಾಡುವುದಿಲ್ಲ. ಇವತ್ತು ಸ್ಪೀಕರ್ ಇದ್ದಾರೆ. ಆ ಸ್ಥಾನ ಅಲಂಕಾರವಮಾಡಬೇಕಾಗಿದ್ದರೆ ಒಂದು ಗಂಭೀರ ಇರಬೇಕು, ಒಂದು ಚೈತನ್ಯ ಇರಬೇಕು. ಅದನ್ನೆಲ್ಲಾ ನೋಡಿಕೊಂಡು ಆ ಸ್ಥಾನ ಕೊಟ್ಟರೆ ಸಂತೋಷ ಪಡುತ್ತೇನೆ. ಹಾಗಲ್ಲದೇ ತಮಗೆ ಬೇಕಾದವರು ಎಂದು ಹೊಸ ಕಾಂಗ್ರೆಸ್‌ನವರು ಚೈನಾ ಬಂದಂತೆ ಬಂದವರನ್ನು ಇದೇ ನಮ್ಮ ಸಭೆಯ ಸದಸ್ಯರಾಗಿದ್ದ ವೆಂಕಟರೆಡ್ಡಿಯವರನ್ನು ನಾಮಕರಣ ಮಾಡಿದರೆ ಅವರಿಗೆ ಫ್ಯಾಕ್ಟರಿ ವಿಚಾರದಲ್ಲಿ ಏನು ಅನುಭವ ಇದೆ ?

Mr. DEPUTY SPEAKER.—Don't bring in names.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇವತ್ತು ಅಂಥವರನ್ನು ಛೇರ್ಮನ್ ಆಗಿ ಮಾಡಿದ್ದೀರಿ. ಈ ನಮ್ಮ ಸಭೆಗೆ ಅವರ ವಿಚಾರ ಎಲ್ಲಾ ಗೊತ್ತಿದೆ. ಛೇರ್ಮನ್ ಸ್ಥಾನಕ್ಕೆ ಏನು ಅರ್ಹತೆ ಇರಬೇಕು, ಯೋಚನೆ ಮಾಡಿ. ಆ ರೀತಿ ನಾಮಕರಣ ಮಾಡಿರುವುದು is it not a reflection on the Ministry itself? ನನ್ನ ಸ್ನೇಹಿತರ ವಿಚಾರ ನನಗೆ ತಿಳಿಯುತ್ತದೆ. ನಾನು ಎಂಥವನು ಎಂಬುದನ್ನು ನನ್ನ ಸ್ನೇಹಿತರು ಹೇಳುತ್ತಾರೆ. ಇವತ್ತು ಆ ಛೇರ್ಮನ್‌ಗಿರಿಗೆ ಫ್ಯಾಕ್ಟರಿ ಅನುಭವ ಇಲ್ಲದೇ ಇರುವವರು ಆ ಸ್ಥಾನದಲ್ಲಿದ್ದರೆ ಆ ಫ್ಯಾಕ್ಟರಿ ಉಳಿಯುತ್ತದೆಯೋ ಎಂಬುದನ್ನು ಯೋಚನೆ ಮಾಡಬೇಕು. ಇದನ್ನು ಏಕೆ ಹೇಳುತ್ತೇನೆ ಎಂದರೆ ನೀವೇನೋ ಮಾಡಿದ್ದೀರಿ, ಸಂಪೂರ್ಣ ಸಹಕಾರ ಕೊಡುತ್ತೇವೆ, ಆದರೆ ಫ್ಯಾಕ್ಟರಿಯಲ್ಲಿ ಅವ್ಯವಸ್ಥೆಯಾಗದಂತೆ ನಡೆಯುತ್ತದೆಯೇ ಎನ್ನುವುದರ ಕಡೆಗೆ ಮನಸ್ಸು ಕೊಟ್ಟಿಲ್ಲ ಎಂದು ಹೇಳುತ್ತೇನೆ. ಇವತ್ತು 3 ಲಕ್ಷ ರೂಪಾಯಿ ಜನಗಳಿಂದ ವಸೂಲು ಮಾಡಿದ್ದೇವೆ, ಮ್ಯಾಚಿಂಗ್ ಗ್ರ್ಯಾಂಟ್ ಎಂದು ಸರ್ಕಾರದಿಂದ ಕೊಡಬೇಕಾಗುತ್ತದೆ ಮತ್ತು ಐ.ಸಿ.ಎಫ್. ಫಂಡಿನಿಂದ 80-90 ಲಕ್ಷ ರೂಪಾಯಿ ಕೊಡಬೇಕಾಗುತ್ತದೆ. 2 ಕೋಟಿ ರೂಪಾಯಿಗಳ ವ್ಯವಹಾರ ಆ ಛೇರ್ಮನ್‌ರವರಿಗೆ ವಹಿಸಿದ್ದೀರಿ.

4-00 P.M.

ಆ ನಮ್ಮ ಸಕ್ಕರೆ ಕಾರ್ಖಾನೆಗೆ ಒಂದು ಡಿಸೈನನ್ನು ಮಾಡಿಸಬೇಕೆಂದು ತೀರ್ಮಾನವಾಯಿತು. ಆದರೆ ಇಂಥಾ ಫ್ಯಾಕ್ಟರಿಗಳಿಗೆ ಕೇಂದ್ರ ಸರ್ಕಾರದಲ್ಲೂ ಹಾಗೂ ನಮ್ಮ ಸರ್ಕಾರದಲ್ಲೂ ಬೇಕಾದಷ್ಟು ಡಿಸೈನ್‌ಗಳಿವೆ. ಈ ವಿಚಾರದಲ್ಲಿ ನಮ್ಮಲಿರತಕ್ಕ ಯಾರನ್ನಾದರೂ ನುರಿತ ಒಬ್ಬ ಎಗ್ಸಿಕ್ಯುಟಿವ್ ಇಂಜಿನಿಯರನ್ನು ಇಟ್ಟುಕೊಂಡರೆ ಸಾಕಾಗುತ್ತೆಂದು ಹೇಳಿದೆವು. ಆದರೆ ಅವರು ಈ ಸಲಹೆಯನ್ನೊಪ್ಪಲಿಲ್ಲ. ಕಾರಣ ಅವರು ಯಾರೋ ಅವರಿಗೆ ಬೇಕಾದವರೊಬ್ಬರಿಗೆ ಈ ಮೂಲಕ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶವಿಟ್ಟುಕೊಂಡು ಅದಕ್ಕಾಗಿ ಟೆಂಡರುಗಳನ್ನು ಕರೆದರು. ಅಗಲೂ ಕೂಡ ನಾವು ಹೀಗೇಕೆ ಟೆಂಡರನ್ನು ಕರೆಯಲಾಯಿತು ? ನಮ್ಮಲ್ಲಿ ಬೇಕಾದಂಥ ಇಂಜಿನಿಯರುಗಳಿದ್ದಾರೆ, P. W. D. ಯಲ್ಲಿ ಅರಿತುನುರಿತವರಿದ್ದಾರೆ, ಅವರನ್ನು ವಿಚಾರಮಾಡಿ ಟೆಂಡರ್ ಕರೆಯುವುದು ನಮಗೆ ಅನುಕೂಲವೇ ಅಥವಾ ಇಲ್ಲವೇ ಎನ್ನತಕ್ಕ ಸಲಹೆಗಳನ್ನು ಕೇಳಿ ಅನಂತರ ಈ ಟೆಂಡರನ್ನು ಕರೆಯಬೇಕೇ ಅಥವಾ ಬೇಡವೇ ಎಂಬುದನ್ನು ತೀರ್ಮಾನಿಸಬೇಕಾಗಿತ್ತು ಎಂತ ಹೇಳಿದ್ದಕ್ಕೆ ಅವರು ಹಾಗೆಲ್ಲ ಮಾಡುವುದಕ್ಕಾಗುವುದಿಲ್ಲ ನಾವು ಟೆಂಡರನ್ನು ಕರೆಯಲೇಬೇಕು, ಈ ಕೆಲಸವನ್ನು ಯಾರಾದರೊಬ್ಬ ಟೆಂಡರಿಗೆ ಕೊಟ್ಟೇಕೊಡಬೇಕು ಎಂತ ಹೇಳಿ ಅವರು ತಮಗೆ ಬೇಕಾದವರೊಬ್ಬರಿಗೆ ಈ ಕೆಲಸವನ್ನು ಒಪ್ಪಿಸಿದರು. ಈ ಕಾರ್ಯಕ್ಕಾದರೂ ಎಗ್ಸಿಕ್ಯುಟಿವ್ ಇಂಜಿನಿಯರ್‌ಗಳು ಬೇಕು, ಅಸಿಸ್ಟೆಂಟ್ ಇಂಜಿನಿಯರುಗಳು ಬೇಕು, ಸೂಪರ್‌ವೈಜರುಗಳು ಬೇಕು ಇಷ್ಟೆಲ್ಲಾ ಬೇಕಾಗಿದೆ. ಆದರೆ ಈ ದಿವಸ ನಮ್ಮಲ್ಲಿ ಅಂಥ ಶರಾವತಿ ಯೋಜನೆಯ ಕೆಲಸವನ್ನೇ ನಡೆಸತಕ್ಕಂಥ ದಕ್ಷರಾದ ಇಂಜಿನಿಯರುಗಳಿದ್ದರೂ ನಾವು ಇಲ್ಲಿ ಈ ಫ್ಯಾಕ್ಟರಿಯ ಡಿಸೈನಿಗೆ ಒಬ್ಬರನ್ನು ಟೆಂಡರ್ ಮೂಲಕ ಕರೆಯತಕ್ಕ ಪರಿಸ್ಥಿತಿ ಏನಿತ್ತೋ ತಿಳಿಯದು. ಈ ದಿವಸ ಆ ಸಕ್ಕರೆ ಫ್ಯಾಕ್ಟರಿಗೆ ಹಾಕಿರತಕ್ಕ ಬಂಡವಾಳ 2 ಕೋಟಿ ರೂ.ಗಳು. ಆದರೆ ಅಲ್ಲಿ ಈ ದಿವಸ ಒಬ್ಬ ಮೇನೇಜಿಂಗ್ ಡೈರೆಕ್ಟರ್ ಇಲ್ಲ : ಅವರಿಗೆ ಸರ್ಕಾರದವರೇನೂ ಸಂಬಳ ಕೊಡುವುದು ಬೇಡ. ಆದರೆ ಇವರು ಅಲ್ಲಿಗೆ ಒಬ್ಬ ಸತ್ಯಸಂಧನಾದ ಹಾಗೂ ದಕ್ಷನಾಗಿ ಬಿಗಿಯಿಂದ ಆಡಳಿತ ನಡೆಸತಕ್ಕಂಥಾ ಒಬ್ಬ ವ್ಯಕ್ತಿಯನ್ನು ನೇಮಕಮಾಡಿ ಅಂತ ಕೇಳಿಕೊಳ್ಳುತ್ತೇನೆ. ಈಗ ನಾನು ಹೇಳಿದ ವಿಷಯಗಳನ್ನೆಲ್ಲ ಸ್ವಲ್ಪ ಸರ್ಕಾರದವರು ಪರಿಶೀಲನೆಮಾಡಿ ಅಲ್ಲಿರತಕ್ಕ ಅವ್ಯವಸ್ಥೆಯನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲ್ಲೂಕ್‌ನಲ್ಲಿ ಒರಿಜಿನಲ್ ಟೊಬ್ಯಾಕೊ ಬೆಳೆಯುವಂಥಾ ಸ್ಥಳ ಅದು. ಈ ಬೆಳೆಯಿಂದ ನಮ್ಮ ದೇಶಕ್ಕೆ ಫಾರಿನ್ ಎಕ್ಸ್‌ಛೇಂಜ್‌ನ ಅನುಕೂಲವಿದೆ. ಇದು ಡಾಲರನ್ನು ಸಂಪಾದಿಸತಕ್ಕಂಥಾ ಬೆಳೆ. ಇಂಥಾ ಬೆಳೆಯನ್ನು ತೆಗೆಯುತಕ್ಕ ಆ ಜನರಿಗೆ ಸರ್ಕಾರದವರು ಒಂದು ಹೆಚ್ಚಿನ ಸೌಲಭ್ಯ ದೊರೆಕಿಸಿಕೊಡಬೇಕು. ಆದರೆ ಈಗ ಅಲ್ಲಿ ಒಂದು ಮೈಸೂರು ಟೊಬ್ಯಾಕೋ ಕ್ಯೂರಿಂಗ್ ಫ್ಯಾಕ್ಟರಿ ಎಂತ ಒಂದು ಫ್ಯಾಕ್ಟರಿ ಇದೆ. ಆ ಫ್ಯಾಕ್ಟರಿಯಲ್ಲಿ ಈ ಟೊಬಾಕೊ ಬೆಳೆಯುತಕ್ಕಂಥಾ ರೈತರಿಗೆ ಪ್ರತಿನಿಧ್ಯವಿಲ್ಲ. ಈ ರೈತರಿಗೆ ಆ ಫ್ಯಾಕ್ಟರಿಯಲ್ಲಿ ಪ್ರಾತಿನಿಧ್ಯ ದೊರೆಕಿಸಲು ಒಬ್ಬ ರೈತ ಪ್ರತಿನಿಧಿಯನ್ನು ಅಲ್ಲಿಗೆ ನಾಮಕರಣ ಮಾಡಲು ಅವಕಾಶ ಮಾಡಿಕೊಡಬೇಕು. ಆಗಲೇ ಈ ಫ್ಯಾಕ್ಟರಿಯಿಂದ ಆ ರೈತರಿಗೆ ಸ್ವಲ್ಪ ಸೌಲಭ್ಯ ದೊರೆಯಲು ಅವಕಾಶವಾಗುತ್ತದೆ. ಈ ದಿವಸ ಅಲ್ಲಿ ಈ ಹೊಗೆಸೊಪ್ಪನ್ನು ಆ ಕಂಪೆನಿಯವರೇನೂ ಬೆಳೆಯುತ್ತಿಲ್ಲ. ಆ ರೈತರು ಬೆಳೆದ ಹೊಗೇಸೊಪ್ಪನ್ನೆಲ್ಲ ಈ ಕಂಪನಿಗೆ ಅವರು ಸಪ್ಲೈ ಮಾಡಬೇಕು. ಅದನ್ನು ಈ ಫ್ಯಾಕ್ಟರಿಯವರು ಹೊರಗಡೆ ಮಾರಾಟ ಮಾಡಿಕೊಂಡು ಲಾಭ ಪಡೆಯುತ್ತಿದ್ದಾರೆ. ರೈತನಿಗೆ ಈ ಲಾಭದಲ್ಲಿ ಏನೂ ದೊರೆಯುತ್ತಿಲ್ಲ. ಹಾಗೆ

(ಶ್ರೀ ಆರ್. ಎಚ್. ಲಕ್ಷ್ಮೀಕಾಂತಪ್ಪ)

ಈ ದಿವಸ ಆ ಫ್ಯಾಕ್ಟರಿ ಸಂಪಾದಿಸತಕ್ಕ ಅಪಾರ ಲಾಭದಲ್ಲಿ ರೈತನಿಗೂ ಸಹ ಒಂದು ಸ್ವಲ್ಪ ಭಾಗವಾದರೂ ದೊರೆಯುವಂತಾಗಬೇಕು. ಈ ಕಾರಣದಿಂದ ಅಲ್ಲಿ ರೈತನ ಪ್ರತಿನಿಧಿಯಾಗಿ ಒಬ್ಬ ಡೈರೆಕ್ಟರ್ ಇರುವಂತೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಈ ಬೆಳೆಯನ್ನು ಬೆಳೆಯುತಕ್ಕ ರೈತರೇ ಹೆಚ್ಚು ಷೇರುಗಳನ್ನು ಇಟ್ಟುಕೊಂಡರೆ ಅದರ ಪೂರ್ಣ ವ್ಯವಹಾರ ಇವರ ಕೈಲೇ ಇರುವಂತೆ ಆಗುತ್ತದೆ. ಹಾಗೆ ಮಾಡುವುದು ಸೂಕ್ತವಲ್ಲವೇ ?

ಶ್ರೀ ಆರ್. ಎಚ್. ಲಕ್ಷ್ಮಿಪತಿ.—ಈಗ ಆ ಟೊಬ್ಯಾಕೊ ಕಂಪೆನಿಯಲ್ಲಿ ಡೈರೆಕ್ಟರಾಗತಕ್ಕವನು ಇಷ್ಟೇ ಷೇರುಗಳನ್ನಿಟ್ಟುಕೊಳ್ಳಬೇಕು-ಅಂದರೆ ಅವನು 2,000 ರೂ.ಗಳಿಗಿಂತ ಕಡಮೆ ಷೇರುಗಳನ್ನು ಇಟ್ಟುಕೊಂಡಿದ್ದರೆ ಡೈರೆಕ್ಟರಾಗಿರಲು ಅವಕಾಶವಿಲ್ಲ ಎಂತ ಏನೋ ಒಂದು ನೇಮವಿದೆ. ಆದರೆ ಆ ನೇಮಕ್ಕೆ ಅನುಸಾರವಾಗಿ ಅಷ್ಟು ಹೆಚ್ಚಿನ ಷೇರ್ ಮೊಬಲಗನ್ನು ಕೊಡಲು ನಮ್ಮ ರೈತರಲ್ಲಿ ಶಕ್ತಿ ಇಲ್ಲ. ಆದಕಾರಣ ಸರ್ಕಾರದ ಪರವಾಗಿಯೂ ಮತ್ತು ಈಗ ಹೇಗೆ ನಾಮಕರಣ ಸದಸ್ಯರಿದ್ದಾರೋ ಹಾಗೇ ರೈತನ ಪರವಾಗಿಯೂ ಒಬ್ಬ ಸದಸ್ಯನು ಅಲ್ಲಿರುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವ್ಯವಸಾಯದ ಇಲಾಖೆಯ ವಿಷಯ : ಅಲ್ಲಿ ನಮಗೆ ಈಗ ಬಾವಿಗಳನ್ನು ಒದಗಿಸುವುದೂ ಮತ್ತು ಇರತಕ್ಕ ಬಾವಿಗಳಿಗೆ ಪಂಪ್ ಸೆಟ್‌ಗಳ ಅನುಕೂಲತೆಯನ್ನು ಸುಲಭ ಕಂತುಗಳಲ್ಲಿ ದೊರೆಯುವಂತೆ ಒಂದು ವ್ಯವಸ್ಥೆ ಮತ್ತು ಕೃತಕ ಗೊಬ್ಬರ ಹಾಗೂ ಬೆಳೆಗಳಿಗೆ ಬರತಕ್ಕ ರೋಗಗಳ ನಿವಾರಣೆಗಾಗಿ ಒಂದು ಸಂಶೋಧನಾಕೇಂದ್ರ ಒದಗಿಸಿಕೊಡಬೇಕಾಗಿದೆ ಎಂತ ಕೇಳಿಕೊಳ್ಳುತ್ತೇನೆ. ಆದರೆ ಈಗ ಸ್ವಲ್ಪಮಟ್ಟಿಗೆ ಪಂಪ್ ಸೆಟ್‌ಗಳನ್ನು ರೈತರಿಗೆ ಅಲ್ಲಲ್ಲೇ ಸರಬರಾಯಿ ಮಾಡಿಸಿದೆ. ಅದಕ್ಕಾಗಿ ನಾನು ಸರ್ಕಾರದವರಿಗೆ ನನ್ನ ಕೃತಜ್ಞತೆಗಳನ್ನರ್ಪಿಸುತ್ತೇನೆ. ಇನ್ನು ಈ ರೈತರಿಗೆ ಒದಗಿಸಬೇಕಾದ ಸೌಲಭ್ಯಗಳ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಈ ವಿಚಾರದಲ್ಲಿ ನನ್ನ ಒಂದು ಸಲಹೆಯೇನೆಂದರೆ ಈ ವ್ಯವಸಾಯದ ಕಾಲೇಜುಗಳೇನಿದ್ದರೂ ಇವು ಗ್ರಾಮಾಂತರ ಪ್ರದೇಶಗಳಲ್ಲಿರಬೇಕು. ಈ ದಿವಸ ವ್ಯವಸಾಯದಲ್ಲಿ ಪರಿಶ್ರಮ ಪಡೆಯಲು ಕಾಲೇಜಿಗೆ ಹೋಗಿ ಕೇವಲ ಟೆಸ್ಟ್ ಟ್ಯೂಬುಗಳಲ್ಲಿ ಆಸಿಡ್ ಹಾಕಿ ಟೆಸ್ಟ್ ಮಾಡುವುದಕ್ಕೆ ಬದಲಾಗಿ ರೈತನು ಕೆಲಸಮಾಡುತ್ತಿರುವ ಪ್ರದೇಶದಲ್ಲಿ ಅವನು ಮಾಡತಕ್ಕ ಕೆಲಸಕಾರ್ಯಗಳನ್ನು ಕಣ್ಣಾರೆ ನೋಡಿ ಅನಂತರ ಓದಿದರೆ ಅದು ಚೆನ್ನಾಗಿ ಮನವರಿಕೆಯಾಗುತ್ತದೆ. ಆದುದರಿಂದ ಈ ವ್ಯವಸಾಯ ದ ಕಾಲೇಜುಗಳು ಸಾಮಾನ್ಯವಾಗಿ ಬೇಸಾಯದ ಕಸುಬು ನಡೆಯುತ್ತಿರುವ ಗ್ರಾಮಾಂತರ ಪ್ರದೇಶದಲ್ಲಿದ್ದರೆ ಒಳ್ಳೆಯದು. ಈ ವ್ಯವಸಾಯದ ಕಾಲೇಜು ಎಲ್ಲಿರುತ್ತದೊ ಅಲ್ಲಿ ಕನಿಷ್ಠ ಪಕ್ಷ ಅದಕ್ಕೆ 1,000 ಎಕರೆಗಳಷ್ಟಾದರೂ ಜಮೀನಿರಬೇಕು. ಆ ಜಮೀನಲ್ಲಿ ಈ ವ್ಯಾಸಂಗ ಮಾಡತಕ್ಕ ಹುಡುಗರು ಉಳುಮೆ-ಬಿತ್ತನೆ ಕೆಲಸದಿಂದ ಹಿಡಿದು ಕೊಯ್ಲು ಕೆಲಸದವರೆಗೂ ಪ್ರತಿಯೊಂದು ಬಾಬನ್ನೂ ಅವರೇ ಸ್ವತಃಮಾಡಿ ಆ ಕಸುಬನ್ನು ಕಲಿಯಬೇಕು. ಇಷ್ಟಕ್ಕೆಲ್ಲ ಬೆಂಗಳೂರಿನಲ್ಲಿ ಅನುಕೂಲವಿಲ್ಲ. ಆದುದರಿಂದ ಈಗ ಈ ಕಾಲೇಜು ಬೆಂಗಳೂರಿನಲ್ಲಿರುವುದರಿಂದ ಏನೂ ಪ್ರಯೋಜನವಿಲ್ಲ. ಈ ಕಾಲೇಜನ್ನು ಗೌರಿಬಿದನೂರಿಗೆ ವರ್ಗಾಯಿಸಿದರೆ ಒಳ್ಳೆಯದೆಂದು ಹೇಳುತ್ತೇನೆ. ಆ ತಾಲ್ಲೂಕಿನಲ್ಲಿ ಹೆಚ್ಚಿನ ನೀರಾವರಿ ಅನುಕೂಲತೆಗಳಿವೆ. ಆ ತಾಲ್ಲೂಕಿನಲ್ಲಿ ವಿದುರಾಶ್ವತ್ಥ ಎಂಬ ಸ್ಥಳದಲ್ಲಿ ಕಪ್ಪು ಭೂಮಿ, ಕೆಂಪುಭೂಮಿ, ಮರಳುಭೂಮಿ ಹೀಗೆ ನಾನಾ ಜಾತಿಯ ಮಣ್ಣಿನಿಂದ ಕೂಡಿದತಕ್ಕ ಪ್ರದೇಶವಿದೆ. ಇಂಥಾ ಅನುಕೂಲವಾದ ಸ್ಥಳದಲ್ಲಿ ಒಂದು ಸಾವಿರ ಎಕರೆ ಜಮೀನಿರುತ್ತೆ. ಈ ಸ್ಥಳದಲ್ಲಿ ವ್ಯವಸಾಯದ ಕಾಲೇಜನ್ನು ಸ್ಥಾಪಿಸುವುದು ಒಳ್ಳೆಯದೆಂದು ಹೇಳುತ್ತೇನೆ. ಇಲ್ಲಿ ಒಂದು ಸಂಶೋಧನಾಲಯಕ್ಕೂ ಕೂಡ ಒಳ್ಳೆಯ ಅವಕಾಶವಿದೆ. ಇಂಥಕಡೆ ವಿದ್ಯಾರ್ಥಿಗಳು ಹೆಚ್ಚಿನ ಜ್ಞಾನಾರ್ಜನೆ ಮಾಡಲು ಅವಕಾಶವಿದೆ. ಆದರೆ ನಮ್ಮಲ್ಲಿ ಯಾರೋ ಒಬ್ಬ ಪುಣ್ಯಾತ್ಮರು ಅಲ್ಲಿ ಒಂದು ಪಾಲಿಟೆಕ್ನಿಕ್‌ನ್ನು ಸ್ಥಾಪಿಸುವುದಾದರೆ ಒಂದು ಲಕ್ಷ ರೂ.ಗಳನ್ನು ಒಬ್ಬರೇ ದಾನ ಮಾಡುವುದಾಗಿ ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಿದ್ದಾರೆ. ಅಲ್ಲಿಗೆ ಒಂದಾವರ್ತಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳೂ ಸಮಾಜ ಕಲ್ಯಾಣಶಾಖಾ ಮಂತ್ರಿಗಳೂ ಬಂದಿದ್ದಾಗ ಈ ಮಹನೀಯರು ಅವರನ್ನು ಭೇಟಿಮಾಡಿ ಅಲ್ಲಿ ಒಂದು ಪಾಲಿಟೆಕ್ನಿಕ್ ಸ್ಥಾಪಿಸುವುದಾದರೆ ಒಂದು ಲಕ್ಷ ರೂ.ಗಳನ್ನು ಕೊಡುವುದಾಗಿ ಒಂದು ಮನವಿಯನ್ನೊಪ್ಪಿಸಿದರು. ಆಗ ಸಮಾಜ ಕಲ್ಯಾಣ ಬಾಬಿನ ಮಂತ್ರಿಗಳು ಅಲ್ಲಿ ಹೆಣ್ಣು ಮಕ್ಕಳ ಶ್ರಮದಾನಕ್ಕೆ ಸಂಬಂಧಪಟ್ಟ ಒಂದು ಶಾಲೆಯನ್ನು ಏರ್ಪಾಡು ಮಾಡುವುದಾಗಿ ಮಾತು ಕೊಟ್ಟು ಬಂದಿದ್ದರು. ಆದರೆ ಇತ್ತೀಚಿಗೆ ಅದು ಏನಾಯಿತೆಂಬುದೇ ಗೊತ್ತಿಲ್ಲ. ಇನ್ನೇನು ಈ ವರ್ಷ

ಕಳೆದು ನಾಳೆ ಏಪ್ರಿಲ್-ಮೇ ಆಖೈರಾದ ಕೂಡಲೆ ಸ್ಕೂಲುಗಳ ಬಾಗಿಲನ್ನು ತೆಗೆಯುತ್ತಾರೆ. ಅಷ್ಟರೊಳಗೆ ಈ ಕಾರ್ಯಫಲ ದೊರೆಕಿಸುವಂತೆ ಜಾಗ್ರತೆ ಇದನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ದಿವಸ ಹಳ್ಳಿಗಾಡುಗಳಲ್ಲಿ ಸಾಮಾನ್ಯವಾಗಿ ನಮ್ಮ ಈ ಪ್ರಜಾಪ್ರಭುತ್ವ ಚೆನ್ನಾಗಿ ಯಶಸ್ವಿಯಾಗಿ ನಡೆಯಬೇಕಾಗಿದ್ದರೆ ಜನರೆಲ್ಲರೂ ವಿದ್ಯಾವಂತರಾಗಿರಬೇಕು. ಈಗ ಅಲ್ಲಲ್ಲೇ ಖಾಸಗಿಯವರು ಮುಂದೆ ಬಂದು ಹೈಸ್ಕೂಲುಗಳನ್ನು ತೆರೆಯುತ್ತಿದ್ದಾರೆ. ಆದರೆ ಈಗ ಹೊಸದಾಗಿ ಹೈಸ್ಕೂಲುಗಳನ್ನು ತೆರೆಯತಕ್ಕ ಖಾಸಗೀ ಜನರಿಗೆ ಈ ಗ್ರಾಂಟ್-ಇನ್-ಎಯ್ಡನ್ನು ಮುಂದುವರಿಸುವುದಕ್ಕಾಗುವುದಿಲ್ಲ ಎಂತ ಹೇಳುತ್ತಿದ್ದಾರೆ. ಸರ್ಕಾರದವರು ದಯವಿಟ್ಟು ಹೀಗೆ ಮಾಡಬಾರದು. ಎಲ್ಲೆಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಹಳ್ಳೀ ಜನರು ಕಟ್ಟಡ, ಇತ್ಯಾದಿ ಸಹಾಯ ಮಾಡಲು ಮುಂದೆ ಬಂದರೆ ಅಂಥ ಕಡೆಗಳಲ್ಲಿ ಹೈಸ್ಕೂಲನ್ನು ಸ್ಥಾಪಿಸಲು ಸರ್ಕಾರದವರು ಖಂಡಿತ ಅವಕಾಶ ಕಲ್ಪಿಸಿಕೊಟ್ಟು ಅವುಗಳಿಗೆ ಹಿಂದಿನಂತೆ ದ್ರವ್ಯ ಸಹಾಯ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕಂಪಲ್‌ಸರಿ ಎಜುಕೇಷನ್ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬೇಕಾಗಿದೆ. ಒಂದೊಂದು ಕುಟುಂಬದಲ್ಲಿ ಹಳ್ಳಿಗಳಲ್ಲಿ ಎಷ್ಟು ಜನ ಇದ್ದರೂ, ಅವರು ಎಷ್ಟೇ ದುಡಿದರೂ ಹೊಟ್ಟೆಗೆ ಸಾಲುವುದಿಲ್ಲ. ಅಂಥ ಪ್ರಸಂಗ ಇರುವುದರಿಂದ ಆ ಕುಟುಂಬಗಳಲ್ಲಿ 8-10 ವರ್ಷದ ಹುಡುಗರಿದ್ದರೆ ಆ ಹುಡುಗರನ್ನು ನೀವು ಎಷ್ಟೇ ಒತ್ತಾಯ ಮಾಡಿದರೂ ಅವರು ಸ್ಕೂಲಿಗೆ ಕಳುಹಿಸುವುದಿಲ್ಲ. ಕೂಲಿ ಮಾಡಲು ಕಳುಹಿಸುತ್ತಾರೆ. ಹೀಗಾಗಿ ಹಳ್ಳಿಗಳಲ್ಲಿ ಈ ವಿದ್ಯಾಭ್ಯಾಸ ಮುಂದುವರಿಯಲು ತೊಂದರೆ ಇದೆ. ಅದಕ್ಕಾಗಿ ನನ್ನ ಒಂದು ಸಲಹೆ ಏನೆಂದರೆ ಈ ಶಾಲೆಗಳನ್ನು ಬೆಳಗ್ಗೆ 8 ಗಂಟೆಗೆ ಪ್ರಾರಂಭಿಸಿ 10 ಗಂಟೆಗೆ ಮುಗಿಸಿದರೆ ಆ ವೇಳೆಯಲ್ಲಿ ಆ ಹುಡುಗರಿಗೇನೂ ಕೆಲಸವಿರುವುದಿಲ್ಲ. ಆಗ ಆ ಹುಡುಗರೆಲ್ಲರೂ ಶಾಲೆಗೆ ಬರುತ್ತಾರೆ. ಆದ್ದರಿಂದ ಹೀಗೆ ಶಾಲೆಗಳನ್ನು ಓಪನ್ ಮಾಡತಕ್ಕ ವಿಚಾರದಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಈ ಹಾಸ್ಟಲುಗಳ ವಿಚಾರ : ಈಗಾಗಲೇ ಅನೇಕರು ಈ ವಿಚಾರದಲ್ಲಿ ಮಾತನಾಡಿದ್ದಾರೆ. ಇತ್ತೀಚಿಗೆ ದೇಶದಲ್ಲಿ ಈ ಜಾತೀಯತೆ ಜಾಸ್ತಿಯಾಗಿದೆ ಎಂತ ಎಲ್ಲರೂ ಹೇಳುತ್ತಿದ್ದಾರೆ. ಆದರೆ ಅದನ್ನು ತೆಗೆದುಹಾಕಲು ಏನು ಮಾಡಬೇಕೆಂಬುದನ್ನು ನಾವೀಗ ಆಲೋಚನೆ ಮಾಡಬೇಕಾಗಿದೆ. ಮೊನ್ನೆತಾನೆ ಸಮಾಜ ಕಲ್ಯಾಣಶಾಖಾ ಮಂತ್ರಿಗಳು ಒಕ್ಕಲಿಗರ ಹಾಸ್ಟಲು, ಬ್ರಾಹ್ಮಣರ ಹಾಸ್ಟಲ್, ಹರಿಜನರ ಹಾಸ್ಟಲ್ ಎಂತ ನಾನಾ ಜಾತೀಯತೆ ಹಾಸ್ಟಲನ್ನು ತೆರೆಯಲು ಎಲ್ಲಿವರೆಗೆ ಹೀಗೇ ಉತ್ತೇಜನ ಕೊಡಲಾಗುವುದೋ ಅಲ್ಲಿಯವರೆಗೂ ಆ ಹಾಸ್ಟಲುಗಳಲ್ಲಿ ವಿದ್ಯಾವಂತರಾಗತಕ್ಕ ಜನರಲ್ಲಿ ಆ ಜಾತೀಯತೆ ಭಾವನೆ ಹೋಗುವುದಿಲ್ಲ. ಆದಕಾರಣ ಇದನ್ನು ತಡೆಗಟ್ಟತಕ್ಕ ಸಲುವಾಗಿ ಈ ಕಮ್ಯುನಲ್ ಹಾಸ್ಟಲುಗಳಿಗೆ ಕೊಡತಕ್ಕ ಪ್ರೋತ್ಸಾಹವನ್ನು ನಿಲ್ಲಿಸಿ ಇವುಗಳನ್ನು ಡಿಸ್ಕರೇಜ್ ಮಾಡಬೇಕು. ಈ ಜಾತೀಯತೆಯು ಸಾಲದೇನೋ ಎಂಬಂತೆ ಈಗ ಇದರ ಜೊತೆಗೆ ಪ್ರಾಂತೀಯತೆ ಭಾವನೆಗಳು ಬೇರೆ ಬೆಳೆಯುತ್ತಿವೆ. ಈಗ ನಮ್ಮಲ್ಲಿ ಕನ್ನಡ ಮಾತನಾಡತಕ್ಕ ಜನಗಳೇ ಇದ್ದಾರೆ. ಇಲ್ಲಿಂದ ಸ್ವಲ್ಪ ಮುಂದಕ್ಕೆ ಹೋದರೆ ಮದ್ರಾಸ್‌ರಾಜ್ಯ ಬರುತ್ತೆ. ಅಲ್ಲಿ ಆಗಲೆ ತಮಿಳು ಭಾಷೆ. ಇತ್ತ ಹಿಂದೂಪುರಕ್ಕೆ ಬಂದರೆ ಅಲ್ಲಿ ಆಗಲೇ ತೆಲಗು ಹೀಗೆ ನಾನಾ ಭಾಷೆಗಳಿವೆ. ನಮ್ಮ ರಾಷ್ಟ್ರ ಭಾಷೆಯಾದ ಹಿಂದಿ ಇನ್ನೂ ಸಾಕಷ್ಟು ಡೆವಲಪ್ ಆಗಿಲ್ಲ. ಅದು ಡೆವಲಪ್ ಆಗುವವರೆಗೂ ಈಗಿರತಕ್ಕ ಇಂಗ್ಲೀಷ್ ಭಾಷೆಗೆ ಸಾಕಷ್ಟು ಅವಕಾಶ ಇರಲೇಬೇಕೆಂದು ಹೇಳುತ್ತೇನೆ.

Mr. DEPUTY SPEAKER.—Sri Lakshmikanthappa will now speak.

Sri S. SIVAPPA.—Sir, Member after member from the Congress party are being asked to speak. It is not fair. There is no use of our sitting here, if you do not allow us to participate. The Ministers will take the entire day tomorrow. If we cannot speak today, why should we sit here ?

Mr. DEPUTY SPEAKER.—I will try to accommodate as many as possible.

Sri S. SIVAPPA.—If you will tell so-and-so will speak, we will sit. otherwise we will go.

Sri M. C. BASAPPA.—(Chamarajanager) Under the Rules of Procedure, there is no distinction between Congress Members and P.S.P. Members.

Mr. DEPUTY SPEAKER.—Sri Lakshmikanthappa may speak.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—(ಸಾಗರ) ಮಾನ್ಯ ಸಭಾಪತಿಗಳೆ, ಇದುವರೆಗೂ ಅನೇಕ ಮಾನ್ಯ ಸದಸ್ಯರು 1963-64 ರ ಮುಂಗಡ ಪತ್ರದ ಮೇಲೆ ಸಾಕಷ್ಟು ಮಾತನಾಡಿದ್ದಾರೆ. ಮುಂಗಡ ಪತ್ರದಲ್ಲಿ ಹೊಸ ತೆರಿಗೆಗಳಿಲ್ಲದೆ ಇರುವುದು ಸಮಾಧಾನವೂ, ಸ್ವಾಗತಾರ್ಹವೂ ಆಗಿರ ತಕ್ಕ ವಿಚಾರ. ಇಂಥ ಒಂದು ಮುಂಗಡ ಪತ್ರವನ್ನು ನಾನೂ ಸಹ ಸ್ವಾಗತಿಸಲು ನಿಂತಿದ್ದೇನೆ. ಇದರಲ್ಲಿ ಹೊಸದಾಗಿ ತೆರಿಗೆಗಳನ್ನು ಹಾಕದೇ ಇದ್ದಾಗ್ಯೂ ಕೂಡ ಈಗಾಗಲೇ ಹೆಚ್ಚು ತೆರಿಗೆಗಳನ್ನು ಹಾಕಿದ್ದಾರೆ, ಇಲ್ಲಿ ಅವಕಾಶವಿಲ್ಲದೆ ಬಿಟ್ಟಿದ್ದಾರೆಂದು ಅನೇಕ ಸದಸ್ಯರು ಈ ಮುಂಗಡ ಪತ್ರಕ್ಕೆ ವಿರೋಧವನ್ನು ತೋರ್ಪಡಿಸಿದ್ದಾರೆ. ನಾವಾದರೂ ಕೂಡ ಇವೊತ್ತಿನ ತುರ್ತು ಪರಿಸ್ಥಿತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಸನ್ನಿವೇಶದಲ್ಲಿ ಆ ಹೊರೆಯನ್ನು ನಮ್ಮ ದೇಶ ಬಾಂಧವರು ಹೊತ್ತು ದೇಶದ ಅಭಿವೃದ್ಧಿಯನ್ನು ಸಾಧಿಸಬೇಕು ಎನ್ನುವುದಕ್ಕಾಗಿ ಶ್ರಮಿಸುತ್ತಿದಾರೆಂದು ಹೇಳುವಾಗ ತೆರಿಗೆಗಳನ್ನು ನಾವು ವಿರೋಧಿಸುವ ಸನ್ನಿವೇಶಬೇಡ. ನಾವು ಹೆಚ್ಚು ತೆರಿಗೆಯನ್ನು ಕೊಡತಕ್ಕ ಶಕ್ತಿ ನಮಗೆ ಬರಬೇಕು, ಆ ಒಂದು ಶಕ್ತಿಯನ್ನು ನಾವು ಸಂಪಾದಿಸಬೇಕು ಎನ್ನುವ ಯೋಜನೆಯನ್ನು ನಾವು ರೂಪಿಸಿಕೊಳ್ಳಬೇಕಾದ್ದು ನಮ್ಮ ಮುಖ್ಯ ಕರ್ತವ್ಯವಾಗಿದೆ.

[MR. SPEAKER in the Chair]

ಮುಂಗಡ ಪತ್ರದಲ್ಲಿ ಇಂಥಹ ತುರ್ತು ಪರಿಸ್ಥಿತಿಯಲ್ಲಿಯೂ ಕೂಡ ಅಧಿಕಾರಿಗಳಿಗೆ ಸರ್ಕಾರ ದವರು ಕೆಲವು ಭಾಗ ಬಡತಿಯನ್ನು ಕೊಡಲು ಸೂಚಿಸಲ್ಪಟ್ಟಿದೆ. ಆ ಬಡತಿ ಕೊಟ್ಟಿರತಕ್ಕದ್ದು ಕಡಮೆ ಸಂಬಳ ಬರತಕ್ಕವರಿಗೆ ಕಡಮೆ ಪ್ರಮಾಣ ಮತ್ತು ಹೆಚ್ಚು ಸಂಬಳ ಬರತಕ್ಕವರಿಗೆ ಹೆಚ್ಚು ಪ್ರಮಾಣ ಹೀಗೆ ಕೊಟ್ಟಾಗ್ಯೂ ಕೂಡ ಅದು ಇವೊತ್ತಿನ ಪರಿಸ್ಥಿತಿಗೆ ಸಮಾಧಾನಕರವಾಗಿವೆ, ಇನ್ನೂ ಹೆಚ್ಚಿನ ಆಶಾದಾಯಕ ಪರಿಸ್ಥಿತಿ ಬರಬೇಕು ಎಂದು ಎಲ್ಲ ಸರ್ಕಾರಿ ನೌಕರರೂ ಅದರಲ್ಲಿ ಹೆಚ್ಚಿನ ಅಸಮಾಧಾನವನ್ನು ವ್ಯಕ್ತಪಡಿಸದೆ ಸಂತೋಷಪಡುವ ಸನ್ನಿವೇಶವಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ.

ಇವೊತ್ತು ಇಲ್ಲಿ ಯಾವ ಆಡಳಿತರಂಗದಲ್ಲಿ ತೆಗೆದುಕೊಂಡರೂ ಒಂದು ಸಮಾಧಾನ ಪರಿಸ್ಥಿತಿಯನ್ನು ಸರ್ಕಾರಿ ನೌಕರ ವರ್ಗದಲ್ಲಿ ನಾವು ಕಾಣುತ್ತಿಲ್ಲ. ನಮ್ಮ ರಾಜ್ಯವು ಐದು ಭಾಗಗಳಿಂದ ಕೂಡಿ ವಿಶಾಲ ಮೈಸೂರಾದನಂತರ ಅನೇಕ ಇಲಾಖೆಗಳಲ್ಲಿ ಸರ್ಕಾರಿ ನೌಕರರ ಅಂತರರಾಜ್ಯ ಸೀನಿಯಾರಿಟಿ ಪ್ರಶ್ನೆ, equation of posts, ಈ ಪ್ರಶ್ನೆಗಳು ಇತ್ಯರ್ಥವಾಗದೆ ಅಶಾಂತಿ, ಅಸಡ್ಡೆ ಮನೋಭಾವ ಇವುಗಳಿಗೆ ಅವಕಾಶವಾಗಿದೆ ಎನ್ನುವುದನ್ನು ನಾವು ನೋಡಬಹುದಾಗಿದೆ. ಯಾವುದೇ ಆಫೀಸಿಗೆ ಹೋಗಲಿ, ಯಾವ ಮಟ್ಟದಲ್ಲಿಯೇ ಆ ಅಧಿಕಾರಿ ಇರಲಿ, ಅವರಲ್ಲಿ ಹೆಚ್ಚಾಗಿ ಈ ಒಂದು ವಿಷಯದ ಚರ್ಚೆಯನ್ನು ನೋಡಬಹುದು. ಅವರಲ್ಲಿ ಸರ್ಕಾರಿ ಕಾರ್ಯದ ಬಗ್ಗೆ ಹೆಚ್ಚು ಆಸಕ್ತಿ ಕಾಣುತ್ತಿಲ್ಲ. ಹೊಸರಾಜ್ಯವಾಗಿ ಆರೇಳು ವರ್ಷಗಳಾದಾಗ್ಯೂ ಕೂಡ ಅಂತರ ರಾಜ್ಯ ಸೀನಿಯಾರಿಟಿ ಪಟ್ಟಿ ಇನ್ನೂ ಸರಿಯಾಗಿ ಆಗಿಲ್ಲ. ಅದು ಯಾವ ರೀತಿಯಲ್ಲಿ ನಮಗೆ ಅನುಕೂಲವಾಗುತ್ತದೆ, ಅನಾನುಕೂಲವಾಗುತ್ತದೆನ್ನುವ ಚರ್ಚೆಯಲ್ಲಿ ಕಾಲವನ್ನೆಲ್ಲ ಕಳೆಯುತ್ತ ಅವರವರ ಕಾರ್ಯವನ್ನು ಮರೆತು ಎಂಥ ಕೆಲಸವಾದರೂ ಬಹಳ ತಡವಾಗುತ್ತಿದೆ. ಇದಕ್ಕೆ ನಮ್ಮ ಅನುಭವದಲ್ಲಿ ಹೇಳಬೇಕು ಎಂದರೆ ತಾಲ್ಲೂಕು ಮಟ್ಟದಲ್ಲಿ ಆಗುವ ಕೆಲಸ ವಿಧಾನಸೌಧಕ್ಕೆ ಬರುವುದಕ್ಕೆ ಹತ್ತಿದೆ. ಒಂದು ಮಟ್ಟದಲ್ಲಿ ಆಗತಕ್ಕ ಕೆಲಸ ಅಲ್ಲಲ್ಲಿ ಆಯಾಯ ರಂಗದಲ್ಲಿ ಆಗುವಂತೆ ಹತೋಟಿ ಇದ್ದರೆ ಒಳ್ಳೆಯದು. ಆದರೆ ಇವೊತ್ತು ಸಾಮಾನ್ಯ ಜನತೆ ಎಷ್ಟೋ ತೆರಿಗೆಗಳನ್ನು ಕೊಟ್ಟು, ದೇಶಕ್ಕಾಗಿ ಕಷ್ಟವನ್ನು ಅನುಭವಿಸುವುದಕ್ಕೆ ತಯಾರಾಗಿದ್ದರೂ ಕೂಡ ಆಡಳಿತ ರಂಗದಲ್ಲಿ ಅವನಿಗೆ ಸೌಲಭ್ಯ ದೊರಕವೆ, ಸಮಾಧಾನ ದೊರಕದೆ ಇದೆ. ಈ ಸೌಲಭ್ಯ, ಸಮಾಧಾನ ಸಿಗದೆ ಆಡಳಿತದಲ್ಲಿ ಬಹಳ ನಿಧಾನ, ಅಧಿಕಾರವರ್ಗದಲ್ಲಿ ಅಸಡ್ಡೆತನ ಇವು ಹೆಚ್ಚಾಗಿ ಕಾಣುತ್ತ ಇರುವುದರಿಂದ ಜನಸಾಮಾನ್ಯರಲ್ಲಿ ಬೇಜಾರುಂಟಾಗುವುದಕ್ಕೆ ಅವಕಾಶವಾಗಿದೆ. ಇದನ್ನು ತಪ್ಪಿಸಬೇಕಾದರೆ ನಾನಾಗಲೇ ಹೇಳಿದಂತೆ ಆದಷ್ಟು ಜಾಗ್ರತೆ ನಮ್ಮ ಮೈಸೂರು ರಾಜ್ಯಕ್ಕೆ ಸೇರಿರುವ ಎಲ್ಲ ಭಾಗಗಳ ಅಧಿಕಾರಿಗಳ ಸೀನಿಯಾರಿಟಿಪಟ್ಟಿ, equation of posts ವಿಚಾರದಲ್ಲಿ ಹೆಚ್ಚಿನ ಮುತವರ್ಜಿ ತೆಗೆದುಕೊಂಡು ಯಾರಿಗೂ ಅನ್ಯಾಯವಾಗದಂತೆ, ಯಾವ ಭಾಗಕ್ಕೂ ಅನ್ಯಾಯವಾಗದಂತೆ ನಿಷ್ಪಕ್ಷಪಾತವಾಗಿ ಜಾಗ್ರತೆ ಮಾಡಿಸಬೇಕು ಎಂದು ಒತ್ತಾಯಪಡಿಸುತ್ತೇನೆ.

ಆಡಳಿತ ವಿಚಾರದಲ್ಲಿ ಇನ್ನೂ ಒಂದು ವಿಷಯ ಹೇಳಬೇಕೆಂದು ಅಪೇಕ್ಷೆಪಡುತ್ತೇನೆ. ನಾನು ಮೊದಲಿನಿಂದಲೂ ನೋಡುತ್ತ ಇರುವುದರಲ್ಲಿ ಇವೊತ್ತು ಯಾವ ಆಫೀಸಿನಲ್ಲೇ ಆಗಲಿ, ಯಾವ ಜಿಲ್ಲೆಯಲ್ಲೇ ಆಗಲಿ ಇತ್ಯರ್ಥವಾಗದೆ ಬಹಳ ಕಾಲದವರೆಗೆ ಉಳಿದು, ಅನ್ಯಾಯ ಆಗುತ್ತಿದೆ. ಇದಕ್ಕೆ ಅಸಡ್ಡೆಯೇ ಕಾರಣ. ಇದಕ್ಕೆ ತಾಲ್ಲೂಕು ಅಥವಾ ಜಿಲ್ಲಾಮಟ್ಟದಲ್ಲಿ ಆಡಳಿತ ಸರಿಯಾಗಿಲ್ಲವೆಂದು

ಹೇಳುವುದಕ್ಕಾಗುವುದಿಲ್ಲ. ವಿಧಾನಸೌಧದ ಮಟ್ಟದಲ್ಲಿ ಕೂಡ ಅಸಡ್ಡೆ, ಕೆಲಸದಲ್ಲಿ ನಿಗಾ ಕಡಮೆ ಇವು ಕಂಡುಬರುತ್ತಿವೆ. ಒಂದೊಂದು ರಿಕಾರ್ಡ್ ಫೈನಲ್ ಆಗಬೇಕಾದರೆ ಒಂದೆರಡು ವರ್ಷವಾದದ್ದೂ ಉಂಟು. ಉದಾಹರಣೆಗೆ ನಾವು ತೆಗೆದುಕೊಂಡರೆ ತಾಲ್ಲೂಕು ಮಟ್ಟದಲ್ಲಿ Development Officer ಬೇರೆ ಇರುತ್ತಾರೆ, ತಹಸೀಲ್ದಾರ್ ಬೇರೆ ಇರುತ್ತಾರೆ. ತಹಸೀಲ್ದಾರರಿಗೆ ಈಚೆಗೆ ಅಭಿವೃದ್ಧಿ ಕೆಲಸಗಳು ಕಡಮೆಯಾಗಿರುವುದರಿಂದ ಅವರಿಗೆ ಮೊದಲಿನಷ್ಟು ಕೆಲಸವಿಲ್ಲ. ಇಲ್ಲದೆ ಇದ್ದರೂ ಕೂಡ ಜವಾಬ್ದಾರಿ ಇರತಕ್ಕ ಅನೇಕ ಕಾರ್ಯಗಳನ್ನು ಅವರು ಮಾಡುತ್ತಿಲ್ಲ. ಹೀಗಾಗಿ ಅನೇಕ ತೊಂದರೆಗಳನ್ನು ನಾವು ಅನುಭವಿಸಬೇಕಾಗಿದೆ.

ಉದಾಹರಣೆಯಾಗಿ ನಮ್ಮ ತಾಲ್ಲೂಕಿನ ವಿಷಯವನ್ನೇ ಹೇಳಬಹುದು. ಜಮೀನಿಲ್ಲದ ಬಡವರಿಗೆ ಸುಮಾರು ಆರೇಳು ವರ್ಷಗಳಿಂದ ದರಖಾಸ್ತು ಜಮೀನನ್ನು ಕಾನೂನು ಪ್ರಕಾರ ಕೊಡುವ ಅವಕಾಶ ಅವರಿಗಿತ್ತು. ಆದರೆ ಹೋದಸಾರಿ ನಮ್ಮ ರೈತರು ಸರ್ಕಾರಕ್ಕೆ ಅರ್ಜಿಗಳನ್ನು ಹಾಕಿದ್ದರೂ ಅದರಿಂದ ಅಷ್ಟು ಪ್ರಯೋಜನವಾಗಲಿಲ್ಲ. ನಮ್ಮ ಮಾನ್ಯ ರೆವೆನ್ಯು ಮಂತ್ರಿಗಳು ಈ ಬಡ ಜನ ರೈತರಿಗೆ ಅಷ್ಟು ಪ್ರಯೋಜನ ಮಾಡಿ ಅವರು ತಮ್ಮ ಜೀವನವನ್ನು ನಡೆಸಲು ಸಹಾಯ ಮಾಡಬೇಕು. ಈಗ ಬಗರು ಹುಕುಂ ಸಾಗುವಳಿ ಮಾಡುತ್ತಿರುವ ಸಂಗತಿ ಹೆಚ್ಚಾಗಿ ಸರಕಾರದಿಂದ ತೊಂದರೆಗೆ ಈಡಾಗುವ ಪ್ರಸಂಗ ಬಂದಿವೆ. ಮತ್ತು ಸ್ಥಳೀಯ ಅಧಿಕಾರಿಗಳೂ ಸಹ ಈ ತಾಲ್ಲೂಕಿನಲ್ಲಿ ಇಂತಹ ಬಡ ರೈತರಿಂದ ಬಂದ ಅರ್ಜಿಗಳನ್ನು ಇನ್ನೂ ಫೈನಲ್ ಮಾಡದೆ ಎಷ್ಟೋ ಅನಾಹುತಗಳನ್ನು ಮಾಡುತ್ತಿದ್ದಾರೆ. ಇವರ ಅಸಡ್ಡೆಯಿಂದಾಗಿ ಎಷ್ಟೋ ಜನರು ಕೋರ್ಟುಗಳಿಗೆ ಹೋಗುವ ಪ್ರಸಂಗಗಳೂ ಹೆಚ್ಚಾಗುತ್ತಿದೆ. ಇದರ ಬಗ್ಗೆ ಸರಕಾರ ಗಮನ ಕೊಡಬೇಕು, ಗಮನ ಕೊಡದಿದ್ದರೆ ಜನತೆಯಲ್ಲಿ ಶಾಂತಿ ಸಮಾಧಾನಗಳು ಹೋಗುವುದಕ್ಕೆ ಅವಕಾಶವಾಗುತ್ತದೆ. ಇದಕ್ಕಾಗಿ ಕೂಡಲೇ ಸರಕಾರ ಗಮನ ಕೊಡಬೇಕು ಎಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇದೇ ಸಂದರ್ಭದಲ್ಲಿ ಮಲೆನಾಡಿನವನಾದ ನಾನು ಮಲೆನಾಡಿನಲ್ಲಿರತಕ್ಕ ನೀರಾವರಿ ಯೋಜನೆ ಬಗ್ಗೆ ಕೆಲವಂಶಗಳನ್ನು ಈ ಸಭೆಯ ಮೂಲಕ ತರಲಿಚ್ಛಿಸುತ್ತೇನೆ. ಮಲೆನಾಡಿನಲ್ಲಿ ಮಳೆಗಾಲದಲ್ಲಿ ಮಳೆ ಹೆಚ್ಚು. ಬೇಸಿಗೆಯಲ್ಲಿ ಬಿಸಿಲು ಹೆಚ್ಚು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಮಳೆಗಾಲದಲ್ಲಿ ಮಳೆ ಹೆಚ್ಚಾಗಿ ಜನ ಅನೇಕ ತೊಂದರೆಗಳಿಗೆ ಈಡಾಗುವ ಸ್ಥಿತಿಯಲ್ಲಿದ್ದಾರೆ. ಇಲ್ಲಿ ರಸ್ತೆಗಾಗಿ ಎಷ್ಟು ಖರ್ಚು ಮಾಡಿದರೂ ಕೂಡ ಮಳೆಗಾಲ ಬಂದಾಗ ಆ ರಸ್ತೆಗಳು ಕೊಚ್ಚಿಕೊಂಡು ಹೋಗುವ ಪ್ರಸಂಗಗಳಿವೆ. ಮಳೆಗಾಲ ಮುಗಿದಮೇಲೆ ಅದನ್ನೇ ಪುನಃ ಪುನಃ ರಿಪೇರಿ ಮಾಡಬೇಕಾದ ಪ್ರಸಂಗ ಬರುತ್ತದೆ. ಆದುದರಿಂದ ಇಲ್ಲಿ ಆ ರಸ್ತೆಗಳನ್ನು ಸರಿಯಾದ ವ್ಯವಸ್ಥೆಯಲ್ಲಿ ಮಾಡದಿದ್ದರೆ ಆ ರಸ್ತೆಗಳನ್ನುಪಯೋಗಿಸುವುದಕ್ಕೂ ಸಾಧ್ಯವಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ಪಿ. ಡಬ್ಲ್ಯು. ಡಿ. ಇಲಾಖೆಯವರು Asphalting Roadಗಳನ್ನು ಮಾಡಿ ಈ ಜಿಲ್ಲೆಯ ಕೆಲವು ಭಾಗಗಳಲ್ಲಿ ಆಗುತ್ತಿದ್ದ ತೊಂದರೆಗಳನ್ನು ನಿಲ್ಲಿಸಿದ್ದಾರೆ. ಇನ್ನು ಕೆಲವು ಕಡೆ ಈ ಕೆಲಸವನ್ನು ನಿಲ್ಲಿಸಿರುವುದರಿಂದ ಇವೊತ್ತಿನ ಪರಿಸ್ಥಿತಿ ಈ ಜಿಲ್ಲೆಯಲ್ಲಿ ಹೇಗಿದೆ ಎಂದರೆ ಮಳೆಗಾಲದಲ್ಲಿ ದಾಸ್ತಾನು ಮಾಡಿದ ಸಣ್ಣ ಜಲ್ಲಿ ಕೊಚ್ಚಿಕೊಂಡು ಹೋಗುತ್ತಿವೆ ರೋಡಿನ ಕೆಲಸಕ್ಕಾಗಿ ಇಟ್ಟಿದ್ದ ಜಲ್ಲಿ ಇತ್ಯಾದಿ ಸಾಮಾನುಗಳು ಹಾಳಾಗಿ ಸರಕಾರಕ್ಕೆ ನಷ್ಟವಾಗುತ್ತಿದೆ ಅಲ್ಲದೇ, ಇಲ್ಲಿನ ಜನಕ್ಕೂ ಅನಾನುಕೂಲವಾಗುತ್ತದೆ. ಇದರ ಬಗ್ಗೆ ಇಲ್ಲಿರುವ ಸ್ಥಳೀಯ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ. ಇದರ ಬಗ್ಗೆ ಸರಕಾರ ಹೆಚ್ಚಿನ ಗಮನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮಲ್ಲಿ ನೀರಾವರಿ ಯೋಜನೆಗಳೂ ಬಹಳ ಕಡಿಮೆ. ಕೆರೆಗಳ ರಿಪೇರಿಯನ್ನೂ ಸಹ ಸರಿಯಾಗಿ ಮಾಡುತ್ತಿಲ್ಲ. ಎಷ್ಟೋ ಕೆರೆಗಳಲ್ಲಿ, ಕಾಮಗಾರಿಗಳೂ ಇಲ್ಲದೆ, ತೂಬುಗಳಿಲ್ಲದೆ waste weir ಇಲ್ಲದೆ ಹಾಳಾಗಿ ಹೋಗುತ್ತಿವೆ, ನಮ್ಮ ಭಾಗದ ಕೆರೆಗಳ ಪ್ರಸಂಗವನ್ನೇ ನೋಡಿದರೆ ಸಂಸ್ಥಾನದ ಇತರ ಭಾಗಕ್ಕಿಂತ ನಮ್ಮಲ್ಲಿರುವ ಕೆರೆಗಳ ರಿಪೇರಿಗಾಗಿಯೇ ಹತ್ತು ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಬೇಕಾಗಿದೆ. ಇಲ್ಲಿರುವ ಎಷ್ಟೋ ಕೆರೆಗಳಿಗೆ Sluice and waste weir ಕಟ್ಟುವುದು ಅಗತ್ಯವಾಗಿದೆ ಇದನ್ನು ಕಟ್ಟದಿದ್ದರೆ ನಮ್ಮ ಜನಕ್ಕೆ ಬಹಳ ಕಷ್ಟವಾಗುತ್ತದೆ. ದೊಡ್ಡ ಕೆಲಸಗಳಿಗಾಗಿ ಹಾಗೂ ಹೊಸ ಕೆರೆಗಳನ್ನು ಕಟ್ಟುವುದಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದೀರಿ. ಹಳೇ ಕೆರೆಗಳಿಗೆ ರಿಪೇರಿ ಮಾಡಿದರೆ ಸ್ವಲ್ಪವೇ ಖರ್ಚಿನಲ್ಲಾಗುತ್ತದೆ. ಇದರ ಬಗ್ಗೆ ಸರಕಾರ ಯೋಚನೆ ಮಾಡುತ್ತಿಲ್ಲ ಮತ್ತು ಅಲಕ್ಷ್ಯ ಮಾಡುತ್ತಿದ್ದಾರೆ. ಸಾಗರ, ಸೊರಬ, ಶಿಕಾರಿಪುರ ಈ ಭಾಗಗಳಲ್ಲೇ ಸುಮಾರು ನಾಲ್ಕು ಸಾವಿರ ಕೆರೆಗಳಿವೆ. ಇಡೀ ಸಂಸ್ಥಾನದಲ್ಲೇ ಇರುವ ಕೆರೆಗಳಲ್ಲಿ ಎಂಟನೇ ಒಂದು ಭಾಗದಷ್ಟು ಕೆರೆಗಳು ನಮ್ಮ ಭಾಗದಲ್ಲಿವೆ. ಈ ಕೆರೆಗಳನ್ನು ರಿಪೇರಿ ಮಾಡಿದರೆ ನೀರಾವರಿ ಯೋಜನೆಗೆ ಬಹಳ ಅನುಕೂಲವಾಗುತ್ತದೆ. ಈ ತುರ್ತಿನ ಪರಿಸ್ಥಿತಿಯಲ್ಲಿ ಆಹಾರ ಧಾನ್ಯಕ್ಕೆ ಬಹಳ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕಾದರೆ ಈ ಹಳೇ ಕೆರೆಗಳ ರಿಪೇರಿ

(ಶ್ರೀ ಆರ್. ಎಸ್. ಲಕ್ಷ್ಮೀಕಾಂತಪ್ಪ)

ಯನ್ನು ಅನಡ್ಡೆಮಾಡದೆ ಮಾಡಿದರೆ ಎಷ್ಟೋ ತೊಂದರೆ ಜನಕ್ಕೆ ಕಡಿಮೆಯಾಗುತ್ತದೆ. ಇಲ್ಲಿರುವ ಸುಮಾರು ನಾಲ್ಕು ಸಾವಿರ ಕೆರೆಗಳನ್ನು ರಿಪೇರಿ ಮಾಡುವ ಕಡೆಗೆ ಲಕ್ಷವಿಟ್ಟಿಲ್ಲ. ಇದರಲ್ಲಿ ಎಷ್ಟೋ ಕೆರೆಗಳಿಗೆ Sluice and waste weir ಕಟ್ಟುವ ಕೆಲಸ ಸಾಕಷ್ಟಿದೆ. ಇದನ್ನು ಬೇಗನೆ ಸರ್ಕಾರ ಕಟ್ಟಿಸುವುದು ಅವಶ್ಯಕ ಎಂದು ಈ ಸಭೆಯಲ್ಲಿ ಒತ್ತಾಯ ಪಡಿಸುತ್ತೇನೆ.

ಮೈನರ ಇರಿಗೇಷನ್‌ಗಾಗಿ ಒಂದು ಯೋಜನೆ ಮಾಡಿ ಅದಕ್ಕೆ ಹೆಚ್ಚಿಗೆ ನಿಗಾ ಕೊಡಬೇಕೆಂದಿದೆ. ಇದಕ್ಕೆ ಕೇಂದ್ರ ಸರ್ಕಾರದ ಸಹಾಯವನ್ನು ಪಡೆದಿದ್ದಾರೆ. ಅವರೂ ಹೆಚ್ಚಾಗಿ ಮಾಡಿ ಎಂದು ಹೇಳಿದ್ದಾರೆ. ನಮ್ಮಲ್ಲಿ 1956 ನೇ ಇಸವಿಯಲ್ಲಿ ಲಕ್ಕವಳ್ಳಿ ಗ್ರಾಮದಲ್ಲಿ ವರದಾ ನದಿಯ ಪಕ್ಕದಲ್ಲಿ Lift Irrigation Co-operative Society ಎಂದು ಪ್ರಾರಂಭ ಮಾಡಿ ಅದಕ್ಕೆ ಸುಮಾರು ೨೫,೦೦೦ ಸಾವಿರದಷ್ಟು ಖರ್ಚನ್ನು ಮಾಡಿದ್ದರು. ಲಕ್ಕವಳ್ಳಿಯಲ್ಲಿ ಇರಿಗೇಷನ್ನು ಕೋ-ಆಪರೇಟಿವ್ ಸೊಸೈಟಿ ಎಂದಿತ್ತು. ಇಲ್ಲಿದ್ದ ಎಲೆಕ್ಟ್ರಿಸಿಟಿ ಬೋರ್ಡನ್ನು ಪಿ.ಡಬ್ಲ್ಯು.ಡಿ. ಇಲಾಖೆಗೆ ಯಾವ ಸಾಮರಸ್ಯವೂ ಇಲ್ಲದೆ, ಈ ಸೊಸೈಟಿಯಿಂದ ನೀರನ್ನು ಒದಗಿಸುವ ಕಾರ್ಯ ಇದುವರೆಗೆ ಆಗಿರುವುದಿಲ್ಲ. ರೈತರೇ ಇದಕ್ಕಾಗಿ ಬಹಳ ಕಷ್ಟಪಟ್ಟಿದ್ದರು. ಅವರೇ ಮುಂದೆ ಬಂದು ಸೊಸೈಟಿ ಮಾಡಿಕೊಂಡು ಸರ್ಕಾರವನ್ನು ಕೇಳಿಕೊಂಡು ಇದರ ಬಗ್ಗೆ ಸಹಾಯ ಮಾಡಿ ಎಂದು ಕೇಳಿದ್ದರೂ ಇದರ ಬಗ್ಗೆ ಸರ್ಕಾರ ಗಮನ ಕೊಟ್ಟಿರುವುದಿಲ್ಲ ಇದನ್ನೂ ಇಷ್ಟರಲ್ಲಿ ಮಾಡಿಸಿಕೊಟ್ಟಿದ್ದರೆ ಇಲ್ಲಿನ ರೈತರಿಗೆ ಸಹಾಯವಾಗುತ್ತಿತ್ತು. ಈ ಭಾಗದಲ್ಲಿ ಹರಿಯತಕ್ಕ ವರದಾ ನದಿ ಬಹಳ ಕೆಳಮಟ್ಟದಲ್ಲಿ ಹರಿಯುವುದರಿಂದ ಇಲ್ಲಿ ಯಾವ ಪ್ರಾಜೆಕ್ಟನ್ನೂ ಮಾಡುವುದಕ್ಕೆ ಅವಕಾಶವಿಲ್ಲದೇ ಇರುವುದರಿಂದ ಇದು ಹರಿಯುವ ಭಾಗದ ದಂಡೆ ಉದ್ದಕ್ಕೂ ಪಂಪುಗಳನ್ನು ಹಾಕಬೇಕೆಂದೂ ಕೇಳಿಕೊಂಡಿದೆ. ಅಂತಹ ಏರ್ಪಾಟಿನಿಂದ ರಾಜ್ಯಕ್ಕೂ ಬಹಳ ಉಪಯೋಗವಾಗುತ್ತದೆ. ಎಲೆಕ್ಟ್ರಿಕ್ ಪಂಪಿನ ಮೂಲಕ ನೀರನ್ನು ಶೇಖರಿಸಿ ಬೆಳೆ ಬೆಳೆಯುವುದಕ್ಕೆ ಇದರಲ್ಲಿ ಕಲ್ಪಿಸಿ ಕೊಡಬಹುದಾಗಿತ್ತು. ಈ ಕೆಲಸ ಆಗಿನಿಂದ ನಿಂತಿದೆ. ಇದಕ್ಕೆ ಆದಷ್ಟೂ ಗಮನ ಕೊಡಬೇಕಾದುದು ಅಗತ್ಯ ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಆರೋಗ್ಯದ ಇಲಾಖೆಯ ವಿಚಾರದಲ್ಲಿ ಹೇಳಬೇಕಾಗಿದೆ. ಮಲೆನಾಡಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದಕ್ಕೆ ಮಾರ್ಗ ಸೌಕರ್ಯವಿಲ್ಲ. ಎಷ್ಟೋ ಕಡೆ ಆಸ್ಪತ್ರೆಗಳಿದ್ದರೂ ಅಲ್ಲಿ ಡಾಕ್ಟರುಗಳಿರುವುದಿಲ್ಲ. ಡಾಕ್ಟರುಗಳಿದ್ದರೆ ಔಷಧಿ ಇರುವುದಿಲ್ಲ. ಕಾಂಪೌಂಡರುಗಳಿರುವುದಿಲ್ಲ. ಈ ರೀತಿ ಎಷ್ಟೋ ಆಸ್ಪತ್ರೆಗಳು ಸ್ಯಾಂಕ್ಷನ್ ಆಗಿದ್ದರೂ ಈ ರೀತಿ ಇರುವ ಸಂದರ್ಭಗಳು ಅನೇಕವಿದೆ. ಅಲ್ಲದೆ ಇಲ್ಲಿ ಮಂತ್ರಿಗಳನ್ನು ಕೇಳಿದರೆ ಸಾಕಷ್ಟು ಜನ ಡಾಕ್ಟರುಗಳು ಸಿಗುತ್ತಿಲ್ಲ ಎಂದು ಹೇಳುತ್ತಾರೆ. ಆದರೆ ಪಟ್ಟಣಗಳಲ್ಲಿಯೇ ಇರತಕ್ಕ ಡಾಕ್ಟರುಗಳು ಬಹಳ ವರ್ಷಗಳಿಂದಲೂ ಅಲ್ಲಿಯೇ ಇರುವುದರಿಂದ ಹಳ್ಳಿಗಳ ಕಡೆ ಹೋಗಲು ಇಷ್ಟಪಡುವುದಿಲ್ಲ. ಆದುದರಿಂದ ಸರ್ಕಾರ ಮಲೆನಾಡಿನಲ್ಲಿರುವ ಜನತೆಯ ಕಷ್ಟ ಸುಖದ ವಿಚಾರದಲ್ಲಿ ಗಮನವಿಟ್ಟು ಜನತೆಯ ಸೇವೆಯನ್ನು ಮಾಡುವಂತಹ ಡಾಕ್ಟರುಗಳನ್ನು ತರಬೇತಿ ಮಾಡಲು ಅವಕಾಶವಿದ್ದಾಗ್ಯೂ ಇನ್ನೂ ಅದರ ಬಗ್ಗೆ ಯೋಚಿಸಿಲ್ಲ. ಇದು ನಮ್ಮ ಮಲೆನಾಡಿನ ದೌರ್ಭಾಗ್ಯವೋ ಏನೋ ಡಾಕ್ಟರುಗಳ ಅಭಾವವೋ ಗೊತ್ತಾಗುವುದಿಲ್ಲ. ಇನ್ನು ಮುಂದಾದರೂ ಡಾಕ್ಟರುಗಳನ್ನು ಹೆಚ್ಚಾಗಿ ಮಲೆನಾಡಿನ ಭಾಗಕ್ಕೆ ಕಳುಹಿಸಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇವೊತ್ತಿನ ದಿವಸ ಆಹಾರ ಪದಾರ್ಥಗಳ ವಿಚಾರದಲ್ಲಿ ಅನೇಕ ಸದಸ್ಯರು ಮಾತನಾಡಿದ್ದಾರೆ. ನಮ್ಮ ಮಲೆನಾಡಿನಲ್ಲಿ ಆಹಾರ ಪದಾರ್ಥ ಬೆಳೆಯುತ್ತಾರೆ. ಹೆಚ್ಚಾಗಿ ಬೆಳೆಯುತಕ್ಕದ್ದು ಭತ್ತ. ಭತ್ತವನ್ನು ಬೆಳೆಯುವವರಿಗೆ ಸಾಮಾನ್ಯವಾಗಿ ಒಂದು ಎಕರೆಗೆ ೨೦೦ ರೂಪಾಯಿಗಳಷ್ಟು ಖರ್ಚು ಮಾಡಿದರೆ ಅವನು ಸುಮಾರು ೧೨-೧೩ ಪಲ್ಲದಷ್ಟು ಭತ್ತವನ್ನು ಬೆಳೆಯಲು ಸಾಧ್ಯ. ನಾನೂ ವ್ಯವಸಾಯಗಾರನಾದುದರಿಂದ ನನ್ನ ಒಂದು ಅನುಭವದಮೇಲೆ ಹೇಳುತ್ತಿದ್ದೇನೆ. ತಮ್ಮಲ್ಲಿ ಒಂದು ಅಂಕಿ ಅಂಶಗಳೂ ಉಂಟು. ಈ ಬೆಳೆ ಬೆಳೆಯುವವನಿಗೆ ಎಷ್ಟು ಉಳಿತಾಯವಾಗುತ್ತದೆ ಎಂದರೆ ಬಡ್ಜೆಟ್ಟಿನಲ್ಲಿ ಹೇಳಿರುವಂತೆ ಸರಾಸರಿ ವರಮಾನ ೩೧೧ರ ವರೆಗೆ ಈ ರಾಜ್ಯ ಸರ್ಕಾರದಲ್ಲ ಬಂದಿದೆ. ಆದರೆ ರೈತ ವ್ಯವಸಾಯ ಮಾಡತಕ್ಕವನು ಮೂರು ನಾಲ್ಕು ಎಕರೆ ಇರತಕ್ಕವನಿಗೆ, ಅವನಿಗೆ ಉಳಿತಾಯ ೨೦೦, ೩೦೦, ರೂಪಾಯಿಗಳಷ್ಟು ಉಳಿಯುತ್ತಿಲ್ಲ. ೨೦೦ ರೂಪಾಯಿಗಳಷ್ಟು ಖರ್ಚು ಮಾಡಿ ಹನ್ನೆರಡು ಪಲ್ಲ ಭತ್ತ ಬೆಳೆದರೆ ಈಗಿನ ಬೆಲೆಯಂತೆ ಹನ್ನೆರಡು ಪಲ್ಲ ಭತ್ತಕ್ಕೆ ೨೭೫ ರೂಪಾಯಿ ಆಗುತ್ತದೆ. ಇದರಿಂದ ಉಳಿತಾಯ ಬರುವುದು ೭೫ ರೂಪಾಯಿಗಳು. ಕಂದಾಯಕ್ಕಾಗಿ ೨೦ ರೂಪಾಯಿಗಳು ಇನ್ನೂ ೫೫ ರೂಪಾಯಿಗಳು ಮಾತ್ರ ಉಳಿತಾಯವಾಗುತ್ತದೆ. ನಾಲ್ಕು ಎಕರೆ ಜಮೀನಿರುವ ರೈತನಿಗೆ ೨೦೦–೨೫೦ ರಷ್ಟು ಆದಾಯ ಬಂದರೆ ಅವನು ತನ್ನ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಲು, ಅವನ ಸಂಸಾರವನ್ನು ನಿರ್ವಹಣೆ ಮಾಡಲು ಯಾವ ರೀತಿಯಲ್ಲಿ ಮಾಡಬೇಕು. ಇಂತಹ ಪರಿಸ್ಥಿತಿಯಲ್ಲಿ

ಬ್ಡಾನೆ ರೈತ. ಇದಲ್ಲದೆ ಅವನು ಕೆಮಿಕಲ್ ಫರ್ಟಿಲೈಸರ್, ಗೊಬ್ಬರ ಇತ್ಯಾದಿ ವ್ಯವಸಾಯಕ್ಕೆ ಬೇಕಾದ ಪದಾರ್ಥಗಳ ಧಾರಣೆ ಕಡಿಮೆ ಇದ್ದದ್ದು ಈಗ ಜಾಸ್ತಿಯಾಗುತ್ತಿದೆ.

ಬಡ ರೈತನು ಕೊಳ್ಳತಕ್ಕಂಥ ಬಟ್ಟೆ, ವ್ಯವಸಾಯಕ್ಕೆ ಬೇಕಾಗುವ ಉಪಕರಣ ಕಬ್ಬಿಣ ಸಾಮಾನು, ಯಾವ ಸಾಮಗ್ರಿಯಾಗಲಿ ಅವುಗಳ ಧಾರಣೆ ಕಡಿಮೆಯಾಗಿಲ್ಲ. ಇಂಥ ಸನ್ನಿವೇಶವಿದೆ. ಈಗಲಾದರೂ ಸಹ ಒಂದು ಸಲಹೆ ಮಾಡುತ್ತೇನೆ. ಆವಶ್ಯಕವಾಗಿರುವಂಥ ಸಾಮಾನುಗಳನ್ನು ಸಹಕಾರಿ ಸಂಘಗಳಲ್ಲಿ ಸಬ್ಸಿಡೈಜ್‌ಡ್ ಅಥವ ಕನ್‌ಸೆಷನಲ್ ರೇಟಿನಲ್ಲಿ ದೊರೆಯುವಹಾಗೆ ಮಾಡಿದರೆ ಏನಾದರೂ ಪ್ರತಿಫಲ ದೊರೆಯುತ್ತದೆ. ರೈತ ಬೆಳೆಯುವ ಪದಾರ್ಥಗಳ ಧಾರಣೆ ಕಡಿಮೆಯಾಗಿದೆ. ಆದುದರಿಂದ ಬಡರೈತನಿಗೆ ಜೀವನಮಾಡಲು ಆವಶ್ಯಕವಾಗಿರುವ ಪದಾರ್ಥಗಳನ್ನು ಕಡಿಮೆ ಬೆಲೆಗೆ ಕೊಡಿಸುವುದಕ್ಕೆ ಸರಕಾರ ಪ್ರಯತ್ನ ಮಾಡಬೇಕು ಮತ್ತು ಸಬ್‌ಸಿಡೈಜ್ಡ್ ರೇಟಿನಲ್ಲಿ ದೊರೆಯುವ ಹಾಗೆ ಸಹಾಯ ಮಾಡಬೇಕು ಎಂದು ಹೇಳುತ್ತೇನೆ. ಭೂಸುಧಾರಣೆ ಕಾನೂನು ಜಾರಿಗೆ ಬರುವುದು ತಡವಾದ ಮೂಲಕ ಟೆನನ್ಸಿ ಕೇಸಸ್ ಜಾಸ್ತಿಯಾಗಿವೆ. ಭೂಮಾಲಿಕ ಮತ್ತು ಗೇಣಿದಾರರ ನಡುವಿನ ವಿವಾದ ತೀರ್ಮಾನ ಮಾಡುವದಕ್ಕೆ ಯಾವ ಅಧಿಕಾರಿಗಳು ಇಲ್ಲದೇಇರುವದ ರಿಂದ ಅದಕ್ಕಾಗಿ ಒಬ್ಬ ಸ್ಪೆಷಲ್ ತಹಶೀಲ್‌ದಾರರನ್ನು ಹಾಕಿದ್ದಾರೆ ಆದರೆ ಎರಡು ವರ್ಷವಾದರೂ ಕೋರ್ಟು ನಡೆಯುತ್ತಿಲ್ಲ ಜನರಿಗೆ ನ್ಯಾಯ ದೊರಕುತ್ತಾ ಇಲ್ಲ. ಆದುದರಿಂದ ಆದಷ್ಟು ಬೇಗನೆ ತಹಶೀಲದಾರರ ನೇಮಕಮಾಡಿ ತೀರ್ಮಾನ ಮಾಡುವದಕ್ಕೆ ಕಳಿಸಿಕೊಟ್ಟು ರೈತರ ಕಷ್ಟ ನಿವಾರಿಸ ಬೇಕು. ಆದಷ್ಟು ಬೇಗನೆ ಭೂಸುಧಾರಣೆ ಕಾನೂನು ಜಾರಿಗೆ ತರಬೇಕು. ರೈತರಬಗ್ಗೆ ಆಸಕ್ತಿ ವಹಿಸಿದರೆ ಕಷ್ಟದ ಪರಿಸ್ಥಿತಿಯಲ್ಲಿ ಸರಕಾರ ಹಾಕತಕ್ಕಂಥ ತೆರಿಗೆ ಕೊಡಲು ಸಾಧ್ಯವಿದೆ. ರೈತರಿಗೆ ಸೌಲಭ್ಯ ದೊರಕುವಂತೆ ಏರ್ಪಡಿಸಬೇಕು. ರೈತರಬಗ್ಗೆ ಸರ್ವಜ್ಞನ ವಚನ ಒಂದು ಇದೆ. ಅದು ಈರೀತಿ ಇದೆ.

4.30 P.M.

ಒಕ್ಕಲನು ನಲುಗಿಸದೆ । ದುಃಖಕ್ಕೆ ಸಿಲುಕಿಸದೆ ।
ತತ್ಕುಲತೆಯಿಂದ ಆಳುವ ನೃಪನು ।
ಚಕ್ಕಂದವಿರುವ । ಸರ್ವಜ್ಞ ॥

ಅಂದರೆ ಒಕ್ಕಲನ್ನು ತೊಂದರೆಗೆ ಈಡುಮಾಡದೆ ಸುಖವಾಗಿ ಇರುವಹಾಗೆ ಮಾಡಬೇಕು. ರೈತನು ಸುಖದಿಂದ ಇದ್ದರೆ ರಾಜ್ಯ ಸುಖವಾಗಿ ಇರುತ್ತದೆ ಎಂಬುದನ್ನು ಮರೆಯಬಾರದು. ಆದ್ದರಿಂದ ರೈತರ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿರುವ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

Mr. SPEAKER.—Before I call upon anybody, with regard to seating arrangement, as I announced already, I believe the charts and cards have been fitted up there. If any changes are wanted, Members may kindly tell me and such changes as are possible, I will try to accommodate

Sri S. SHIVAPPA.—Nobody from our Party has spoken today.

Mr. SPEAKER.—No, you cannot say that. Sri S. M. Krishna wrote to me saying as he had to go away he might be given some priority. I gave it. You cannot entertain any grievance. I am accommodating members to the maximum extent.

†ಶ್ರೀ ಬಿ. ಭಾಸ್ಕರಶೆಟ್ಟಿ (ಕೌಪು).—ಸ್ವಾಮಿ, ಈ ಮಾನ್ಯ ಸಭೆಯಮುಂದೆ ಮಂಡಿಸಿದ 1963–64ನೇ ಸಾಲಿನ ಆಯವ್ಯಯ ಪಟ್ಟಿಯಮೇಲೆ ಮಾತನಾಡುತ್ತಾ ಇದೊಂದು ನಿಸ್ಸಾರವಾದ, ಸಾರವಿಲ್ಲದ ಆಯವ್ಯಯ ಪಟ್ಟಿಯಾಗಿದೆ ಎಂದು ಹೇಳಲು ಬಯಸುತ್ತೇನೆ. ಇಷ್ಟುಮಾತ್ರವಲ್ಲದೆ ಈ ಸಂದಿಗ್ಧ ತುರ್ತು ಪರಿಸ್ಥಿತಿಯಲ್ಲಿ ಆಯವ್ಯಯ ಪಟ್ಟಿಯಲ್ಲಿಯ ಅಂಕಿಅಂಶಗಳನ್ನು ಪರಿಶೀಲಿಸಿದರೆ, ನಮ್ಮ ಅರ್ಥಸಚಿವರು ಇದನ್ನು ತುರ್ತಾಗಿ ತಯಾರಿಸಿದ್ದಾರೆಂದು ಕಾಣುತ್ತದೆ. ಇದಲ್ಲದೆ ಈ ಸಾಲಿನ ಆಯವ್ಯಯ ಪಟ್ಟಿಯ ವೈಶಿಷ್ಟ್ಯ ಅಂದರೆ ಅಂಕಿಅಂಶಗಳನ್ನು ಇವರು ಸಂಪೂರ್ಣವಾಗಿ ಕಾಂಗ್ರೆಸ್ ಮಾಡಿದ್ದಾರೆ. ಯಾವಯಾವುದು ಬೇಕೋ ಅದರ ಲೆಕ್ಕಪತ್ರ ತರಿಸಿಹಾಕುವುದು ಮಾತ್ರ ವಲ್ಲದೆ ಯಾವಯಾವುದು ಬೇಡವೋ ಅದನ್ನು ಬಿಟ್ಟಿದ್ದಾರೆ.

ಶ್ರೀ ಬಿ. ಡಿ. ಜತ್ತಿ.—ನನಗೆ ಬೇಕಾಗಿರುವಷ್ಟನ್ನು ಹಾಕಿದ್ದೇನೆ. ನಿಮಗೆ ಬೇಕಾಗಿರುವುದನ್ನು ಹೇಳಿ ಬೇಕಾದಷ್ಟು criticise ಮಾಡಿ.

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ ಬಿಟ್ಟಿರುವ ಕೆಲವು ಅಂಶಗಳನ್ನು ನಾನು ಇಲ್ಲಿ ಹೇಳುತ್ತೇನೆ. ಇಂಡಸ್ಟ್ರಿಯಲ್ ಪ್ರೊಡಕ್ಷನ್ ಹೆಚ್ಚಾಗಿಲ್ಲ.

ಇಲ್ಲಿ ಸೂಪರ್ ಫಾಸ್ಫೇಟ್, ಸಿಮೆಂಟ್, ಕಬ್ಬಿಣ ಕೆಲವು ಎಲ್ಲಾ ಇವೆ; ಕಡಮೆ ಆದ ಹಾಗೆ ತೋರುತ್ತದೆ.

Sri B. D. JATTI.—Which are the others ?

Mr. SPEAKER.—Leave it at that ; let him continue.

Sri B. D. JATTI.— I wanted to know the Production of our State.

ಶ್ರೀ ಬಿ. ಭಾಸ್ಕರಶೆಟ್ಟಿ.—ಇಡೀ ವರ್ಷದಲ್ಲಿ ಕಡಿಮೆಯಾಗಿದೆ. ಡಿಸೆಂಬರ್‌ವರೆಗೆ ಕಡಿಮೆ ಯಾಗಿದೆ, ಜನವರಿ, ಫೆಬ್ರುವರಿ 1962ರಲ್ಲಿ ಸ್ವಲ್ಪ ಏರಿಹೋಗಿದೆ. ಕಡಿಮೆಯಾದುದೆಲ್ಲಾ ಬಿಟ್ಟು ಬಿಟ್ಟಿದ್ದೀರಿ, ಕಡಿಮೆಯಾಗದಿದ್ದನ್ನು ಸೇರಿಸಿದ್ದೀರಿ. ನೀವು ಏನು ಅಂಕಿ ಅಂಶಗಳನ್ನು ಕೊಟ್ಟಿರು ತ್ತೀರೋ, ಅವು ವಾಸ್ತವದಲ್ಲಿ ಅವಕ್ಕೆ ವಿರುದ್ಧವಾಗಿವೆ. ಇಲ್ಲಿ ರೈಸ್ ಇಷ್ಟು ವಿಸ್ತೀರ್ಣದಲ್ಲಿ ಉಂಟು ಎಂದು ಹೇಳಿದ್ದೀರಿ. ಆದರೆ ಎಷ್ಟು ಬತ್ತ ಬೆಳೆಯುವುದು ಎಂದ ನೋಡಿದರೆ, 1960-61ಕ್ಕಿಂತ, 1961-62ರಲ್ಲಿ rice production ಬಹಳ ಕಡಿಮೆ ಆಗಿದೆ.

ಇನ್ನು ನಾನು ಈ ಆಯವ್ಯಯದ ಮೇಲೆ ಮಾತನಾಡುತ್ತಾ ಒಂದೆರಡು ವಿಷಯಗಳನ್ನು ಮಾತ್ರ ತಮ್ಮ ಮುಂದಿಡಲು ಬಯಸುತ್ತೇನೆ ಒಂದನೆಯದಾಗಿ, ಈಗ ಈ ಮಾನ್ಯ ಸಭೆಯ ನಮ್ಮ ಮಿತ್ರ ರೊಬ್ಬರು ಹೇಳಿದರು. ಯಾರೋ ಈ ಪಂಪುಸೆಟ್ಟಿನ ವಿಚಾರದಲ್ಲಿ ದಕ್ಷಿಣಕನ್ನಡದಲ್ಲಿ ಅಪಪ್ರಚಾರಕ್ಕೆ ತೊಡಗಿದ್ದಾರೆ. ಬೇಜವಾಬ್ದಾರಿಯುತವಾಗಿ ಈ ಸಂಬಂಧದಲ್ಲಿ ಮಾತನಾಡಿದ್ದಾರೆ, ಅದಕ್ಕಾಗಿ ನಮ್ಮ ಅರ್ಥ ಸಚಿವರು ಏನೋ ಒಂದು ನಮೂನೆ ಉತ್ತರವನ್ನು ಕೊಡುತ್ತಾ ವ್ಯಂಗವಾಗಿ ಹೇಳಿದರು ಎಂದು ಈ ಹಿಂದೆಯೇ ಈ ಸಭೆಗೆ ಈ ವಿಷಯುವನ್ನು ತರಬೇಕೆಂತ ಹೇಳಿ ಇಚ್ಛೆ ಇದ್ದರೂ, ನನಗೆ ಸಂಧರ್ಭ ಸಿಗಲಿಲ್ಲ. ನಾನು ಈ ವಿಷಯದಲ್ಲಿ ಸತ್ಯವಿಚಾರವನ್ನು ಹೇಳುತ್ತಾ, ಮಾನ್ಯ ಮಂತ್ರಿ ಯವರಿಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ಇದರಲ್ಲಿ ಏನಾಗಿದೆಯೆಂದರೆ, ಇದರಲ್ಲಿ party politics ಇದೆ, ಇನ್ನೊಂದು ಸಂಘ ಎಷ್ಟಾಬ್ಲಿಷ್ ಆಗಿಬಿಟ್ಟಿದೆ, ಆದರಿಂದ ನಾವು ಹೀಗೆ ಹೇಳುತ್ತಿದ್ದೇ ವೆಂದು. ಈ ಸಂಘದಲ್ಲಿ ನಮ್ಮವರೂ ಕೆಲವರು ಮೆಂಬರಾಗಿದ್ದಾರೆ. ನಮ್ಮ ಮಿತ್ರರಾದ ಡಾ॥ ಸಂಜೀವನಾಥರವರು ಒಬ್ಬ ಮೆಂಬರೂ ಆ ಪ್ರಕಾರದ ವಿಷಯ ಎತ್ತುವುದಕ್ಕೆ ಹೋಗುವುದಿಲ್ಲ. ಏನೋ ಒಂದು ನಮೂನೆ ಈ ಸಂಘದಲ್ಲಿ ಗುಂಪು ಗುಂಪಿಗೆ ವ್ಯಾಜ್ಯ ಅಂತ ಹೇಳಿದರು. ಅಧ್ಯಕ್ಷರು ಯಾರೋ ಅವರ ಹೆಸರಿಗೆ ಡಿ. ಸಿ. ಯವರು, ಪಂಪ್‌ಸೆಟ್ ಫೌಂಡೇಷನ್ನಿಗೋಸ್ಕರವಾಗಿ ಒಂದು ಚೀಲ ಸಿಮೆಂಟ್ ಪರ್ಮಿಟ್ ಕೊಟ್ಟುಬಿಟ್ಟಿದ್ದಾರೆ.

Mr. SPEAKER.—Are you a party to it ?

Sri SANJEEVANATHA AIKALA (Suratkal).—Sir, I am a Member of the Society and not of the cement committee.

Mr. SPEAKER.—Are you aware of the fact about cement ?

ಶ್ರೀ ಬಿ. ಭಾಸ್ಕರಶೆಟ್ಟಿ.—ಹೌದು ಸ್ವಾಮಿ, ಕೊಟ್ಟಿದ್ದಾರೆ ಅಂತ ಕಾಗದ ಬಂದಿದೆ. ಡಿಸ್ಟ್ರಿಕ್ಟ್ ಕೌನ್ಸಿಲ್ ಮೀಟಿಂಗಿನಲ್ಲಿ ನಮ್ಮ ಕಾಂಗ್ರೆಸ್ ಮಿತ್ರರಾದ ಸುಬ್ಬಯ್ಯನಾಯಕರೂ ಇದ್ದರು: ಡಿ. ಸಿ. ಯವರು ಪಂಪ್‌ಸೆಟ್ಟಿಗೆ ಕ್ಯಾನ್‌ವಾಸು ಮಾಡುತ್ತಾ ಇದ್ದರು. Pump set Rules ಇಷ್ಟರ ವರೆಗೆ ಬರಲಿಲ್ಲ. ಸೊಸೈಟಿಯಿಂದ ಪಂಪ್‌ಸೆಟ್ ತೆಗೆದುಕೊಂಡರೆ ಫೌಂಡೇಷನ್ನಿಗಾಗಿ ಮೂರು ಮೂಟೆ ಸಿಮೆಂಟ್ ಸಿಗುತ್ತದೆಂದು ಅವರು ಹೇಳಿದರು. ಸತ್ಯ ಇಡುತ್ತೇನೆ. ಈ ಸೊಸೈಟಿ ಪಂಪ್ ಸೆಟ್ಟಿಗೂ, ಸರ್ಕಾರದಿಂದ ಯಾವ ಪಂಪ್‌ಸೆಟ್ ಕೊಡುತ್ತಾರೆಯೋ, ಅದಕ್ಕೂ, ಇದಕ್ಕೂ ಸಾಧಾರಣ ವಾಗಿ 2 H. P. ದಕ್ಕೆ, 500-600 ರೂಪಾಯಿ ಅಂತರ ತೋರುವುದು. ಈ ಲೆಕ್ಕ ನನ್ನಲ್ಲಿ ಉಂಟು; ಈಗ ತಂದಿಲ್ಲ, ಬೇಕಾಗಿದ್ದರೆ ಸಭೆಯ ಮುಂದೆ ಇಡಲಿಕ್ಕೆ ತಯಾರಿದ್ದೇನೆ.

ವಸ್ತುಸ್ಥಿತಿ ಹೀಗಿರುವುದರಿಂದ ಸರ್ಕಾರದವರು ಶೀಘ್ರವಾಗಿ ಈ ಪಂಪ್‌ಸೆಟ್ಟಿನ ವಿಷಯ ಆಲೋಚನೆ ಮಾಡಬೇಕು, ಹೀಗೆ ಒಂದು ಏಜನ್ಸಿ ಮುಖಾಂತರ ರೈತರಿಗೆ ಹಂಚಬಾರದು, ಸರ್ಕಾರ ದಿಂದಲೇ ಅವರಿಗೆ ನೇರವಾಗಿ ತಲಪುವಂತೆ ಕೂಡಲೇ ತಮ್ಮ ಅಧಿಕಾರಿಗಳಿಗೆ ಒಂದು ನಿರ್ದಿಷ್ಟವಾದ ತಿಳುವಳಿಕೆ ಕೊಡಬೇಕು.

ಶ್ರೀ ಜಿ. ನಾರಾಯಣಗೌಡ (ವ್ಯವಸಾಯಶಾಖೆ ಮಂತ್ರಿಗಳು).—ಈ ಪಂಪ್‌ಸೆಟ್ಟುಗಳನ್ನು ಎಲ್ಲಿಂದ ತೆಗೆದುಕೊಳ್ಳಬೇಕೆಂಬುದು, ಯಾರುಯಾರು ತೆಗೆದುಕೊಳ್ಳುತ್ತಾರೆಯೋ ಅವರ ಇಚ್ಛೆಗೆ ಬಿಟ್ಟದ್ದು. ಇದರೊಳಗೆ ಸೊಸೈಟಿಯಿಂದಲೇ ತೆಗೆದುಕೊಳ್ಳಬೇಕು, ಅಥವ ನಮ್ಮಿಂದಲೇ ತೆಗೆದುಕೊಳ್ಳಬೇಕು, ಅಥವ ಇಂಥ ಬೇರೆ ಕಡೆಯಿಂದ ತೆಗೆದುಕೊಳ್ಳಬೇಕೆಂದು ಹೇಳಿಲ್ಲ. ಅದನ್ನು ಅವರವರ discretionಗೆ, optionಗೇ ಬಿಟ್ಟಿದ್ದೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ತಾವು ಖಚಿತವಾಗಿ ತಿಳಿಸಬೇಕು.

Mr. SPEAKER.—Is it your impression that the Government is giving pumps to the Co-operative Society ?

ಶ್ರೀ ಬಿ. ಭಾಸ್ಕರಶೆಟ್ಟಿ.—ಕೇಳಿ, ಸ್ವಾಮಿ.

Mr. SPEAKER.—Has the Government given any sets to the Co-operative Society ?

ಶ್ರೀ ಬಿ. ಭಾಸ್ಕರಶೆಟ್ಟಿ.—ಕೊಟ್ಟಿದೆ. ನಮಗೆ ಗೌವರ್ನ್‌ಮೆಂಟ್ ಆಫೀಸರ್‌ಗಳು ಸೊಸೈಟಿಗಾಗಿ ಕ್ಯಾನ್‌ವಾಸ್ ಮಾಡುತ್ತಾರೆಂದು ನನ್ನ ಹತ್ತಿರ ಹೇಳಿದ್ದಾರೆ. Block Development ಆಫೀಸರುಗಳಿಗೆ, ತಹಸೀಲ್‌ದಾರರುಗಳಿಗೆ. ಡಿ. ಸಿ. ಗೆ., ಅದಕ್ಕೇ ಒಂದು ಇನ ಸ್ಟ್ರಕ್ಷನ್ ಖಚಿತವಾಗಿ ಕೊಟ್ಟುಬಿಡಿ.

ಶ್ರೀ ಬಿ. ಡಿ. ಜತ್ತಿ.—ಕೊಟ್ಟಿದ್ದಾಗಿದೆ. ಯಾರಾದರೂ ಅಧಿಕಾರಿಗಳು ತಪ್ಪುಮಾಡಿದ್ದರೆ, ಹಾಗೆ ಮಾಡುವುದು ಅವಶ್ಯಕವಿಲ್ಲ ಅಂತ ತಿಳುವಳಿಕೆ ಕೊಟ್ಟಿದ್ದೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಸರಿ, ಸರಿ, ಕೊಟ್ಟಿದ್ದರೆ ಸಂತೋಷ, ಅದನ್ನು ಬಿಟ್ಟುಬಿಡುತ್ತೇನೆ. ಇನ್ನೊಂದು ವಿಷಯ, ಪಂಪುಸೆಟ್ಟಿನ ವಿಷಯ ಹೇಳುವುದಿದ್ದರೆ. ಪಂಪುಸೆಟ್ಟಿನಲ್ಲಿ ನಮ್ಮ ಸರ್ಕಾರದವರು ಸಾಧಾರಣ 27 ವೆರೈಟಿಗಳ ಪಂಪುಸೆಟ್ಟುಗಳನ್ನು ತೆಗೆದುಕೊಳ್ಳಬಹುದೆಂತ ಸ್ಯಾಂಕ್ಷನ್ ಮಾಡಿದ್ದಾರೆಂದು ತಿಳುವಳಿಕೆ ಬಂದಿದೆ. ಇದರಿಂದ ಏನಾಗಿದೆಯೆಂದರೆ ಸರ್ಕಾರದವರು ಪಂಪುಸೆಟ್ಟನ್ನು ರೈತರಿಗೆ ಕೊಡುತ್ತಾರೆಂಬ ವಿಷಯ ಕೆಲವರಿಗೆ ತಿಳಿದಕೂಡ್ಲೆ ಸ್ವಯಂಸಾಧಕರ ಗುಂಪೊಂದು ಏರ್ಪಟ್ಟು ಕಾಂಗ್ರೆಸ್ಸಿನವರ ಕೆಲವೊಂದು ಕಂಪೆನಿಗಳು ರಿಜಿಸ್ಟರಾಗಿ ಪಂಪ್‌ಸೆಟ್ ಡಿಸ್ಟ್ರಿಬ್ಯೂಷನ್ ಮಾಡಲು ಹುಟ್ಟಿಕೊಂಡವು ಎಂದು ತಿಳುವಳಿಕೆಗೆ ಬಂದಿದೆ. ಅವರು ಯಾರಿಂದಲೋ ಪಂಪುಸೆಟ್ಟು ತಯಾರಿಸಿ ಹಂಚುತ್ತಾರೆ. ಆದ್ದರಿಂದ ನೀವು ಕೊಟ್ಟು ರೈತರಿಗೆ ಪ್ರಯೋಜನವಿಲ್ಲದಂತಾಗಿದೆ

ಶ್ರೀ ಜಿ. ನಾರಾಯಣಗೌಡ.—ಇಪ್ಪತ್ತೇಳು ಫರ್ಮುಗಳನ್ನು approve ಮಾಡಿದ್ದೇವೆ. ಆದರೆ ಅವರು ನಮಗೆ ಗ್ಯಾರಂಟಿ ಕೊಡಬೇಕು, ಅವರು ಮೊದಲು ಬೆಲೆ ತಿಳಿಸಬೇಕು. ಹಾಗಿದ್ದರೇ ಆ ಫರ್ಮುಗಳಿಂದ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೆಲವು Firmಗಳು, ಲೆಟರ್‌ಹೆಡ್ಡುಗಳ ಮೇಲೆಯೇ ಇರುತ್ತವೆ, Firm ಇರುವುದಿಲ್ಲ, ಅಂಗಡಿ ಇರುವುದಿಲ್ಲ, ಪಂಪೂ ಇರುವುದಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಗ್ಯಾರಂಟಿ ತೆಗೆದುಕೊಂಡು Firm approve ಮಾಡುತ್ತೇವೆಂದಿರಿ. Guarantee, ನಿಮ್ಮ ಸರ್ಕಾರದಲ್ಲಿಯೇ ಇರುತ್ತದೆ. ಪಂಪುಸೆಟ್ಟು ರೈತನಿಗೆ ಹೋಗುತ್ತಲೂ ಕೆಟ್ಟುಹೋದರೆ ಅವನು ಮಾಂಗಳೂರಿಗೋ ಬೆಂಗಳೂರಿಗೋ ಬರುವ ಸಂಧರ್ಭ ಒದಗುತ್ತದೆ. ಅದು ಅವನ ಹತ್ತಿರ ಸಾಧ್ಯವಿಲ್ಲ. ನಿಮ್ಮ ಆಫೀಸರುಗಳು ಇದ್ದರೂ ಅವರು ಪಾಪದ ಭೀತಿಗೆ ಸಹಾಯ ಮಾಡುವರು ಯಾರೂ ಇಲ್ಲ.

ಶ್ರೀ ಜಿ. ನಾರಾಯಣಗೌಡ.—ಅಂಥ ಗ್ಯಾರಂಟಿಯನ್ನು ನಿರೀಕ್ಷಿಸಿರುವುದರಿಂದ, ನಾಲ್ಕು ಫರ್ಮುಗಳೂ ಮುಂದೆ ಬರುತಾ ಇಲ್ಲ.

ಶ್ರೀ ವಿ. ಎಂ. ದೇವ್.—ಈಗ Existing pumpಗಳಲ್ಲಿ 27 ತರಹ ಆಗುತ್ತಾ ಇಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಇಪ್ಪತ್ತೇಳು ವೆರೈಟಿಗಳನ್ನು ಇಡುವುದಕ್ಕಿಂತ ಒಳ್ಳೆಯದು ನೋಡಿ, 4-5 ಇಟ್ಟರೆ ಬಹಳ ಒಳ್ಳೆಯದು. ಇದರಿಂದಾಗಿ ರೈತರಿಗೆ ಪ್ರಯೋಜನ ಸಿಗುತ್ತದೆ.

ಶ್ರೀ ಜಿ. ನಾರಾಯಗೌಡ.—ನಾಲ್ಕೈದು ಇಟ್ಟರೆ Monopoly ಮಾಡಿದರು ಎಂದು ಹೇಳುತ್ತೀರ, ಹೆಚ್ಚಿಗೆ Firmಗಳನ್ನು ಏಕೆ ಇಡಲಿಲ್ಲವೆಂದು ತಾವು ಕೇಳುತ್ತೀರ. ಹೆಚ್ಚಿಗೆ ಕೊಟ್ಟರೆ, ಏಕೆ ಹೆಚ್ಚಿಗೆ ಕೊಟ್ಟಿರಿ ಅಂತ ಕೇಳುತ್ತೀರ. ಅದಕ್ಕೋಸ್ಕರವೇ ಫರಂಗಳ ಮೇಲೆ ಕೆಲವು ಕಂಡಿಷನ್ನುಗಳನ್ನು ಹಾಕಿ, ಗ್ಯಾರಂಟಿ ತೆಗೆದುಕೊಳ್ಳಬೇಕೆಂದು ಮಾಡಿರುವುದು.

ಶ್ರೀ ಬಿ. ಭಾಸ್ಕರಶೆಟ್ಟಿ.—ಈ ಪಂಪುಸೆಟ್ಟಿನ ವಿಷಯ ನಾನು ಇನ್ನೂ ಒತ್ತಿ ಹೇಳುವುದಿದ್ದರೆ ತಾಲ್ಲೂಕಿನಲ್ಲಿರುವ ತಮ್ಮ ಡಿಪಾರ್ಟ್‌ಮೆಂಟುಗಳ ನೌಕರರು ಯಾರು ಇದ್ದಾರೋ, ಅವರು ನಿಜವಾಗಿ ಯಾವ ರೈತನಿಗೆ ಪಂಪುಸೆಟ್ಟು ಬೇಕೋ ಅವನ ಹತ್ತಿರ ಹೋಗುವುದಿಲ್ಲ, ಯಾರಾದರೂ ಸ್ವಲ್ಪ ಹಣ ವಂತರಿದ್ದರೆ, ಏನಾದರೂ ಅವರಿಂದ ಮರುಪ್ರಯೋಜನವನ್ನು ಪಡೆಯುವುದಕ್ಕೆ ಅಂಥವರಲ್ಲಿ ಹೋಗು ತ್ತಾರೆ. ಪಂಪ್‌ಸೆಟ್ ತಲುಪಿಸುವುದಿದ್ದರೆ.............

Mr. SPEAKER.—Are you aware of any single Instance to make this Complaint aganist any individual officer ?

ಶ್ರೀ ಬಿ. ಭಾಸ್ಕರಶೆಟ್ಟಿ.—ಹಳ್ಳಿಯವರು ಅಪ್ಲಿಕೇಷನ್ನುಗಳನ್ನು ಕೊಟ್ಟಿದ್ದೇವೆ, ಅವುಗಳು ರಿಜೆಕ್ಟ್ ಆಗಿವೆಯೆಂದು ಹೇಳುತ್ತಾರೆ.

ಅಧ್ಯಕ್ಷರು.— ವಿಚಾರಿಸಿದ್ದೀರಾ ?

ಶ್ರೀ ಬಿ. ಭಾಸ್ಕರಶೆಟ್ಟಿ.—ಹಾಗೆ ಆಗಬಾರದು.

Mr. SPEAKER.—Gather facts

ಶ್ರೀ ಬಿ. ಭಾಸ್ಕರಶೆಟ್ಟಿ.—ಸರ್ಕಾರದವರು ಈ ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಂಡು ಹಂಚಿಕೆ ಕ್ರಮವನ್ನು ಸರಿಪಡಿಸಬೇಕು. ನಾನು ಅನುಭವದಲ್ಲಿ ನೋಡಿದ್ದನ್ನು ಹೇಳುತ್ತಿದ್ದೇನೆ. ತಮ್ಮ ಕೆಲಸಕಾರ್ಯಗಳನ್ನು ನೋಡಿದರೆ ಏನೋ ಒಂದು ಕಥೆ ನೆನಪಿಗೆ ಬಂದು ಅದರ ಹಾಗಿವೆ. ಪಂಚಾಂಗದ ಮಳೆ ಹಾಗಾಗಿದೆ ನಿಮ್ಮ ಕೆಲಸ. ಒಬ್ಬ ರೈತನಿಗೆ ತನ್ನ ಬೇಸಾಯಕ್ಕಾಗಿ ಮಳೆ ಬರವುದಿಲ್ಲ; ಕಾಯ್ದು, ಮಳೆ ಬರಲಿಲ್ಲವಲ್ಲ ಎಂದು ಕಡೆಗೆ ಪಂಚಾಂಗ ನೋಡಿದ, ಆ 2-3 ದಿವಸ ಮಳೆ ಉಂಟು ಅಂತ ಇತ್ತು, ಆದರೂ ಮಳೆ ಏಕೆ ಬರುವುದಿಲ್ಲ ಎಂದು ಯೋಚಿಸಿದ. ಮಳೆ ಬರ ದಿದ್ದು ನೋಡಿ ಗಡಿಬಿಡಿ ಆಯಿತು. ಆದರೆ ಪಂಚಾಂಗದೊಳಗೆ ಮಳೆ ಬರುತ್ತೆ ಅಂತ ಉಂಟು. ಕಡೆಗೆ ಪಂಚಾಂಗ ಹಿಂಡಿದ ನೀರು ಪಂಚಾಂಗದಿಂದ ಬರುತ್ತದೆಯೇ ?

ಅಧ್ಯಕ್ಷರು.—ನೀವು ಏನು ಮಾತನಾಡುತ್ತಿದ್ದೀರ. ಬಜೆಟ್‌ಮೇಲೆ ಭಾಷಣಮಾಡಿ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸರ್ಕಾರದವರು ಪಂಪ್ ಸೆಟ್ಟುಗಳಿಗಾಗಿ ಏನು ಹಣ ಖರ್ಚು ಮಾಡುತ್ತಾರೆ ಅದು ಈ ತುರ್ತುಪರಿಸ್ಥಿತಿಯಲ್ಲಿ ಮಾರ್ಚಿ 31ರ ಒಳಗೆ ಸಪ್ಲೈ ಆಗಬೇಕು. ತಮ್ಮ ನೌಕರರುಗಳಿಗೆಲ್ಲಾ ನಿರ್ದಿಷ್ಟವಾಗಿ ಈ ಒಂದು ವಿಷಯವನ್ನು ತಿಳಿಸಿ, ರೈತರಿಗೆ ಅತಿ ಅಗತ್ಯವಾಗಿ ಬೇಕಾದಂಥ ಪಂಪ್ ಸೆಟ್ಟುಗಳೇನಿವೆ ಅವನ್ನು ಅವರು ಹೊಂದುವಂತೆ ಮಾಡಬೇಕೆಂದು ಈ ಸಂದರ್ಭ ದಲ್ಲಿ ವಿನಂತಿಸಿಕೊಳ್ಳುತ್ತೇನೆ. ಈಗತಾನೆ ಮಾತನಾಡಿದ ಶ್ರೀಮತಿ ನಾಗರತ್ನಮ್ಮನವರು ಚಿತ್ರದುರ್ಗ ಜಿಲ್ಲೆಯಲ್ಲಿ ಬಲಾತ್ಕಾರವಾಗಿ ನ್ಯಾಷನಲ್ ಡಿಫೆಂಸ್ ಫಂಡಿಗೆ ಹಣವನ್ನು ವಸೂಲು ಮಾಡಿಲ್ಲ ಮಾತ್ರವಲ್ಲದೆ ಬಂಗಾರವನ್ನು ಸಹ ತೆಗೆದುಕೊಂಡಿಲ್ಲ ಶ್ರೀಮಾನ್ ಬಿ. ಎಲ್. ಗೌಡರು ಈ ಸಭೆಯ ಮುಂದೆ ಹೇಳಿದ್ದು ಶುದ್ಧ ಸುಳ್ಳು, ಎನ್ನುವಂತೆ ಹೇಳಿದ್ದಾರೆ. ಈ ವಿಷಯದಲ್ಲಿ ನಾನು ಈ ಸಭೆಯ ಮುಂದೆ ಒಂದು ವಿಷಯವನ್ನು ಹೇಳಲು ಬಯಸುತ್ತೇನೆ. ಚಿತ್ರದುರ್ಗದ ಕೆಲವು ಜನರು ಈಗಾಗಲೇ ಒಂದು ಕಾಗದ ಬರೆದಿದ್ದಾರೆ, ಚಿತ್ರದುರ್ಗದಲ್ಲಿ ಕೆಲವು ಮಂದಿ ಒಟ್ಟುಗೂಡಿ ಕಾಂಗ್ರೆಸ್ ನವರು ಅಂತ ಹೇಳಿಕೊಂಡು ದೇವಸ್ಥಾನದ ನಿಧಿಯನ್ನು ತಮ್ಮ ವಶಕ್ಕೆ ವಹಿಸಿಕೊಂಡದ್ದು ಮಾತ್ರ ವಲ್ಲದೆ, ಪೋಲೀಸ್ ಸ್ಟೇಷನ್‌ಗೆ ಕರೆಸಿ ಅವಮಾನ ಮಾಡಿದ್ದಾರೆ ಮಾತ್ರವಲ್ಲದೆ 80 ತೊಲ ಬಂಗಾರ ವನ್ನು ತೆಗೆದುಕೊಂಡು ಹೋಗಿ ಯಾವ ರಶೀದಿಯನ್ನು ಅದಕ್ಕೆ ಕೊಡಲಿಲ್ಲ ಎಂದು ಒಂದು ಕಾಗದ ಸಹ ಈಗಾಗಲೇ ಬಂದಿದೆ. ಮಾನ್ಯ ಜತ್ತಿಯವರು ಅಥವಾ ನಿಜಲಿಂಗಪ್ಪನವರು ಕೊಡಿ ಎಂದರೆ ಆ ಕಾಗದ ಕೊಡಲು ಬಯಸುತ್ತೇನೆ. ಇವತ್ತು ಇಂಥಾ ಒಂದು ಪರಿಸ್ಥಿತಿ ಚಿತ್ರದುರ್ಗದಲ್ಲಿ ಮಾತ್ರವಲ್ಲ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ನಡೆದಿದೆ, ನಡೆಯುತ್ತಾ ಇದೆ ಎಂಬ ಅಂಶವನ್ನು ಈ ಹಿಂದೆ ಮಾನ್ಯ ಮುಖ್ಯಮಂತ್ರಿಗಳ ತಿಳಿವಳಿಕೆಗೆ ತಂದಿದ್ದೇನೆ. ಈ ವಿಷಯದಲ್ಲಿ ಕಾಗದ ಪತ್ರ ಕೊಟ್ಟಿದ್ದೇನೆ. ಈ ಸಂದರ್ಭದಲ್ಲಿ ಏನು ಹೇಳಬಯಸುತ್ತೇನೆ ಎಂದರೆ ತುರ್ತು ಪರಿಸ್ಥಿತಿ ಇರಲಿ. ಈಗಿರುವುದಕ್ಕಿಂತ ಡಬ್ಬಲ್ ತುರ್ತು ಪರಿಸ್ಥಿತಿ ಬರಲಿ, ಚೈನಾದವರು ಹಿಂದೂಸ್ಥಾನದ ಮೇಲೆ ಸಾಮೂಹಿಕವಾಗಿ ಧಾಳಿ ಮಾಡಲಿ ನಮ್ಮಲ್ಲಿ ಕೆಲವರು ಇದ್ದಾರೆ, ನಮ್ಮ ಕಷ್ಟ ಏನು ಅಂತ ತಿಳಿದುಕೊಳ್ಳುವವರು ಬಹಳ ಕಡಿಮೆ. ನಮ್ಮ ಮೇಲೆ ಬರದ ಹಾಗೆ ತಪ್ಪಿಸಿಕೊಳ್ಳಬೇಕೆಂಬ ಸಮಾಜ ಸಾಧಕರ ಕೂಟ ಏರ್ಪಡುತ್ತಾ ಇದೆ. ಇದು ಬಾಕಿ ಪಾರ್ಟಿಯವರಲ್ಲಿ ಹೆಚ್ಚು ಕಂಡುಬರದಿದ್ದರೂ ಆಡಳಿತ ಪಕ್ಷದಲ್ಲಿ ಕಂಡುಬರುತ್ತದೆ. ಇದು ತಮಗೂ ಗೊತ್ತಿದ್ದ ವಿಷಯ. ಚಿತ್ರದುರ್ಗದ ವಿಷಯವನ್ನು ಮಂತ್ರಿಗಳು ಕೂಲಂಕಷವಾಗಿ ತಿಳಿದುಕೊಂಡು ತನಿಖೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಎಲ್. ಇ. ಎಸ್. ಸ್ಕೀಂ ಬಹಳ ಕೆಳಮಟ್ಟದಲ್ಲಿ ನಡೆಯುತ್ತಾ ಇದೆ, ಇದರಲ್ಲಿ ಬರೀ ಕಾರು, ಜೀಪುಗಳು ಓಡಾಡುವುದು ಮಾತ್ರವೇ ಕಾಣುತ್ತದೆ. ಕೆಲವು ಜನರು ಇರುತ್ತಾರೆ, ನಮ್ಮ ಊರಿನಲ್ಲಿ ಒಂದು ಸರ್ಕಸ್ ಕಂಪೆನಿ ಶುರುವಾಯಿತು ಆ ಕಂಪೆನಿಯ ಲಾರಿಗಳು, ಜೀಪುಗಳು ಎಲ್ಲೆಲ್ಲೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ತಮ್ಮ ಸಾಮಾನನ್ನು ಹೊತ್ತುಕೊಂಡು ತಿರುಗುತ್ತಿದ್ದವು ಅದೇ ರೀತಿ ಈ ಜೀಪುಗಳು ಊರಿನಲ್ಲೆಲ್ಲಾ ಎಲ್ಲಿಂದ ಬರುತ್ತವೆ, ಎಲ್ಲಿ ಹೋಗುತ್ತವೆ ಎಂಬುದನ್ನು ಹೇಳಲಿಕ್ಕೆ ಸಾಧ್ಯವಿಲ್ಲ. ಈ ರೀತಿ ಜೀಪ್‌ನಲ್ಲಿ ತಿರುಗಲಿಕ್ಕೆ ಈ ಡೆವಲಪ್‌ಮೆಂಟ್ ಬ್ಲಾಕ್‌ಗಳನ್ನು ಇಟ್ಟಿದ್ದಾರೋ ಅಥವಾ ಏನಾದರೂ ಇಂತಿಂಥ ಕೆಲಸ ಮಾಡಬೇಕೆಂದು ನಿರ್ದಿಷ್ಟವಾಗಿ ಒಂದು ವಿಷಯವನ್ನು ತಿಳಿಸಿದ್ದಾರೋ ಎಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ಅವರು ಯಾವತ್ತು ಒಕ್ಕಲುತನಕ್ಕೆ ಅಥವಾ ಆಹಾರ ಧಾನ್ಯ ಹೆಚ್ಚು ಬೆಳೆಸುವುದಕ್ಕೆ ಗಮನ ಕೊಡಬೇಕೆಂದೂ, ಶೇಕಡಾ 90 ಅವರು ಅದಕ್ಕಾಗಿಯೇ ಸಮಯವನ್ನು ವೆಚ್ಚಮಾಡಬೇಕೆಂದೂ ಬಿ. ಡಿ. ಸ್ಕೀಂನಲ್ಲಿ ಹೇಳಿದೆ. ಅವರು ಹಳ್ಳಿಗಳ ಕಡೆ ಹೋಗುವುದೇ ಇಲ್ಲ. ನಾನು ಗ್ರಾಮದಲ್ಲೇ ಇದ್ದೇನೆ. ಅಲ್ಲಿರುವುದಕ್ಕೆ ಮೊದಲು ಮಾಡಿ 5-6 ವರ್ಷಕ್ಕೆ ಮೇಲೆ ಆಯಿತು ನಾನೂ ಒಕ್ಕಲುತನ ಮಾಡುತ್ತೇನೆ. ಯಾವ ಒಬ್ಬ ಗ್ರಾಮ ಸೇವಕನಾಗಲೀ ಯಾವ ಒಬ್ಬ ಬಿ. ಡಿ. ಓ ಆಗಲೀ ಇಷ್ಟರವರೆಗೂ ಬರಲಿಲ್ಲ. ನನ್ನ ಹತ್ತಿರವೇ ಅವರು ಯಾರೂ ಬರಲಿಲ್ಲ ಎಂದ ಮೇಲೆ ನನಗಿಂತಲೂ ಕೆಳಮಟ್ಟದಲ್ಲಿರುವ ಆ ಪಾಪರವರ ಮನೆಗೆ ಹೋಗಿ ಗೊಬ್ಬರಬೇಕೇ, ಬೀಜಬೇಕೇ ಎಂದು ಕೇಳಿ ಎಷ್ಟು ಮಾತ್ರ ಕೊಟ್ಟಾರು ಎಂದು ಕೇಳುತ್ತೇನೆ. ಡೆವಲಪ್‌ಮೆಂಟ್ ಬ್ಲಾಕ್ ಇರುವಕಡೆ ಗೊಬ್ಬರ ಮುಂತಾದುವುಗಳನ್ನು ಡೆಮಾನ್‌ಸ್ಟ್ರೇಷನ್‌ಗಾಗಿ ಮುಫತ್ತಾಗಿ ಕೊಡುತ್ತಾರೆ. ಜಿಂಕ್‌ಷೀಟು ಮತ್ತು ಇತರ ಸಾಮಾನುಗಳೂ ಸಹ ಸಿಕ್ಕುತ್ತವೆ. ಇದೆಲ್ಲಾ ಯಾರು ಕಾಂಗ್ರೆಸ್‌ನವರು ಅಂತ ಇದ್ದಾರೆ, ತಾಲ್ಲೂಕು ಬೋರ್ಡ್ ಮೆಂಬರು ಅಂತ ಇದ್ದಾರೆ ಅವರಿಗೆ ಪಾಲು ಹಾಕಿ ಹಂಚುತ್ತಾರೆ. ಇದಕ್ಕೆ ಬೇಕಾದರೆ ಬೇಕಾದಷ್ಟು ಉದಾಹರಣೆಗಳನ್ನು ಕೊಡುತ್ತೇನೆ. ಈ ರೀತಿ ಬ್ಲಾಕ್ ಡೆವಲಪ್‌ಮೆಂಟ್ ಕೆಲಸ ನಡೆಯುತ್ತಾ ಇದೆ.

ಇನ್ನೊಂದು ಪಾನ ನಿರೋಧ ಈ ಸಭೆಯಲ್ಲಿ ಬಹಳಸಲ ಈ ವಿಷಯ ಚರ್ಚೆಯಾಗಿದೆ. ಇದು ಬಹಳ ಮುಖ್ಯವಾದ ವಿಷಯ ಮಾತ್ರವಲ್ಲದೆ ಮಾನ್ಯ ಮುಖ್ಯ ಮಂತ್ರಿಗಳು ಹೋದ ಸಲ ಬೊಂಬಾಯಿಗೆ ಹೋದಾಗ ಪಾನ ನಿರೋಧದ ವಿಷಯ ಪುನರಾಲೋಚನೆ ಮಾಡುವ ಒಂದು ಸಂದರ್ಭ ಬಂದು ಒದಗಿದೆ ಎಂದೂ ಕೂಡ ಹೇಳಿದ್ದಾರೆ. ನನಗೆ ತಿಳಿದು ಬಂತಂತೆ ಈ ಸಭೆಯ ನಮ್ಮ ಕಾಂಗ್ರೆಸ್ ಮಿತ್ರರು ಹಿಂದಿನ ಪಾರ್ಟಿ ಮೀಟಿಂಗ್‌ನಲ್ಲಿ ಸಾಧಾರಣ 70 ಜನರು ಸಹಿ ಹಾಕಿ ಪಾನ ನಿರೋಧವನ್ನು ರದ್ದು ಮಾಡಬೇಕೆಂದು ಪಾರ್ಟಿ ಮುಖಂಡರಿಗೆ ಕೊಟ್ಟಿದ್ದಾರೆ. ನಾವು ಈ ಸಂದರ್ಭದಲ್ಲಿ ಪಾನ ನಿರೋಧ ಮಾಡಬೇಕೇ ಬೇಡವೇ ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ ಏಕೆಂದರೆ ನಮ್ಮ ದೇಶಕ್ಕೆ ಚೀನೀಯರಿಂದ ಗಂಡಾಂತರ ಬಂದೊದಗಿದೆ. ತುರ್ತು ಪರಿಸ್ಥಿತಿಯನ್ನು ಎದುರಿಸುತ್ತಾ ಇದ್ದೇವೆ. ಈ ಸಂದರ್ಭದಲ್ಲಿ ನಮ್ಮ ಜನಗಳಿಗೆ ಈಗಾಗಲೇ ತೆರಿಗೆಗಳ ಹೊರೆ ತುಂಬಾ ಬಿದ್ದಿದೆ. ಅವರು ಹೊರಲಾರದಷ್ಟು ತೆರಿಗೆಯನ್ನು ಕೇಂದ್ರ ಸರ್ಕಾರದವರು ಮಾತ್ರವಲ್ಲದೆ ತಾವೂ ಕೂಡ ಹಾಕಿದ್ದೀರಿ. ಈ ಸಲ ಹಳ್ಳಿಗಳಲ್ಲಿ ರೈತರಿಂದ ಡಬ್ಬಲ್ ಕಂದಾಯ ವಸೂಲು ಮಾಡುವ ಕ್ರಮವನ್ನು ಇಟ್ಟುಕೊಂಡಿದ್ದೀರಿ. ಇನ್ನೂ ತೆರಿಗೆ ಹಾಕಿದರೆ ಈ ನೆಪದಲ್ಲಿ ಅವರಿಗೆ ಭಿಕ್ಷಾಪಾತ್ರೆ ಕೊಡುವುದು ಒಂದು ಬಾಕಿ ಉಳಿಯುತ್ತದೆ. ಇನ್ನು ಎಲ್ಲಾ ಕೊಟ್ಟಿದ್ದಾರೆ ಹೀಗಿರತಕ್ಕ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಈ ಪಾನ ನಿರೋಧವನ್ನು ರದ್ದುಮಾಡಬೇಕು, ಏಕೆಂದರೆ ಇದು ಜನರ ಆರ್ಥಿಕ, ನೈತಿಕ, ಮಾನಸಿಕ ಎಲ್ಲಾ ಮಟ್ಟದಲ್ಲೂ ಕೂಡ ಜನರನ್ನು ಕೆಳಮಟ್ಟಕ್ಕೆ ತೆಗೆದುಕೊಂಡು ಹೋಗಿದೆ.

ಕೆಲವು ಭಾಗದಲ್ಲಿ ನಮಗೆ ಪೋಲೀಸಿನವರಿಂದ ರಕ್ಷಣೆ ಒದಗುತ್ತದೆಂದು ನಾವು ಭಾವಿಸಿದ್ದೆವು. ಆದರೆ ಈ ದಿವಸ ಏನಾಗಿದೆಯೆಂದರೆ ನಾವೇ ಅವರಿಗೆ ರಕ್ಷಣೆ ಒದಗಿಸಬೇಕಾದ ಪ್ರಸಂಗ ಬಂದಿದೆ..

Mr. SPEAKER.—The Hon'ble Member has developed the point enough.

5-00 P.M.

ಶ್ರೀಮತಿ ಜಿ. ಸಿ. ಭಾಗೀರಥಮ್ಮ (ತುಮಕೂರು).—ಮಾನ್ಯ ಸಭಾಪತಿಗಳೇ 63-64ನೆಯ ಸಾಲಿನ ಆಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತ ಕೆಲವೆರಡು ವಿಷಯಗಳನ್ನು ನಾನೀಗ ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗಿನ ತುರ್ತು ಪರಿಸ್ಥಿತಿಯಲ್ಲಿ ನಮ್ಮ ದೇಶ ಸ್ವಾವಲಂಬಿ

(ಶ್ರೀಮತಿ ಜಿ. ಸಿ. ಭಾಗೀರಥಮ್ಮ)

ಯಾಗಬೇಕು, ನಮ್ಮ ರೈತರು ಹೆಚ್ಚು ಅಹಾರ ಧಾನ್ಯಗಳನ್ನು ಬೆಳೆಯಬೇಕು ಎನ್ನತಕ್ಕ ಅಭಿಪ್ರಾಯ ದಿಂದ ಕೇಂದ್ರ ಸರ್ಕಾರದವರು ಹೆಚ್ಚು ಹೆಚ್ಚು ನೀರಾವರಿ ಯೋಜನೆಗಳನ್ನು ಸ್ಥಾಪಿಸಲು ಹೆಚ್ಚಿನ ನೆರವನ್ನೂ, ಹಣವನ್ನೂ ಕೊಡುತ್ತಿದ್ದಾರೆ. ಇದು ಒಂದು ಸ್ವಾಗತ ಸಂಗತಿಯೇ ಆದರೂ ಹೆಚ್ಚು ಆಹಾರಗಳನ್ನು ಬೆಳೆಯಲು ರೈತರಿಗೆ ಬಾವಿಗಳನ್ನು ತೆಗೆಯುವುದಕ್ಕೆ ಹೆಚ್ಚು ಹೆಚ್ಚು ಹಣವನ್ನು ಸಾಲದ ರೂಪದಲ್ಲಿ ಕೊಡುತ್ತಿದ್ದಾರೆ. ಆದರೆ ನಮ್ಮ ತುಮಕೂರು ಜಿಲ್ಲೆ ಕ್ಷಾಮ ಪ್ರದೇಶವಾಗಿದೆ. ಈ ಪ್ರದೇಶದಲ್ಲಿ ಬಾವಿಗಳನ್ನು ತೆಗೆಯಲು ರೈತರು ಸುಮಾರು ಮೂರು ಸಾವಿರ ಜನ ಸಾಲಕ್ಕೆ ಅರ್ಜಿ ಹಾಕಿಕೊಂಡಿದ್ದಾರೆಂದು ನಾನು ಕೇಳುತ್ತೇನೆ. ಆದರೆ ಕೇವಲ 70 ಜನಗಳಿಗೆ ಮಾತ್ರ ಸಾಲ ಮಂಜೂರಾಗಿರುತ್ತೆಂಬುದನ್ನು ಕೇಳಿದರೆ ಬಹಳ ಶೋಚನೀಯವಾಗುತ್ತಿದೆ. ಆದರೆ ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳೂ ಹಾಗೂ ಈ ಬಾಬಿಗೆ ಸಂಬಂಧಪಟ್ಟ ಮುಖ್ಯ ಮಂತ್ರಿಗಳೂ ಸಹ ಅಲ್ಲಿಯ ತಾಲ್ಲೂಕ್ ಬೋರ್ಡು ಪ್ರೆಸಿಡೆಂಟರಿಗೂ ಮತ್ತು ಇನ್ನಿತರ ಮುಖಂಡರುಗಳಿಗೂ ಈ ಸಾಲ ಗಳನ್ನು ಇನ್ನೂ ಹೆಚ್ಚಾಗಿ ದೊರೆಯುವಂತೆ ಮಾಡಲಾಗುತ್ತದೆಂದು ಭರವಸೆ ಕೊಟ್ಟು ಬಂದಿದ್ದರು. ಆದರೆ ಕಾಲವಿನ್ನೂ ಮಿಂಚಿಹೋಗಿಲ್ಲ. ಈಗಲಾದರೂ ಆ ರೈತರಿಗೆ ಹೆಚ್ಚು ಬಾವಿಗಳನ್ನು ತೆಗೆಯಲು ಸಾಕಷ್ಟು ಹಣವನ್ನು ಒದಗಿಸಿಕೊಡಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈಗ ಅಲ್ಲಿ ಕೆಲವು ಬಾವಿಗಳ ಕೆಲಸ ಅರ್ಧ-ಮರ್ಧ-ವಾಗಿ ಮಧ್ಯೆ ಬಂಡೆ ಸಿಕ್ಕಿ ಕೆಲಸ ನಿಂತುಹೋಗಿದೆ. ಅಂಥಾ ಬಾವಿಗಳಿಗೆ ಸರ್ಕಾರದವರು ತಮ್ಮ ಸ್ವಂತ ಖರ್ಚಿನಲ್ಲಿ ಅಲ್ಲಿ ಬೋರ್‌ವೆಲ್ ಮಿಷಿನ್ ಹಾಕಿಸಿ ಆ ಬಾವಿಗಳ ಕೆಲಸವನ್ನು ಪೂರ್ತಿ ಮಾಡಿ, ಆ ಹಣವನ್ನು ರೈತರಿಂದ ಕಂತು ರೂಪದಲ್ಲಿ ವಸೂಲ್ಮಾಡಿ ಕೊಳ್ಳಲು ಸೂಕ್ತ ಏರ್ಪಾಡುಗಳನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಮತ್ತು ಬಾವಿಗಳಿಗೆ ಪಂಪ್‌ಸೆಟ್ಟುಗಳನ್ನು ಫಿಕ್ಸ್ ಮಾಡಿ, ಅವುಗಳಿಗೆ ಕರೆಂಟನ್ನು ಒದಗಿಸಲು ಕಂಬಗಳನ್ನು ಸಹ ನೆಟ್ಟು ಅನಂತರ ಲೈನನ್ನು ಎಳೆಯಲು ತಂತಿಯಿಲ್ಲ ಎಂತ ಆ ಕೆಲಸವನ್ನು ನಿಲ್ಲಿಸಿಬಿಟ್ಟಿದ್ದಾರೆ. ಸರ್ಕಾರದವರು ಅಲ್ಲಿಗೆ ಕೂಡಲೆ ಎಲೆಕ್ಟ್ರಿಕ್ ವೈರನ್ನು ಸರಬರಾಯಿ ಮಾಡುವಂತೆ ಏರ್ಪಾಡು ಮಾಡ ಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಮತ್ತು ತಾಲ್ಲೂಕ್ ಬೋರ್ಡ್‌ಗಳಿಗೆ P.W.D.ಗೆ ಸೇರಿದ್ದ ಕೆಲವು ರಸ್ತೆಗಳನ್ನೂ ಮತ್ತು 10 ಎಕರೆ ಅಚ್ಚುಕಟ್ಟಿದ್ದಂಥಾ ಕೆರೆಗಳ ರಿಪೇರಿ ಕೆಲಸವನ್ನೂ ವಹಿಸಿದ್ದಾರೆ. ಆದರೆ ತಾಲ್ಲೂಕ್ ಬೋರ್ಡಿ ನಲ್ಲಿ ಇವುಗಳ ದುರಸ್ತಿಗೆ ಸಾಕಾಗುವಷ್ಟು ಹಣವಿಲ್ಲ. ಈ ವರ್ಷದಲ್ಲಿ ಒಂದು ಕಟ್ಟೆ ರಿಪೇರಿಗೆ ಕೇವಲ 2,500 ರೂ.ಗಳನ್ನು ಕೊಟ್ಟಿದ್ದಾರೆ. ಆ ನಮ್ಮ ತಾಲ್ಲೂಕಿನಲ್ಲಿ 31 ಇಂಥಾ ಕಟ್ಟೆಗಳಿವೆ. ಈ 2,500 ರೂ.ಗಳು ಕಟ್ಟೆ ರಿಪೇರಿಗೆ ಸಾಲುವುದಿಲ್ಲವೆಂಬ ಮಾತು ಹಾಗಿರಲಿ, ಈ ಹಣ ಆ ಕಟ್ಟೆಗಳಿಗೆ ಸೇರಿರತಕ್ಕ ಚಾನಲನ್ನು ರಿಪೇರಿ ಮಾಡುವುದಕ್ಕೂ ಕೂಡ ಸಾಲದು. ಆದುದರಿಂದ ಕನಿಷ್ಟಪಕ್ಷ ವರ್ಷ ಒಂದಕ್ಕೆ 7–8 ಕಟ್ಟೆಗಳ ರಿಪೇರಿಗಾದರೂ ಹಣವನ್ನು ಒದಗಿಸಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ರಸ್ತೆಗಳ ವಿಚಾರ: ಈ ರಸ್ತೆಗಳ ಕಾಂಗಾರಿಯನ್ನು ಈಗ P.W.D. ಮಾಡುವ ಹಾಗಿಲ್ಲ; ತಾಲ್ಲೂಕ್ ಬೋರ್ಡುಗಳಲ್ಲಿ ಹಣವಿಲ್ಲ. ಈ ರೀತಿ ದಿಕ್ಕಿಲ್ಲದ ಅನಾಥ ರಸ್ತೆಗಳು ನಮ್ಮ ಜಿಲ್ಲೆಯಲ್ಲಿ ಬಹಳವಾಗಿವೆ. ಈಗಿನ ತುರ್ತುಪರಿಸ್ಥಿತಿಯಲ್ಲಿ ನಮಗೆ ಅನೇಕ ರಸ್ತೆಗಳೂ ಸೇತುವೆ ಗಳೂ ಆಗಬೇಕಾಗಿರುವಾಗ ಈ ಕೆಲಸಗಳನ್ನು ಹೀಗೆ ಅನಾದರಣೆಯಿಂದ ಕೈಬಿಡುವುದು ಸರಿಯಲ್ಲ. ಈ ರಸ್ತೆಗಳಿಗೂ, ಸೇತುವೆಗಳಿಗೂ ಸಾಕಾಗುವಷ್ಟು ಹಣವನ್ನೊದಗಿಸಬೇಕೆಂದು ನಾನು ಹಣಕಾಸಿನ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಆರೋಗ್ಯದ ವಿಚಾರಕ್ಕೆ ಬಂದರೆ—ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿಯೊಂದೂರಿ ನಲ್ಲೂ ಒಳಚರಂಡಿಗಳಾಗಬೇಕು. ಆಗ ಜನರ ಆರೋಗ್ಯ ಸ್ಥಿತಿ ಉತ್ತಮವಾಗುತ್ತದೆ. ಈ ಕೆಲಸಕ್ಕೆ ಸಾಕಾಗುವಷ್ಟು-ಹಣ ಈಗ ತಾಲ್ಲೂಕ್ ಬೋರ್ಡಿನವರಲ್ಲಿಲ್ಲ. ಈ ದಿವಸ ಹಳ್ಳಿಗಳಲ್ಲಿ ರಸ್ತೆಗಳ ಹಾಗೂ ಚರಂಡಿಗಳ ಅಗತ್ಯ ಬಹಳವಾಗಿದೆ. ಈಗ ಆಸ್ಪತ್ರೆಗಳಲ್ಲಿ ಬಡರೋಗಿಗಳಿಗೆ ಕೊಡಬೇಕಾದ ಅಂದರೆ ಉಚಿತವಾಗಿ ಹಂಚಬೇಕಾದ ಮಾತ್ರೆಗಳು, ಇಂಜಕ್ಷನ್ ಟ್ಯೂಬುಗಳೆಲ್ಲ ಆ ರೋಗಿಗಳಿಗೆ ಮುಟ್ಟುತ್ತಿಲ್ಲ. ಅವು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರಾಟವಾಗುತ್ತಿವೆ. ಇದನ್ನು ಕೂಡಲೇ ತಡೆಗಟ್ಟಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ಆ ತುಮಕೂರಿನಲ್ಲಿರುವ ಆಸ್ಪತ್ರೆಯಲ್ಲಿ ಸಾಕಷ್ಟು ಡಾಕ್ಟರುಗಳೂ ನರ್ಸುಗಳೂ ಇಲ್ಲದೆ ಬಹಳ ತೊಂದರೆಯಾಗಿದೆ. ಆದರಲ್ಲೂ ಲೇಡಿ ಡಾಕ್ಟರಿಲ್ಲದೆ ಬಹಳ ತೊಂದರೆಯಾಗಿದೆ. ಅಲ್ಲಿ ಇಬ್ಬರಾದರೂ ಲೇಡೀ ಡಾಕ್ಟರುಗಳಿದ್ದರೆ ಒಬ್ಬರು ಹೊರಗೆ ಪೇಷಂಟುಗಳನ್ನು ವಿಚಾರಿಸಿ ಚೀಟಿ ಬರೆದುಕೊಟ್ಟರೆ ಒಳಗೆ ಇನ್ನೊಬ್ಬರು ಪರೀಕ್ಷೆ

ಮಾಡುತ್ತಾರೆ. ಈ ದಿವಸ ಅಲ್ಲಿ ಲೇಡಿ ಡಾಕ್ಟರಿಲ್ಲದೆ ಅನೇಕ ಗರ್ಭಿಣಿ ಹೆಂಗಸರಿಗೆ ತೊಂದರೆಯಾಗಿರ ತಕ್ಕದ್ದನ್ನು ನಾನೇ ಕಣ್ಣಾರೆ ನೋಡಿದ್ದೇನೆ. ಮೇಲಾಗಿ ಈ ವಿಚಾರವಲ್ಲಿ ಅನೇಕ ವೇಳೆ ನಾನು ಮಾನ್ಯ ಆರೋಗ್ಯ ಮಂತ್ರಿಗಳಲ್ಲಿ ಮನವಿ ಸಹ ಮಾಡಿಕೊಂಡಿದ್ದೇನೆ. ಆದರೆ ಅವರಿಗೆ ನಮ್ಮ ಆಹವಾಲಿನ ಮೇಲೆ ಮಮತೆ ಹುಟ್ಟಿತೋ ಇಲ್ಲವೋ ಕಾಣವುದಿಲ್ಲ. ಅಲ್ಲಿ ಕೆಲವು ಹೊಸದಾಗಿ ವಾರ್ಡು ಗಳನ್ನು ಕಟ್ಟಿಸಲಾಗಿದೆ. ಆದರೆ ಡಾಕ್ಟರುಗಳ ಮತ್ತು ನರ್ಸುಗಳ ಅಭಾವದಿಂದ ಆ ವಾರ್ಡು ಗಳನ್ನು ಉಪಯೋಗಿಸದೆ ಈಗ ಇರತಕ್ಕ ವಾರ್ಡುಗಳಲ್ಲಿ ದನಗಳನ್ನು ದೊಡ್ಡಿಗೆ ಕೂಡಿದಂತೆ ರೋಗಿ ಗಳನ್ನು ಹಾಕಿದ್ದಾರೆ. ಅದನ್ನು ನೋಡಿದರೆ ಜನರ ಆಸ್ಪತ್ರೆ ಎಂತ ಕಾಣುವುದಿಲ್ಲ. ಇತ್ತ ಕಡೆಗೆ ಆರೋಗ್ಯ ಮಂತ್ರಿಗಳು ಸ್ವಲ್ಪ ಗಮನ ಕೊಟ್ಟು ಇದನ್ನು ಸರಿಪಡಿಸಬೇಕೆಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಷಯ—ಈ ಹಿಂದೆ ಇದೇ ಸಭೆಯಲ್ಲಿ ಬಡ್ಜೆಟ್ ಮೇಲೆ ಚರ್ಚೆ ಆಗು ತ್ತಿದ್ದಾಗ ನಾನು ಈ ಶಾಲೆಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ವಿದ್ಯಾರ್ಥಿ ವೇತನವು ಅವರಿಗೆ ದೊರೆಯುತ್ತಿಲ್ಲವೆಂಬ ಅಂಶವನ್ನೂ ತಿಳಿಸಿದ್ದೆನು. ಆದರೆ ಈಗಲೂ ಹಾಗೇ ವಿಳಂಬವಾಗು ತ್ತಿದೆ. ಅಷ್ಟೇ ಅಲ್ಲ ಹೋದ ವರ್ಷಕ್ಕಿಂತಲೂ ಈ ವರ್ಷ ಇನ್ನು ಇದು ಹದಗೆಟ್ಟಿದೆ. ಈಗಾಗಲೇ ವಾರ್ಷಿಕ ಪರೀಕ್ಷೆಗಳು ನಡೆಯುತ್ತಿವೆ. ಇನ್ನೂ ಕೆಲವು ಕಡೆ ಈ ಮೀಟಿಂಗುಗಳೇ ಆಗಿಲ್ಲ. ಕೆಲವು ಬಡ ವಿದ್ಯಾರ್ಥಿಗಳು ಅವರಿಗೆ ಸಕಾಲದಲ್ಲಿ ಈ ಸೌಲಭ್ಯ ದೊರೆಯದೆ, ಅವರಿಗೆ ಶಾಲಾ ಫೀಜನ್ನು ಕೊಡಲು ಶಕ್ತಿಯಿಲ್ಲದೆ, ಪರೀಕ್ಷೆಗೆ ಹಣ ಕಟ್ಟಲು ಶಕ್ತಿ ಇಲ್ಲದೆ ಅವರು ಅರ್ಧಂಬರ್ಧ ಓದನ್ನು ಓದಿ ಮಧ್ಯದಲ್ಲೇ ವಿದ್ಯೆಯನ್ನು ಬಿಟ್ಟು ಹೋಗತಕ್ಕ ಪರಿಸ್ಥಿತಿ ಉಂಟಾಗಿದೆ. ಈ ವಿಚಾರವನ್ನು ನಾನು ವಿದ್ಯಾಮಂತ್ರಿಗಳಲ್ಲೂ ಸಹ ಅರಿಕೆ ಮಾಡಿದ್ದೇನೆ. ಈ ವಿಚಾರಕ್ಕೆ ವಿದ್ಯಾ ಮಂತ್ರಿಗಳು ಕೂಡಲೆ ಗಮನ ಕೊಟ್ಟು ಇದನ್ನು ಸರಿಪಡಿಸಬೇಕೆಂದು ನಾನು ಅವರಲ್ಲಿ ಕಳಕಳಿಯಿಂದ ಮನವಿ ಮಾಡಿ ಕೊಳ್ಳುತ್ತೇನೆ.

ಪಾಲಿಟೆಕ್ನಿಕ್‌ನಲ್ಲಿ ಷೆಡ್ಯೂಲ್ಡ್ ಪಂಗಡಗಳವರಿಗೆ ಶೇಕಡ 57 ಸ್ಕಾಲರ್ ಷಿಪ್‌ಗಳನ್ನು ಕೊಟ್ಟಿದ್ದಾರೆ. ಆದರೆ ಅವರಿಗೆ ಕೇಂದ್ರದಿಂದ ಸ್ಕಾಲರ್‌ಷಿಪ್‌ಗಳು ಬರುತ್ತವೆ. ಅವರಿಗಾಗಿ ಇಲ್ಲಿ allot ಮಾಡಿರತಕ್ಕ ಸ್ಕಾಲರ್‌ಷಿಪ್‌ಗಳು lapse ಆಗುತ್ತವೆ. ಹಿಂದಿನ ಸ್ಕಾಲರ್‌ಷಿಪ್ ಕಮಿಟಿಯವರು ಇದರ ಬಗ್ಗೆ ಸರ್ಕಾರಕ್ಕೆ ಸಿಫಾರಸು ಮಾಡಿ ಕಳಿಸಿದ್ದಾಗ್ಯೂ ಇದುವರೆಗೂ ಸರ್ಕಾರ ಗಮನಕ್ಕೆ ತೆಗೆದುಕೊಳ್ಳದೆ ಹಾಗೆಯೇ ಬಿಟ್ಟುಕೊಂಡು ಬಂದಿದ್ದಾರೆ ಆದುದರಿಂದ ಹಣ lapse ಆಗುವದಿದೆ. lapse ಆಗುವ ಬದಲು ಅದು ಬೇರೆ ವಿದ್ಯಾರ್ಥಿಗಳಿಗೆ ಅನುಕೂಲ ವಾಗುವಂತೆ ಒಂದು ಅವಕಾಶವನ್ನು ಮಾನ್ಯ ಸಚಿವರು ಮಾಡಿಕೊಡಬೇಕೆಂದು ನಾನು ಪ್ರಾರ್ಥಿಸಿ ಕೊಳ್ಳುತ್ತೇನೆ.

ರಚನಾತ್ಮಕ ಕಾರ್ಯಗಳಲ್ಲಿ ಒಂದಾದಂಥ ಹಿಂದಿ ಪ್ರಚಾರದಲ್ಲಿ ಮೊದಲಿನಿಂದಲೂ ಪ್ರಚಾರ ವನ್ನೇ ಮುಖ್ಯವಾಗಿಟ್ಟುಕೊಂಡು ಬಂದಂಥ ಹಿಂದಿ ಉಪಾಧ್ಯಾಯರ ಬಗ್ಗೆ ವಿದ್ಯಾ ಸಚಿವರಿಗೆ ಏತಕ್ಕೆ ಈ ಮಲತಾಯಿ ಪ್ರೇಮವೋ ನನಗೆ ಬೇರೆ ಗೊತ್ತಾಗುತ್ತಲೇ ಇಲ್ಲ. ಹತ್ತರಿಂದ ಹಿಡಿದು 25 ರೂಪಾಯಿವರೆಗೆ ಸಂಭಾವನೆಯನ್ನು ತೆಗೆದುಕೊಂಡು ಬಂದಂಥ ಹಿಂದಿ ಉಪಾಧ್ಯಾಯರನ್ನು ಈಗ ಮನೆಗೆ ಕಳಿಸಿ S. S. L. C. ಪಾಸ್ ಆದವರನ್ನು ನೇಮಕ ಮಾಡಿಕೊಳ್ಳ ಬೇಕೆಂದಿದ್ದಾರೆ. 10-15 ರೂಪಾಯಿಗೆ ಕೆಲಸ ಮಾಡಿಕೊಂಡು ಬಂದಂಥ ಉಪಾಧ್ಯಾಯರ ಗತಿ ಏನು ಎಂಬುದು ಗೊತ್ತಿಲ್ಲ. ಇದಕ್ಕಾಗಿ ನಾವುಗಳು ತುಮಕೂರಿನಿಂದ ಒಂದು ನಿಯೋಗ ಬಂದು ವಿದ್ಯಾ ಸಚಿವರನ್ನೂ ಮುಖ್ಯ ಮಂತ್ರಿಗಳನ್ನೂ ಕಂಡು ಮನವಿ ಮಾಡಿಕೊಂಡಿದ್ದೆವು, ಅವರನ್ನೆಲ್ಲ ಕೆಲಸದಲ್ಲಿ ಹಾಗೆಯೆ ಉಳಿಸಿಕೊಂಡು ಬರುತ್ತೇವೆ ಎಂದು ನಮಗೆ ಭರವಸೆ ಕೊಟ್ಟಿದ್ದಾರೆ. ಅದನ್ನು ಉಳಿಸಿ ಕೊಂಡು ಬರುತ್ತಾರೆಂದು ನಾನು ನಂಬಿಕೊಂಡಿದ್ದೇನೆ.

ತುಮಕೂರಿನಲ್ಲಿ K. R. Girls Middle Schoolಗಾಗಿ ಹತ್ತು ವರ್ಷಗಳ ಕೆಳಗೆ ಒಂದು ಕಟ್ಟಡವನ್ನು ಕಟ್ಟಿದ್ದಾರೆ. ಅದು ಈಗಾಗಲೇ ಬಿದ್ದು ಹೋಗಿ ನಾಲ್ಕೈದು ವರ್ಷವಾಗಿದೆ. ಹೀಗಾಗಬೇಕಾದರೆ ಇದನ್ನು supervise ಮಾಡಿದ ಲೋಕೋಪಯೋಗಿ ಇಲಾಖೆಯವರ ತಪ್ಪೇ, ಕಟ್ಟಡವನ್ನು ಕಟ್ಟಿದ ಕಂಟ್ರಾಕ್ಟರುಗಳ ತಪ್ಪೇ ಎಂಬುದನ್ನು ಏನಾದರೂ ಗಮನಿಸಿದ್ದಾರೆಯೇ? ಬಡ ಬೋರೇಗೌಡರ ದುಡ್ಡು ಈ ರೀತಿ ಅನ್ಯಾಯವಾಗುವುದಕ್ಕೆ ಅವಕಾಶಮಾಡಿ ಕೊಡಕೂಡ ದೆಂದು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಖಾದಿ ಬೋರ್ಡಿನಲ್ಲಿ Executive Officer ಮತ್ತು Secretary ಎಂಬುದಾಗಿ ಇಬ್ಬರು ಬೇರೆ ಬೇರೆ ಕೆಲಸ ಮಾಡುತ್ತಿದ್ದಾರೆ. ನನಗೆ ತಿಳಿದ ಮಟ್ಟಿಗೆ ಇಬ್ಬರ ಕೆಲಸವನ್ನು ಒಬ್ಬರೇ ಮಾಡಬಹುದು, ನಿರ್ವಹಿಸಬಲ್ಲರು. ಆದುದರಿಂದ ಈ ಎರಡರಲ್ಲಿ ಯಾವುದಾದರೂ ಒಂದು ಜಾಗವನ್ನು

ಖಾಯಂ ಮಾಡಿ ಒಂದು ಜಾಗವನ್ನು ಖಾಲಿ ಮಾಡುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ.

ಪ್ರತಿಯೊಂದು ಜಿಲ್ಲೆಯಲ್ಲಿಯೂ ಖಾದಿ ಬೋರ್ಡ್ ಆಫೀಸು ಇರಬೇಕು ಎಂದು ಒಂದೊಂದು ಆಫೀಸನ್ನು ಸ್ಥಾಪನೆ ಮಾಡಿದ್ದಾರೆ. ಇದನ್ನು ಸ್ಥಾಪನೆ ಮಾಡಿದ ಉದ್ದೇಶ ವೇನೆಂಬುದು ನನಗೆ ಗೊತ್ತಾಗಿಲ್ಲ. ಬರೇ ಕಾಗದಗಳನ್ನು ತೆಗೆದುಕೊಂಡು ಕಳಿಸುವಂಥ ಪೋಸ್ಟ್ ಆಫೀಸ್ ಕೆಲಸವಂತೆ ನಡೆಯುತ್ತಿದೆ. ತಾಲ್ಲೂಕಿನಿಂದ ಬಂದಂಥ ಪತ್ರಗಳನ್ನು ಕಳಿಸುವುದು ಹೊರತು ಆ ಆಫೀಸಿನಿಂದ ಏನೂ ಪ್ರಯೋಜನ ವಾಗುತ್ತಿಲ್ಲ. ಆ ಆಫೀಸಿನ ಸಿಬ್ಬಂದಿ ಮತ್ತು ಜವಾನನ ಸಂಬಳ ಆಫೀಸಿನ ಬಾಡಿಗೆ ಇದೆಲ್ಲ ಅನ್ಯಾಯವಾಗುತ್ತಿದೆ.

ಗ್ರಾಮಾಂತರ ಕೈಗಾರಿಕಾ ಅಭಿವೃದ್ಧಿಗಾಗಿ ಸರ್ಕಾರ ಖರ್ಚು ಮಾಡುತ್ತಿರುವುದು ಸ್ವಾಗತಾ ರ್ಹವಾದ ವಿಷಯ. ಗಾಣಕ್ಕೆ ಪ್ರೋತ್ಸಾಹ ಕೊಡಲು ಎರಡು ಯೂನಿಟ್‌ಗಳಿಗೆ exemption ಕೊಟ್ಟಿದ್ದಾರೆ. ಒಂದು ಯೂನಿಟ್‌ಗೆ ಎಷ್ಟು ಗಾಣ ಎಂಬುದನ್ನು ಸರ್ಕಾರ ರೂಲ್ಸ್‌ನಲ್ಲಿ ತಿಳಿಸಿಲ್ಲ. ಖಾದಿ ಕಮಿಷನರ್‌ನವರು ಎರಡು ಗಾಣಗಳಿಗೆ ಒಂದು ಯೂನಿಟ್ ಎಂದು ನಮೂದಿಸಿದ್ದಾರೆ. ಆದುದರಿಂದ ಎರಡು ಯೂನಿಟ್ ಗಾಣಗಳನ್ನು ನಡೆಸುತ್ತಿರುವ ಸೊಸೈಟಿಗಳಿಗೆ recognition ಕೊಡಬೇಕು ಮತ್ತು ಗಾಣದ ಉದ್ಯಮ ಅಭಿವೃದ್ಧಿಯಾಗ ಬೇಕಾದರೆ Purchase Tax ಮತ್ತು Sale Tax ವಜಾ ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಒಂದು ವಜಾ ಮಾಡಿದ್ದೇವೆ, ಒಂದು ಮಾಡಿಲ್ಲ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಹೋದ ವರ್ಷ ತುಮಕೂರು ಕಾಲೇಜು ಹಾಸ್ಟಲ್ ಮುಚ್ಚಿದ್ದರಿಂದ ಅಲ್ಲಿ ಕೆಲಸ ಮಾಡುತ್ತಿದ್ದ 8—9 ಜನ ಕೆಲಸಗಾರರು ಕೆಲಸವಿಲ್ಲದೆ ಹೊಟ್ಟೆಗೆ ಅನ್ನ ವಿಲ್ಲದೆ ಅಲೆಯುವಂಥ ಸ್ಥಿತಿ ಬಂದಿದೆ. ಅವರಿಗೆ ಬೇರೆ ಎಲ್ಲಿಯೂ ಕೆಲಸವನ್ನು ಕೊಟ್ಟಿಲ್ಲ, ಸಂಬಂಧ ಪಟ್ಟವರಿಗೆ ಹೇಳಿಕೊಂಡಾಗ್ಯೂ ಇದುವರೆಗೂ ಕೆಲಸ ಸಿಕ್ಕಿಲ್ಲ. ಹಾಸ್ಟಲನ್ನು ಮುಚ್ಚಿದ ಉದ್ದೇಶ ವಾದರೂ ಏನು ಎಂದು ವಿದ್ಯಾ ಸಚಿವರಲ್ಲಿ ಕೇಳಿದೆ. ಹಾಸ್ಟಲನ್ನು ಮುಚ್ಚಿರುವುದರಿಂದ ವಿದ್ಯಾರ್ಥಿ ಗಳು ರೂಮುಗಳನ್ನು ಮಾಡಿಕೊಂಡು ಅಡಿಗೆ ಮಾಡಿ ಊಟ ಮಾಡುತ್ತಿದ್ದಾರೆ. ಇಂಥವರಿಗೆ ಅನುಕೂಲವಾಗುವ ಸ್ಥಿತಿಯಲ್ಲಿದ್ದಂಥ ಹಾಸ್ಟಲನ್ನು ಮುಚ್ಚಿ ಅಲ್ಲಿ ಕೆಲಸ ಮಾಡುತ್ತಿದ್ದ ಕೆಲಸ ಗಾರರಿಗೂ ತೊಂದರೆ ಕೊಟ್ಟು, ವಿದ್ಯಾರ್ಥಿಗಳಿಗೂ ತೊಂದರೆ ಕೊಟ್ಟು ಕೆಲಸಗಾರರನ್ನು ಕಷ್ಟಕ್ಕೆ ಈಡು ಮಾಡಿರುವುದು ಸರಿಯಲ್ಲ. ಈ ಕಾಲೇಜ್ ಹಾಸ್ಟಲನ್ನ ತೆರೆಯುವುದಕ್ಕೆ ಸಚಿವರು ಮನಸ್ಸು ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಮಾನ್ಯ ಸಭಾಪತಿಗಳೇ, ಅರ್ಥ ಸಚಿವರು ನಮ್ಮ ಮುಂದೆ ಇಟ್ಟಿರುವ 1963-64ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ಸ್ವಾಗತಿಸುತ್ತ ಕೆಲವು ಸಲಹೆಗಳನ್ನು ಮಾಡಬಯಸುತ್ತೇನೆ.

ಸ್ವಾಮಿ, ದೇಶದಲ್ಲಿ ವ್ಯವಸಾಯದ ಮೇಲೆ ಒತ್ತಡ ತಪ್ಪಿಸಲು ವಿದ್ಯಾವಂತ ನಿರುದ್ಯೋಗಿಗಳು ಹಾಗೂ ವ್ಯವಸಾಯ ಕೂಲಿಗಾರರು ಇವರಿಗೆ ಕೆಲಸವನ್ನು ಒದಗಿಸಲು ಕೈಗಾರಿಕೆಯನ್ನು ದೇಶದಲ್ಲಿ ಪ್ರಾರಂಭ ಮಾಡಬೇಕೆಂದಿದ್ದಾರೆ. ಅದಕ್ಕೆ ನನ್ನ ಸುಸ್ವಾಗತವುಂಟು. ಆದರೆ ಅದರಲ್ಲಿ ಕೆಲವು ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಕೈಗಾರಿಕೆ ಇಲಾಖೆ ಏನಾಗಿದೆ ಎಂದರೆ ಮಾರವಾಡಿಗಳು ಬಂಡವಾಳಹಾಕಿ ವ್ಯಾಪಾರ ಮಾಡುತ್ತಿರುವ ಹಾಗೆ ಆಗಿದೆ. ಹಣ ವಿದ್ದವರು ಮುನ್ನುಗ್ಗಿ ಬೇಕಾದ ಅನುಕೂಲ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು. ಆದರೆ ಕೈಗಾರಿಕೆಯಲ್ಲಿ ಆಶಕ್ತಿ ಇದ್ದವರು, ಹಣದ ಸಹಾಯವಿಲ್ಲದೆ ಇರುವುದರಿಂದ ಯಾವ ಕೈಗಾರಿಕೆ ಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಕೈಗಾರಿಕೆ ಇಲಾಖೆಯವರು ದೇಶದಲ್ಲಿ ಎಲ್ಲೆಲ್ಲಿ ಯಾವ ಯಾವ ಕಚ್ಚಾ ಪದಾರ್ಥಗಳು ದೊರೆಯುತ್ತವೆ, ಏನೇನು ಅನುಕೂಲಗಳು ದೊರೆಯುತ್ತವೆ, ಕುಶಲ ಕಲೆಗಾರರು ಯಾರಿದ್ದಾರೆ, ಆಯಾ ಸ್ಥಳಗಳಲ್ಲಿ ಏನೇನು ಕೈಗಾರಿಕೆಗಳನ್ನು ನಡೆಸಬಹುದು ಎನ್ನು ವುದರ ಬಗ್ಗೆ ಸರ್ವೆ ನಡೆಸಿಲ್ಲ. ಅಲ್ಲದೆ ಈಗ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕಾದರೆ ಸಣ್ಣ ಕೈಗಾರಿಕೆಗಳಿಗೇ ಒಂದು ಮಂಡಳಿಯನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ರಚಿಸಬೇಕು. ಈಗಿರುವ ಪದ್ಧತಿಯಂತೆ ಒಂದು ಕೈಗಾರಿಕೆ ನಡೆಸಬೇಕಾದರೆ ಕಚ್ಚಾ ಪದಾರ್ಥಕ್ಕೆ ಕೈಗಾರಿಕಾ ಇಲಾಖೆಗೆ ಹೋಗಬೇಕು, ವಿದ್ಯುತ್ತಿಗೆ ವಿದ್ಯುಚ್ಛಕ್ತಿ ಮಂಡಲಿಗೆ ಹೋಗಬೇಕು, ಪುರಸಭೆಯವರ ಹತ್ತಿರ ಹೋಗಿ ಲೈಸೆನ್ಸ್ ತೆಗೆದುಕೊಳ್ಳಬೇಕು, ಮೋಟಾರ್ ಬೇಕಾದರೆ Small Scale Industries Corporationಗೆ ಹೋಗಬೇಕು. ವಸತಿಗಾಗಿ ಕಾರ್ಮಿಕರ ಇಲಾಖೆಗೆ ಹೋಗ ಬೇಕು, ಇದು ಬಹಳ ಕಷ್ಟ. ಇದರಿಂದ ಯಾವ ಕೈಗಾರಿಕೆಯನ್ನು ಪ್ರಾರಂಭ ಮಾಡುವುದಕ್ಕೂ

ತೊಂದರೆಯಾಗಿದೆ. ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡಿ, ಆ ಕೆಲಸ ಶೀಘ್ರವಾಗಿ ಮತ್ತು ತ್ವರಿತವಾಗಿ ಆಗಬೇಕಾದರೆ ನಾನು ಇದುವರೆಗೂ ಹೇಳಿದ ವಿವಿಧ ಇಲಾಖೆಗಳ ಅಧಿಕಾರಿ ಸದಸ್ಯರನ್ನೊಳಗೊಂಡ ಒಂದು ಮಂಡಳಿಯನ್ನು ರಚಿಸಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಮಾಗಡಿ ತಾಲ್ಲೂಕು ಕ್ಷೇತ್ರದಲ್ಲಿ ಕಬ್ಬಿಣದ ಅದಿರು, China Clay ಎಂದರೆ ಬಿಳಿ ಜೇಡಿಮಣ್ಣು ಮತ್ತು ಹೇರಳವಾಗಿ ಬಳಪದ ಕಲ್ಲು ಸಿಕ್ಕುತ್ತದೆ. ಯಾವ ಇಲಾಖೆಯವರು ಇನ್ನೂ ಪರಿಶೀಲನೆ ಮಾಡಿಲ್ಲ, ಈಗಲಾದರೂ ಪರಿಶೀಲನೆ ಮಾಡಿ, ಅದಕ್ಕೆ ಸಹಾಯಕವಾಗುವಂಥ ಯಾವುದಾದರೂ ಕೈಗಾರಿಕೆಯನ್ನು ಪ್ರಾರಂಭ ಮಾಡುವುದಕ್ಕೆ ತ್ವರಿತ ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಮಾನ್ಯ ಅರ್ಥ ಸಚಿವರು ಆಯವ್ಯಯ ಪಟ್ಟಿಯನ್ನು ಮಂಡಿಸುತ್ತ ಇನಾಂ ಗ್ರಾಮಗಳ ಬಗ್ಗೆ ಸರ್ವೆ ಮಾಡುತ್ತಿದ್ದಾರೆಂದು ಹೇಳಿದರು. ನಾನು ಒಪ್ಪಿಕೊಳ್ಳುತ್ತೇನೆ. ಸರ್ವೆ ಆಗಿದೆ, ಇನಾಂ ಗ್ರಾಮಗಳನ್ನು ಸರ್ಕಾರಕ್ಕೆ ತೆಗೆದುಕೊಂಡಿದ್ದಾರೆ. ಎರಡು ಯೋಜನೆಗಳು ಮುಗಿದು ಮೂರನೆ ಪಂಚವಾರ್ಷಿಕ ಯೋಜನೆಯೂ ಆಗುತ್ತ ಬಂದಿದೆ. ಇನಾಂ ಗ್ರಾಮಗಳಲ್ಲಿ ಯಾವ ವಿಧವಾದ ಅಭಿವೃದ್ಧಿ ಯಾಗುವುದಕ್ಕೂ ಅವಕಾಶವಿಲ್ಲ, ಇನಾಂ ಗ್ರಾಮಗಳನ್ನು ಸರ್ಕಾರಕ್ಕೆ ತೆಗೆದುಕೊಂಡು ಸರ್ವೆ ಸೆಟಲ್‌ಮೆಂಟ್ ಆದರೂ ಕೂಡ, ಎರಡು ವರ್ಷಗಳವರೆಗೆ ಜೋಡಿದಾರರು ತಮ್ಮ ತಕರಾರು ಅರ್ಜಿಯನ್ನು ಹಾಕುವುದಕ್ಕೆ ಅವಕಾಶವಿದೆ. ಈ ಸ್ಥಿತಿಯಲ್ಲಿ ರೈತನು ತನ್ನ ಹಕ್ಕುಬಾಧ್ಯತೆಗಳನ್ನು ದೃಢ ಪಡಿಸಿಕೊಳ್ಳಲು ಅವಕಾಶವಿಲ್ಲ. ನೀರಾವರಿ ಸೌಲಭ್ಯಗಳು, ತಕಾವಿಸಾಲ, land improvement loan ಇವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಇನಾಂ ಗ್ರಾಮಗಳ ಅಭಿವೃದ್ಧಿ ಕಾರ್ಯಗಳಿಗಾಗಿಯೇ ಮುಂದೆ ಹೆಚ್ಚು ಹಣವನ್ನು ಒದಗಿಸಿದ್ದರೆ ಚೆನ್ನಾಗಿರುತ್ತೆ ಎಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಈಗ ಸರ್ವೇಯರುಗಳನ್ನು ಗ್ರಾಮಗಳಿಗೆ ಕಳುಹಿಸಿ ರೈತರಲ್ಲಿರುವ ಜಮೀನನ್ನು ಅಳತೆ ಮಾಡಿಸಿ ಬಾಂದು ಕಲ್ಲನ್ನು ಹಾಕಿಸುವಾಗ ಅನುಭವಿಸುತ್ತಿರುವವರು ಯಾರು, ಹಿಂದೆ ಇದ್ದ ಹಿಡುವಳಿ ಏನಿತ್ತು ಇವನ್ನು ನೋಡಿ ಅಳತೆ ಮಾಡುತ್ತಿಲ್ಲ. ಒಂದೆರಡು ಎಕರೆಗಳನ್ನು ಅವರ ದನಕರುಗಳಿಗೋಸ್ಕರ, ಗೋಮಾಳಕ್ಕೋಸ್ಕರ, ಇಟ್ಟುಕೊಂಡಿರುತ್ತಾರೆ ಅದನ್ನು ಕರಾಬು ಎಂದು ಅಥವಾ ಗೋಮಾಳ ಎಂದು ನಮೂದಿಸಿರುತ್ತಾರೆ. ಮಾಗಡಿ ತಾಲ್ಲೂಕಿನ ಕೊತ್ತಗೊಂಡನ ಹಳ್ಳಿಯಲ್ಲಿ ತಾತ ಮುತ್ತಾತಂದಿರ ಕಾಲದಿಂದ ಅನುಭವಿಸುತ್ತಿದ್ದ ೬೦-೭೦ ಸಂಸಾರಗಳಿಗೆ ಎಷ್ಟೋ ಭೂಮಿಯನ್ನು ಇಲ್ಲದಂತೆ ಮಾಡಿ ಅದರಂತೆ ಮ್ಯಾಪನ್ನು ತಯಾರುಮಾಡಿದ್ದರು, ಏಕೆಂದರೆ ಈ ಜನ ಸರ್ವೇಯರುಗಳಿಗೆ ದುಡ್ಡು ಕೊಡಲಿಲ್ಲವೋ ಏನೋ ಈ ರೀತಿ ಜನಕ್ಕೆ ತೊಂದರೆಯಾಗುತ್ತಿದೆ. ಮಾನ್ಯ ರೆವಿನ್ಯೂ ಸಚಿವರು ಈಗಲಾದರೂ ಇದನ್ನು ಗಮನಕ್ಕೆ ತೆಗೆದುಕೊಂಡು ಈ ಹಳ್ಳಿಯಲ್ಲಿ ಪುನಃ ಅಳತೆ ಮಾಡಿಸಿ ಇಲ್ಲಿರುವ ೬೦-೭೦ ಸಂಸಾರಗಳು ನೆಮ್ಮದಿಯಾಗಿರುವಂತೆ ಇವರ ಜಮೀನುಗಳನ್ನು ಅಳತೆ ಮಾಡಿಸಿ ಸೌಕರ್ಯ ಒದಗಿಸಬೇಕೆಂದು ಕೇಳುತ್ತೇನೆ. ಸರ್ವೇಯರುಗಳನ್ನು ಕಳುಹಿಸಿಕೊಡುವಾಗ ಅವರಿಗೆ ಒಂದು ಖಚಿತವಾದ ಕಾರ್ಯಕ್ರಮ ಹಾಕಿ ಅದರಂತೆ ಅಳತೆ ಮಾಡಲು ಸೌಕರ್ಯ ಕಲ್ಪಿಸಬೇಕು. ಒಂದು ಕಡೆ ನಾಲ್ಕು ಜನ ಅಣ್ಣ ತಮ್ಮಂದಿರು ಇದ್ದಾರೆ ಒಂದನೆಯ, ಎರಡನೆಯ, ಮೂರನೆಯ ಜಮೀನನ್ನು ಅಳತೆ ಬೇರೆ ಬೇರೆಯಾಗಿಮಾಡಿ ನಾಲ್ಕನೆಯವರಿಗೆ '' ವಜಾವಟ್ಟು '' ಎಂದು ಹೇಳುತ್ತಾರೆ. ಅದರಂತೆ ಅವನ ಜಮೀನನ್ನು ಅಳತೆಮಾಡಿ ಮ್ಯಾಪನ್ನು ತಯಾರುಮಾಡುತ್ತಾರೆ. ನಾಲ್ಕನೆಯವನ ಜಮೀನನ್ನು ಅಳತೆ ಮಾಡುವ ಮೊದಲು ಒಂದು ಎರಡು ಮತ್ತು ಮೂರು ಜನ ಇತರರೂ ಟಿಪ್ಪಣಿ ಕಾಪಿ ತೆಗೆದು ಕೊಳ್ಳಬೇಕು. ಇದರಿಂದ ತೊಂದರೆಯಾಗುತ್ತದೆ. ಇಂತಹ ಸಂದರ್ಭದಲ್ಲಿ ಒಂದೇ ಸಾರಿ ಈ ನಾಲ್ಕು ಜನರಿಗೂ ಬಾಂದು ಕಲ್ಲುಗಳನ್ನು ಹಾಕಿ ಸರಿಯಾಗಿ ಅಳತೆ ಮಾಡುವಂತೆ ಏರ್ಪಾಡು ಮಾಡಬೇಕು. ಎಷ್ಟೋಕಡೆ ಸರಿಯಾದ ಹದ್ದು ಬಸ್ತನ್ನು ಮಾಡಿಲ್ಲ. ಇದನ್ನೆಲ್ಲಾ ಸರಿಯಾಗಿ ನಿಗದಿ ಮಾಡಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಸರಕಾರದವರು ಹರಿಜನ ಗಿರಿಜನರಿಗಾಗಿ ಬಹಳ ಶ್ರಮಿಸುತ್ತಿದ್ದಾರೆ. ಅದಕ್ಕಾಗಿ ಲಕ್ಷಾಂತರ ರೂಪಾಯಿಗಳಷ್ಟು ಹಣವನ್ನು ಈ ಬಡ್ಜೆಟ್ಟಿನಲ್ಲಿ ಕೊಟ್ಟಿದ್ದಾರೆ. ಆದರೆ ಯಾವ ಉದ್ದೇಶಕ್ಕಾಗಿ ಹಣ ಕೊಡುತ್ತಿದ್ದರೋ ಅದು ಹರಿಜನರಿಗೆ, ಗಿರಿಜನರಿಗೆ ಸರಿಯಾಗಿ ತಲಪುತ್ತಿಲ್ಲ. ಈ ಇಲಾಖೆಯಿಂದ ಹಿಂದುಳಿದವರಿಗೋಸ್ಕರ ಹಣ ಖರ್ಚು ಮಾಡಿದ್ದರೂ ಹೆಚ್ಚು ಪ್ರಯೋಜನವಾಗುತ್ತಿಲ್ಲ. ಆದರಿಂದ ಈ ಇಲಾಖೆಯಿಂದ ಕೊಡುವ ಹಣದ ಸ್ವಲ್ಪಭಾಗವನ್ನು ಹಿಂದುಳಿದವರ ಮಕ್ಕಳ ಅನುಕೂಲಕ್ಕಾಗಿ Residential Schools ಎಂದು ಮಾಡಿ Earn while you learn ಎಂಬ ಸ್ಕೀಮನ್ನು ಹಾಕಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಕೊಟ್ಟು ಮುಂದೆ ಕೈಗಾರಿಕೆಯಲ್ಲಿ ಶಿಕ್ಷಣವನ್ನು ಕೊಟ್ಟು ಆ ಕೈಗಾರಿಕೆಗಳಲ್ಲಿಯೇ ಕೆಲಸ ಮಾಡುವಂತೆ ಮಾಡಿ ಅಲ್ಲಿ ತಯಾರಾದ ಪದಾರ್ಥಗಳನ್ನು ಮಾರಿ ಅದನ್ನೇ ಅವರ ಭವಿಷ್ಯದ ಬಂಡವಾಳವಾಗಿ ಈ ಹಿಂದುಳಿದ ಮಕ್ಕಳಿಗೆ ಕೊಟ್ಟರೆ ಅವರು ತಮ್ಮ

(ಶ್ರೀ ಸಿ. ಆರ್. ರಂಗೇಗೌಡ)

ಶಿಕ್ಷಣದ ಸ್ಟ್ಯಾಂಡರ್ಡನ್ನು S.S.L.C. ಯ ವರೆಗೆ ಮುಗಿಸಿಕೊಂಡು ಮುಂದೆ ಅವರಿಗಿಷ್ಟಬಂದ ಕೈಗಾರಿಕೆಯನ್ನು ಮಾಡಲು ಅನುಕೂಲವಾಗುತ್ತದೆ. ಆ ರೀತಿಯಾದ ಸ್ಕೂಲುಗಳನ್ನು ಈ ಸಂದರ್ಭದಲ್ಲಿ ಮಾಡುವುದು ಸರಿಯಾಗಿರುತ್ತದೆ ಎಂದು ಇಲ್ಲಿ ಹೇಳುತ್ತೇನೆ.

ಸಹಕಾರ ತತ್ವದ ಮೇಲೆ ರೈತರು ಸೊಸೈಟಿಯನ್ನು ಮಾಡಿ ಸಾಗುವಳಿ ಮಾಡಿದರೆ ಹೆಚ್ಚಿನ ಆಹಾರ ಉತ್ಪತ್ತಿಯಾಗುತ್ತದೆ ಕೆಲವು ಕಡೆ ರೈತರ ಸಹಕಾರ ಸಂಘಗಳನ್ನು ಹೊಸದಾಗಿ ಮಾಡಿ ಪೈಲಟ್ ಪ್ರಾಜೆಕ್ಟುಗಳನ್ನು ಮಾಡಿದ್ದಾರೆ. ನಮ್ಮ ಮಾಗಡಿ ತಾಲ್ಲೂಕಿನಲ್ಲಿಯೂ ಕೂಡ ಇಂತಹ ಒಂದು ಪೈಲಟ್ ಪ್ರಾಜೆಕ್ಟನ್ನು ಮಾಡಿಕೊಂಡು ಒಕ್ಕಲು ಸಹಕಾರ ಸಂಘವನ್ನು ಮಾಡಿದ್ದಾರೆ. ಆದರೆ ಇದಕ್ಕೆ ಬದಲಾಗಿ, ರಾಮನಗರ ಮತ್ತು ಮಾಗಡಿ ತಾಲ್ಲೂಕಿನಲ್ಲಿರುವ ಬಾವಿ ಕೆರೆಗಳನ್ನು ರಿಪೇರಿ ಮಾಡಿಕೊಟ್ಟಿದ್ದರೆ ಎಷ್ಟೋ ಎಕರೆ ಗಳಷ್ಟು ಭೂಮಿ ಸಾಗುವಳಿಯಾಗುತ್ತಿತ್ತು. ಆದರೆ ಈ ಸಹಕಾರ ಸಂಘಗಳಿಗೆ ಎಷ್ಟೋ ದುಡ್ಡು ಕೊಟ್ಟಿದ್ದರೆ, ಅದಕ್ಕೆ ದಾಖಲೇನೇ ಇಲ್ಲ. ಬಂದಿದಕ್ಕೆ ಜವಾ ಇಲ್ಲ, ಲೆಕ್ಕ ಪತ್ರಗಳೂ ಇಲ್ಲ. ಈ ಹಣವನ್ನು ಪ್ರಗತಿ ದಾಯಕವಾದ ಕೆಲಸಗಳಿಗಾಗಿ ಖರ್ಚು ಮಾಡಿ ಸರ್ವಿಸ್ ಕೋ ಆಪರೇಟಿವ್ ಸೊಸೈಟಿಗಳನ್ನು ಪ್ರತಿಯೊಂದೂರಿನಲ್ಲಿಯೂ ಮಾಡಿದರೆ, ಎಷ್ಟೋ ಜನ ರೈತರಿಗೆ ಅನುಕೂಲ ಮಾಡಿಕೊಟ್ಟ ಹಾಗಾಗುತ್ತದೆ ಎಂದು ಈ ಸಂದರ್ಭದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ವಿದ್ಯಾಭ್ಯಾಸದ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ವಯಸ್ಕರ ಶಿಕ್ಷಣಕ್ಕೋಸ್ಕರ ಪ್ರತಿವರ್ಷವೂ ಐದು ಲಕ್ಷರೂಪಾಯಿಗಳಷ್ಟು ಕೊಡುತ್ತಾರೆ. ಆದರೆ ಎಲ್ಲಿ ಏನೇನು ಕಾರ್ಯಗಳಾಗುತ್ತಿವೆ ಅವೊಂದೂ ಗೊತ್ತಾಗುತ್ತಿಲ್ಲ. ಪ್ರತಿಯೊಬ್ಬ ವಯಸ್ಕರನ್ನೂ ವಿದ್ಯಾವಂತರನ್ನಾಗಿ ಮಾಡಲು ಸರಿಯಾದ ಕ್ರಮ ಹಾಕಿಕೊಂಡು ಮಾಡಿದರೆ ಪ್ರಜೆಗಳಿಗೆ ಅನುಕೂಲ ವಾಗುತ್ತದೆ. ಆದರೇ ಇಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಕೆಲಸಮಾಡುವ ಆಲೋಚನೆಯಿಲ್ಲ. ಇಲ್ಲಿ ರಾಜಕೀಯ ತುಂಬಿ ತುಳುಕಾಡುತ್ತಿದೆ. ಇಲ್ಲಿ ಮಾನವಂತರಾದ ಹೆಣ್ಣುಮಕ್ಕಳು ಇಲಾಖೆಯಲ್ಲಿ ಕೆಲಸ ಮಾಡಲು ಅವಕಾಶವಿಲ್ಲದಂತಾಗಿದೆ. ಎಷ್ಟೋಜನ ವಯಸ್ಕರಾದವರು ಇಲ್ಲಿ ರಾಜಿನಾಮೆ ಯನ್ನು ಕೊಟ್ಟಿರುತ್ತಾರೆ. ಇದನ್ನು ಈಗಲಾದರೂ ಸರಕಾರದವರು ತೀವ್ರವಾಗಿ ಪರಿಶೀಲಿಸಬೇಕು.

ಸರಕಾರದವರು ಯೂನಿವರ್ಸಿಟಿ ಆಕ್ಟಿನಂತೆ ಬೇರೆ ವಯಸ್ಕರ ಶಿಕ್ಷಣ ಆಕ್ಟು ಜಾರಿಗೆ ತರಬೇಕು. ಎಂದು ಮಾಡಿದ್ದಾರೆ. ಈಗ Ford foundation Scheme ಪ್ರಕಾರ ಪ್ರತಿಯೊಂದು ಜಿಲ್ಲೆಯ ಲ್ಲಿಯೂ ಹನ್ನೊಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಒಂದು ವಿದ್ಯಾಪೀಠವನ್ನು ಮಾಡಬೇಕೆಂದಿದೆ. ಆದರೆ ಈಗಿರುವ ವ್ಯವಸ್ಥೆಯಿಂದ ಮಾಡಲು ಆಗುತ್ತಿಲ್ಲ. ಅದಕ್ಕಾಗಿ ಪ್ರತ್ಯೇಕವಾದ ಒಂದು ಆಕ್ಟನ್ನು ಸರಕಾರದವರು ಮಾಡಿ ಕೂಡಲೇ ಜಾರಿಗೆ ತಂದು ಇಂತಹ ವಿದ್ಯಾಪೀಠವನ್ನು ಮಾಡುವ ಆಲೋಚನೆ ಮಾಡುವುದುತ್ತಮ ಎಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಕೊನೆಯದಾಗಿ, ಪಬ್ಲಿಕ್ ಹೆಲ್ತ್‌ನ ವಿಚಾರದಲ್ಲಿ ಮಾನ್ಯ ಸದಸ್ಯರೆಲ್ಲರೂ ಹಳ್ಳಿ ಗಾಡಿನ ಜನ ಗಳಿಗೆ ಆರೋಗ್ಯದ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ಹೇಳಿದರು. ಸರಕಾರದವರು ನಮಗೆ ಅನುಭವವುಳ್ಳ ಡಾಕ್ಟರುಗಳಿಲ್ಲ ಎನ್ನುವ ಪರಿಸ್ಥಿತಿ ಇದೆ. ಎಂದು ಹೇಳಿದರು. ಈ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಇಲ್ಲಿ ಹೇಳಬೇಕಾಗಿದೆ. ಈ ದೇಶದಲ್ಲಿ ಆಯುರ್ವೇದದ ಡಾಕ್ಟರುಗಳು ಬೇಕಾದಷ್ಟು ಜನರಿದ್ದಾರೆ. ಅಲ್ಲದೆ ನಮ್ಮಲ್ಲಿ ಹೋಮಿಯೋಪತಿ ಡಾಕ್ಟರುಗಳೂ ಇದ್ದಾರೆ. ನಮ್ಮ ಸರಕಾರದವರು ಈಚೆಗೆ ಹೋಮಿಯೋಪತಿಯ ಬಿಲ್ಲನ್ನು ಮಾಡಿ ಪಾಸು ಮಾಡಿದ್ದಾರೆ. ಆದರೆ ಇದನ್ನು ಕಾರ್ಯರೂಪಕ್ಕೆ ತಂದಿಲ್ಲ. ಇಂತಹ ಹೋಮಿಯೋಪಥಿಯ ಡಾಕ್ಟರುಗಳು ಹಳ್ಳಿಯ ಕಡೆ ಕಳುಹಿಸಿ ದರೆ ಅಲ್ಲಿಯ ಜನಗಳಿಗೆ ಎಷ್ಟೋ ಅನುಕೂಲವಾಗುತ್ತದೆ. ಅಲೋಯೋಪತಿ ಅಥವ ಇಂಗ್ಲೀಷು ಔಷಧಿಗಳಿಗೆ ಎಷ್ಟು ಬೆಲೆಯಿದೆಯೋ ಹಾಗೆ ಹೋಮಿಯೋಪತಿಯ ಔಷಧಿಗಳಿಗೂ ಬೆಲೆಯಿದೆ. ಮತ್ತು ಈ ಸಿಸ್ಟಂ ಕೂಡ ಇವೊತ್ತು ಫಲಕಾರಿಯಾಗಿದೆ ಎಂದೂ ಹೇಳಿದ್ದಾರೆ. ಹೋಮಿಯೋಪತಿಯ ಪಾಲಿಸಿಯನ್ನು ಇಂಡಿಯಾ ಸರಕಾರದವರು, ಒಪ್ಪಿದ್ದಾರೆ. ಅದರಂತೆ ನಮ್ಮ ಸರಕಾರದವರೂ ಈ ಸಿಸ್ಟಂನ್ನು ಬೆಳೆಸಬೇಕು ಎಂದು ಹೇಳಿರುವುದನ್ನು ಅನೇಕ ಕಡೆ ಪೇಪರುಗಳಲ್ಲಿ ಓದಿದ್ದೇವೆ. ಮೈಸೂರು ಸರ್ಕಾರದವರು ಈ ಸಿಸ್ಟಂನ್ನು ಬೆಳೆಸಿ ಆದಷ್ಟು ಜನ ಡಾಕ್ಟರುಗಳನ್ನು ಹಳ್ಳಿ ಗಾಡಿಗೆ ಕಳುಹಿಸಿದರೆ ಅವರಿಗೆ ಉದ್ಯೋಗವೂ ಸಿಕ್ಕಿದಂತಾಗುತ್ತದೆ ಮತ್ತು ಹಳ್ಳಿಗಾಡಿನ ಜನಕ್ಕೂ ಸೌಕರ್ಯವಾಗುತ್ತದೆ.

ಕೊನೆಯದಾಗಿ ಪಿ. ಡಬ್ಲ್ಯು. ಡಿ. ಮೈನರು ಇರಿಗೇಷನ್ನಿನ ಬಗ್ಗೆ ಒಂದೆರಡು ಮಾತುಗಳನ್ನು ಆಡಬೇಕಾಗಿದೆ. ಮುಖ್ಯವಾಗಿ ಮಾಗಡಿ ತಾಲ್ಲೂಕಿನಲ್ಲಿ ಎರಡು ನದಿಗಳಿದ್ದು ಒಂದುಕಡೆ ಕಣ್ವ ಪ್ರಾಜೆಕ್ಟು ಇನ್ನೊಂದು ಕಡೆ ಅರ್ಕಾವತಿ ಪ್ರಾಜೆಕ್ಟು. ಅರ್ಕಾವತಿ ಪ್ರಾಜೆಕ್ಟಿನಿಂದ ರಾಮನಗರ ಕೆಲವು

ಊರುಗಳಿಗೆ ಅನುಕೂಲವಾಗಿದೆ. ನೀರಾವರಿ ಇಲ್ಲದೆ ಇಲ್ಲಿರುವ ತರೀ ಜಮೀನುಗಳನ್ನು ಮಾಡಿಕೊಳ್ಳುವುದು ಕಷ್ಟವಾಗಿದೆ ಅರ್ಕಾವತಿ ಹೊಳೆಗೆ ಸುಗ್ಗನಹಳ್ಳಿ ಬಳಿ ಒಂದು ಕಟ್ಟೆ ಕಟ್ಟಬೇಕೆಂದು, ಈ ಸಂದರ್ಭದಲ್ಲಿ ಸಣ್ಣ ಪುಟ್ಟ ಹಳ್ಳಿಗಳಿಗೆ ಪಿಕ್ ಅಪ್ ಗಳನ್ನು ಮಾಡಿ Seapage water ನ್ನು ಉಪಯೋಗಿಸಿಕೊಳ್ಳೋಣ, ಎಂದು ಮಾನ್ಯ ಸದಸ್ಯರಾದ ರಾಮನಗರದ ಮಾದೇಗೌಡರು, ಒಂದು ಪ್ರಶ್ನೆ ಕೂಡ ಹಾಕಿದ್ದರು. ಆಗ ನಾನು ಈ ಭಾಗದ ಜನತೆಗೆ ತೊಂದರೆಯಾಗದಂತೆ ಅವರು ಕಟ್ಟೆಗಳನ್ನಾಗಲೀ ಪಿಕ್‌ಅಪ್ ಗಳನ್ನಾಗಲೀ ಮಾಡಬೇಕೆಂದು ಹೇಳಿದ್ದೆ, ಅದರಂತೆ ಈಗಲೂ ಮಾಡುವುದುತ್ತಮ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇದುವರೆಗೆ ಕಣ್ವ ಜಲಾಶಯದಿಂದ ನಮ್ಮ ಭಾಗಕ್ಕೆ ಹೆಚ್ಚಿನ ಉಪಯೋಗವಾಗಿಲ್ಲ. ಅದರಿಂದ ಮಾಗಡಿ ತಾಲ್ಲೂಕಿನಲ್ಲಿ ಸಣ್ಣ ಪುಟ್ಟ ಪಿಕ್ ಅಪ್‌ಗಳನ್ನು ಮಾಡಿ ಇಲ್ಲಿ ಜನರಿಗೆ ವ್ಯವಸಾಯ ಮಾಡಲು ಅನುಕೂಲವಾಗುವಂತೆ ಮಾಡಬೇಕೆಂದು ಪ್ರಾರ್ಥಿಸಿಕೊಂಡು ನನ್ನ ಈ ನಾಲ್ಕು ಮಾತುಗಳನ್ನು ಮುಕ್ತಾಯಮಾಡುತ್ತೇನೆ.

SRI PRABHU RAO (Santhapur):—[SPOKE IN HINDUSTANI]

5-30 P.M.

(MR. CHAIRMAN, SRI M. GHOUSE MOHIUDDIN, in the Chair)

ಶ್ರೀ ಎಸ್. ನಂಜೇಗೌಡ (ಕೃಷ್ಣರಾಜಪೇಟೆ).—ಮಾನ್ಯಸಭಾಪತಿಗಳೆ, ಮಾನ್ಯಮುಖ್ಯಮಂತ್ರಿಯವರಾಗಿದ್ದ ಶ್ರೀಮಾನ್ ಕಂಠಿಯವರು 1963–64ನೇ ಸಾಲಿನ ಬಜೆಟ್ಟನ್ನು ಕನ್ನಡದಲ್ಲಿ ಒದಗಿಸಿಕೊಡುತ್ತೇನೆ ಎಂದು ಇದೇ ಸಭೆಯಲ್ಲಿ ಆಶ್ವಾಸನೆ ಕೊಟ್ಟಿದ್ದರು. ಆದರೆ ಈಸಾರಿಯೂ ಇಂಗ್ಲೀಷಿನಲ್ಲಿ ಬಜೆಟ್ ಪುಸ್ತಕಗಳನ್ನು ಒದಗಿಸಿಕೊಟ್ಟಿದ್ದಾರೆ. ಮಾನ್ಯ ಸದಸ್ಯರಲ್ಲಿ ಕನ್ನಡ ಬಲ್ಲವರು ಬಹಳ ಜಾಸ್ತಿ ಜನರಿರುತ್ತಾರೆ. ಆದ್ದರಿಂದ ಬಜೆಟ್ ಮೇಲೆ ಭಾಷಣ ಮಾಡುವುದಕ್ಕೆ ಬಹಳಕಷ್ಟವಾಗಿದೆ. ಮುಂದಿನ ವರ್ಷದಲ್ಲಾದರೂ ಬಜೆಟ್ಟನ್ನು ಕನ್ನಡದಲ್ಲಿ ಒದಗಿಸಿಕೊಡಬೇಕು.

ಅರಣ್ಯಇಲಾಖೆಗೆ ದುಡ್ಡನ್ನು ಒದಗಿಸಿಕೊಟ್ಟಿದ್ದಾರೆ, ಇದಕ್ಕೆ ಎಷ್ಟು ಒದಗಿಸಿದರೂ ಸಂತೋಷ. ಅರಣ್ಯ ಜಾಸ್ತಿ ಬೆಳೆದಿದ್ದೇವೆ ಎಂದು ಅನ್ನುವುದಕ್ಕಿಂತ ಮುಂಚೆ, ಇರುವ ಅರಣ್ಯ ಸಂಪತ್ತು ಉಳಿದಿದೆಯೇ ಎಂದು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಅರಣ್ಯ ಹಾಳುಮಾಡುವುದರಲ್ಲಿ ಎಷ್ಟೋಜನ ನಿರತರಾಗಿದ್ದಾರೆ. ಕಳ್ಳ ಪರ್ಮಿಟ್‌ತಂದು ಎಷ್ಟೋಲಾರಿ ಸೌದೆಯನ್ನು ಕೆಲವರು ಸಾಗಿಸುತ್ತಿದ್ದಾರೆ, ಮಾನ್ಯಮಂತ್ರಿಯವರು ಈಕಡೆ ಗಮನಕೊಟ್ಟು, ಇದನ್ನು ತಡೆಗಟ್ಟುವುದಕ್ಕೆ ಸೂಕ್ತಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಕಾಡು ಕಾಯುವುದಕ್ಕೆ ಒಬ್ಬವಾಚ್‌ಮನ್ ಇರುತ್ತಾನೆ, ಅವನಿಗೆ 5-10 ರೂಪಾಯಿಕೊಟ್ಟರೆ, ಅವನು ಪರ್ಮಿಟ್ ಚೆಕ್‌ಮಾಡದೆ ಹಾಗೇ ಕಳುಹಿಸುತ್ತಾನೆ, ಪುನಃ ಅದೇಲಾರಿ ಬಂದು ಅದೇಪರ್ಮಿಟ್ ಉಪಯೋಗಿಸಿಕೊಂಡು ಸೌದೆತೆಗೆದುಕೊಂಡು ಹೋಗುತ್ತಾರೆ ಹೀಗಾಗಿ ಕಾಡು ಬಹಳ ನಾಶವಾಗುತ್ತಿದೆ. ಮುತುವರ್ಜಿ ವಹಿಸಿ, ಮುಂಜಾಗ್ರತೆಯಿಂದ ಸೂಕ್ತಕ್ರಮತೆಗೆದುಕೊಂಡು ಸರ್ಕಾರದವರು ಕಳ್ಳಸಾಗಾಣಿಕೆ ನಿಲ್ಲಿಸುತ್ತಾರೆಂದು ನಂಬಿದ್ದೇನೆ.

ಈಗ ಆಂಟಿಕರಪ್‌ಷನ್ ಡಿಪಾರ್ಟ್‌ಮೆಂಟ್ ತಾವು ಇಟ್ಟಿದ್ದೀರಿ. ಆಂಟಿಕರಪ್‌ಷನ್ ಇಲಾಖೆಯವರು ದುಡ್ಡುಕೊಟ್ಟು, ಅಲ್ಲಿಹೋಗಿ. ಪೌಡರ್‌ಹಾಕಿ, ನೌಕರರನ್ನು ಹಿಡಿಯುವುದಲ್ಲ, ಅದು ನ್ಯಾಯವಾದ ಪದ್ಧತಿಯೂಅಲ್ಲ ಅನ್ನುವುದು ನನ್ನಅಭಿಪ್ರಾಯ. ಲಂಚತೆಕೆದುಕೊಳ್ಳುವವರನ್ನು ಹಿಡಿಯುವುದರ ಜೊತೆಗೆ, ಮೂಲಸರಿಮಾಡಬೇಕು. ಅರ್ಜಿಗಳು ಏಕೆ ಪೆಂಡಿಂಗಿವೆ, ಅನಾವಶ್ಯಕವಾದ ಕ್ವೇರಿಗಳನ್ನು ಅಧಿಕಾರಿಗಳು ಯಾವಉದ್ದೇಶದಿಂದಹಾಕಿ ಕೆಲಸತಡಮಾಡುತ್ತಿದ್ದಾರೆ ಎಂಬುದನ್ನು ವಿಚಾರಿಸಿ ಹಿಡಿಯಬೇಕು. ಅದುಲಂಚದ ಮೂಲ. ಲಂಚನಿರೋಧ ಶಾಖೆಯವರು ಲಂಚಕೋರರನ್ನು ಲಂಚತೆಗೆದುಕೊಳ್ಳುವಾಗ ಹಿಡಿಯುವಬದಲು, ಪ್ರತಿಆಫೀಸಿಗೂಹೋಗಿ ಚೆಕ್‌ಮಾಡಬೇಕು. ಕಾಗದ ಪೆಂಡಿಗ್ ಏಕಿದೆ, ಕ್ವೇರಿಹಾಕಿದ್ದರೆ ಹಾಕಿರುವುದು ನ್ಯಾಯವೇ, ಕ್ವೆರಿ ದುರುದ್ದೇಶದಿಂದ ಕೂಡಿದೆಯೇ ಎಂದು ವಿಮರ್ಶೆಮಾಡಬೇಕು, ದುರುದ್ದೇಶವಿದ್ದರೆ ಅಂಥ ಅನೀತಿವಂತರ ಮೇಲೆ ಕೇಸು ಹಾಕಬೇಕೆಂದು ನಾನು ಸರ್ಕಾರಕ್ಕೆ ಸಲಹೆಮಾಡುತ್ತೇನೆ.

ಈ ದರಖಾಸ್ತು ವಿಲೇವಾರಿಮಾಡೋಣ. ಬಡವರಿಗೆ ಜಮೀನು ಹಂಚುವುದರಿಂದ ದೇಶ ಉನ್ನತಿಯಾಗುತ್ತದೆಂದು ಹೇಳುತ್ತಾರೆ. ಆದರೆ ಬಡವರಿಗೆ ಜಮೀನು ಸಿಗುತ್ತದೆಯೇ ? ಪ್ರಭಾವಶಾಲಿಗಳಿಗೆ 4, 10, 20 ಎಕರೆ ಸಿಗುತ್ತದೆ. ಪ್ರಭಾವವಿಲ್ಲದೆ, ಯಾರಿಗೆ ಹೇಳುವವರು ಕೇಳುವವರು ಇಲ್ಲವೋ, ಯಾರು ಜಮೀನು ಇಲ್ಲದೇ ಇರುವರೋ, ಅವರಿಗೆ ಸರಿಯಾಗಿ ಜಮೀನು ಸಿಗುತ್ತಾಇಲ್ಲ. ಅವರಿಗೆ ಜಮೀನುಕೊಡುವಾಗಲೂ ಒಂದುಹಗೆಇಟ್ಟುಕೊಂಡು ಅವರಮೇಲೆ ಸೇಡನ್ನು ತೀರಿಸಿಕೊಳ್ಳು

(ಶ್ರೀ ಎಚ್. ನಂಜೇಗೌಡ)

ವುದಕ್ಕೆ ದರಖಾಸ್ತು ವಿಲೇವಾರಿಯನ್ನು ಉಪಯೋಗಿಸಿಕೊಳ್ಳುತ್ತಾರೆ. ಒಂದು ನಿದರ್ಶನಕೊಡುತ್ತೇನೆ. ಕೃಷ್ಣರಾಜಪೇಟೆಯ ಅಕ್ಕಿಹೆಬ್ಬಾಳು ಹೋಬಳಿಯಲ್ಲಿ 35 ಎಕರೆ ಜಮೀನನ್ನು 85 ಜನರಿಗೆ ಹಂಚಿದ್ದಾರೆ. 3 ಗುಂಟೆಗೆ ಒಂದುಸಾಗುವಳಿಚೀಟಿ, 4 ಗುಂಟೆಗೆ ಒಂದುಸಾಗುಳಿ ಚೀಟಿ, 8 ಗುಂಟೆಗೆ ಒಂದು ಸಾಗುವಳಿಚೀಟಿ-ಹೀಗೆ ಕೊಟ್ಟರೆ ನ್ಯಾಯವೇಸ್ವಾಮಿ ? ದೇಶಕ್ಕೆ ಒಳ್ಳೆಯದಾಗುತ್ತದೆಯೇ, ಜನಕ್ಕೆ ಉಪಕಾರವಾಗುತ್ತದೆಯೇ ? ಬಡವರು ಉದ್ಧಾರವಾಗುತ್ತಾರೆಯೇ ? 3-4 ಗುಂಟೆ ಜಮೀನು ಕೊಟ್ಟಿದ್ದಾರೆ. ಪಕ್ಕದಲ್ಲಿ ಒತ್ತುವರಿಮಾಡುತ್ತಾನೆ, ಅವನು ಬಡುವಹಾಗಿಲ್ಲ. ಬಡವ, ಇವನುಹೋಗಿ ಜಮೀನು ಉಳುವುದಕ್ಕೆ ಹೋದರೆ ಏಟುಬೀಳುತ್ತದೆ, ಕ್ರಿಮಿನಲ್ ಆಗುತ್ತದೆ, ವತ್ತುವರಿ ಮಾಡಿರುವವನು ಜಬರ್‌ದಸ್ತಿ ಮನುಷ್ಯನಾಗಿರುತ್ತಾನೆ. ಕೋರ್ಟಿಗೆ ಹೋದರೆ ಬಡವಹಾಳಾಗಿ ಹೋಗುತ್ತಾನೆ. ಹೀಗೆಮಾಡಿ ಬಡವರನ್ನು ಉದ್ಧಾರ ಮಾಡುತ್ತೀರಾ ? ಬಡವಕೂಡ ಕೆಳಗಡೆ ಬರುವಸ್ಥಿತಿಗೆ ಬಂದಿದೆ. ಇಷ್ಟಕ್ಕು ಕಡಿಮೆ ಕೊಡಬಾರದೆಂದು ದರಖಾಸ್ತು ವಿಲೇವಾರಿಬಗ್ಗೆ ಕಠಿಣವಾದ ಆಜ್ಞೆಯನ್ನು ಜಾರಿಗೆ ತರುತ್ತೀರೆಂದು ನಂಬಿದ್ದೇನೆ.

ಡೆವಲೆಪ್‌ಮೆಂಟ್ ವರ್ಕ್ಸ್ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ. Block Development work ದೇಶಕ್ಕೆ ಆಗಬೇಕಾಗಿದೆ, ನಾನು ಒಪ್ಪಿಕೊಳ್ಳುತ್ತೇನೆ. ಅದರೆ ಸರಿಯಾದ ಕಲಸಮಾಡಬೇಕು. ಈ N.E.S. ಎಂದರೆ "ನಷ್ಟ ಎಷ್ಟಾದರೂಸರಿ" ಎಂಬ ಒಂದು ರೀತಿಯಿದೆ, ಹಾಗೆ ಆಗಬಾರದು. ಅದರ ಉದ್ದೇಶವೇನಿದೆ ಅದರ ತತ್ವವೇನಿದೆ ಅದನ್ನುಸರ್ಕಾರ ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನಮಾಡಬೇಕು. ಕೆಲವು ಐಟಮ್ಮುಗಳಿಗೆ ದುಡ್ಡು ಕೊಡುತ್ತೀರ, ಬಜೆಟ್ ತಯಾರುಮಾಡುತ್ತೀರ, ಆದರೆ ಕೊಟ್ಟದುಡ್ಡನ್ನು ಹ ಚಿಕೊಳ್ಳುತ್ತಾರೆ. 10 ಸಾವಿರ ರೂಪಾಯಿವರೆಗೆ ಬಜೆಟ್ ಹೋದರೆ, 30 ಸಾವಿರ ರೂಪಾಯಿ ಕೆಲಸಹುಟ್ಟಿಸುತ್ತಾರೆ. 10 ಸಾವಿರ ರೂಪಾಯಿ ರಿಟರ್ನ್ ಇರುವುದಿಲ್ಲ, ದೇಶಕ್ಕೆ ಬಹಳ ನಷ್ಟವಾಗುತ್ತದೆ ರಿಟರ್ನ್ ಇಲ್ಲದೆ. ನಮ್ಮ ತಾಲ್ಲೂಕಿನಲ್ಲಿ 14 pick-up ಅರ್ಧ ಕೆಲಸ ಆಗಿಉಳಿದಿವೆ ಮೂರು ಲಕ್ಷ ರೂಪಾಯಿಗೆ ಕೊಟ್ಟಿದ್ದಾರೆ. ಅವು ಇನ್ನು incomplete ಆಗಿವೆ. ಬಾವಿಕೆಲಸವನ್ನು 1941ನೇ ಇಸವಿಲಾಗಾಯಿತು 1961ನೇ ಇಸವಿವರೆಗೆ ಇಟ್ಟುಕೊಂಡು, ಮುಗಿಸದೆ ಇದ್ದಾರೆ. 1961ನೇ ಇಸವಿಗೆ 97ಬಾವಿಗಳು in complete ಇವೆ. 330 ಗ್ರಾಮಗಳಿರುವ ಒಂದು ತಾಲ್ಲೂಕಿನಲ್ಲಿ 97 in complete ಬಾವಿಗಳಿದ್ದರೆ, ಎಷ್ಟರಮಟ್ಟಿಗೆ complete ಆಯಿತು ?

ಇದು ನೀತಿಯೋ? ದುಡ್ಡು ಎಷ್ಟಿದೆ, ಎಷ್ಟು ಬಾವಿಗಳನ್ನು ತೆಗೆದುಕೊಳ್ಳಬೇಕು, ಎಷ್ಟು ಮುಗಿಸಬಹುದು ಎಂಬ ಆಧಾರವನ್ನಿಟ್ಟುಕೊಂಡು ಕುಡಿಯುವ ನೀರಿನ ಬಾವಿಗಳನ್ನು ಕೊಡಬೇಕೇ ಹೊರತು ಇನ್‌ಫ್ಲುಯನ್ಸ್ ಮಾಡಿದವರಿಗೆ ಬಾವಿ ಕೊಟ್ಟರೆ ಸರಿಯೋ ? ಆ ತರಹ ದುಡ್ಡು ವ್ಯಯವಾಗಬಾರದು, ನಿಜವಾಗಿಯೂ ಜನತೆಗೆ ಫಲ ಸಿಕ್ಕಬೇಕು. ಅಂಥಾ ವ್ಯವಸ್ಥೆ ಮಾಡಬೇಕು. ಹಾಗಲ್ಲದೆ ಆಡಳಿತದಲ್ಲಿ ತಮ್ಮ ಕರ್ತವ್ಯ ಲೋಪ ಮಾಡುವಂಥವರ ಮೇಲೆ ಸೂಕ್ತ ಕ್ರಮತೆಗೆದುಕೊಂಡು ಶಿಕ್ಷೆ ವಿಧಿಸುವುದಕ್ಕೂ ವ್ಯವಸ್ಥೆ ಮಾಡಬೇಕು. 97 ಬಾವಿಗಳು 1941ನೇ ಇಸವಿಯ ಲಾಗಾಯ್ತು ಹಾಗೆಯೇ ಪೂರ್ತಿಯಾಗದೇ ನಿಂತಿವೆ. ಮಂತ್ರಿಗಳಿಗೆ ಹೇಳಿದೆ; ಪ್ರಶ್ನೆಕೂಡ ಕೇಳಿದ್ದೆ ಇದುವರೆಗೂ ಉತ್ತರವಿಲ್ಲ. ಹೀಗೆ ಆಗಬಾರದು. ಸರ್ಕಾರದ ಉದ್ದೇಶ ನಿಜವಾಗಿಯೂ ಜನತೆಗೆ ಸಲ್ಲಬೇಕು. ಅದು ಸಂಪತ್ತಾಗಿ ಉಳಿಯಬೇಕು. ಅಂಥಾ ವ್ಯವಸ್ಥೆ ಮಾಡುತ್ತೀರಿ ಎಂದು ನಂಬಿದ್ದೇನೆ.

ಇನ್ನು ಸೋಷಿಯಲ್ ವೆಲ್‌ಫೇರ್ ಇದರಲ್ಲಿ ಏನಾಗಿದೆ ಎಂದರೆ ನೀವು ಕೊಡುವ ದುಡ್ಡು 3,000 ರೂಪಾಯಿ ಆದರೆ ಅದನ್ನು ಹಂಚುವ ಇಲಾಖೆಗೆ ನಾಲ್ಕು ಸಾವಿರ. ಇವರಿಗೆ ಏನಾದರೂ ಕೆಲಸ ಕಾರ್ಯ ಇದೆಯೋ ? ಹೀಗೆ ದುಡ್ಡು ಖರ್ಚು ಮಾಡುವುದಕ್ಕೆ ಬದಲಾಗಿ ತಾಲ್ಲೂಕು ಬೋರ್ಡು ಇದೆ ಅವರಿಗೇ ಈ ಹಣವನ್ನೂ ಕೊಟ್ಟು ಅವರ ಮುಖಾಂತರ ಬಡವರಿಗೆ ಹಂಚಿಕೆ ಮಾಡಿದರೆ ಅದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ. ಹರಿಜನರಿಗೆ ಹೆಚ್ಚು ಉಪಯೋಗವಾಗುತ್ತದೆ. ಆ ತರಹ ವ್ಯವಸ್ಥೆ ಮಾಡುತ್ತೀರಿ ಎಂದು ನಂಬಿದ್ದೇನೆ.

ಕಟ್ಟಡಗಳ ವಿಷಯ ಹೇಳುತ್ತೇನೆ. ನನ್ನಲ್ಲಿ ಒಂದು ಪಟ್ಟಿ ಇದೆ ನಮ್ಮ ತಾಲ್ಲೂಕಿನಲ್ಲಿ 1952ನೇ ಇಸವಿಯಲ್ಲಿ ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ 44 ಮನೆಗಳು ಅಪೂರ್ಣವಾಗಿವೆ. ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ 77 ಮನೆಗಳು ಅಪೂರ್ಣವಾಗಿವೆ. 600 ಚಿಲ್ಲರೆ ಮನೆಗಳಲ್ಲಿ ಪೂರ್ತಿ 200 ಮನೆಗಳು ಆಗಿಲ್ಲ. 400 ಮನೆಗಳಿಗೆ ಕೊಟ್ಟ ದುಡ್ಡು ಏನಾಯಿತು ? ಯಾರು ಜವಾಬ್ದಾರರು ? ಆ ದುಡ್ಡು ಯಾರಿಗೆಹೋಯಿತು ಎಂಬುದನ್ನು ಕೇಳುವವರೇ ಇಲ್ಲವೇ ? ಹೀಗಾದರೆ ಜನಕ್ಕೆ ಕೊಟ್ಟದುಡ್ಡು ನಿಜವಾಗಿಯೂ ಅವರಿಗೆ ಸೇರುತ್ತದೆಯೋ ? ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆಯೋ? ಸೋಷಿಯಲ್ ವೆಲ್‌ಫೇರ್ ಆಫೀಸರು ಇದ್ದೂಕೂಡ ಏನು ಪ್ರಯೋಜನ ? ಆ ಹಣ ಯಾರ ಪಾಲಾಯಿತು?

ಲೆಕ್ಕಾಚಾರ ಏನಾಯಿತು ? ಅಷ್ಟಾದರೂ ನೋಡಬೇಡವೆ ? ಸ್ಪಷ್ಟವಾಗಿ ಇದಕ್ಕೆ ಸಂಬಂಧಪಟ್ಟವರು ಗಮನ ಕೊಡದೇ 30 ದಿವಸ ಎಣಿಸಿ ಸಂಬಳ ತೆಗೆದುಕೊಂಡು ಹೋದರೆ ಜನರ ಗತಿ ಏನು ? ಹೀಗೆ ಅನನ್ಯಾಯವಾದರೆ ನಿಮ್ಮ ಯೋಜನೆಗಳು ಯಾವ ರೀತಿ ಫಲಕಾರಿಯಾಗುತ್ತವೆ ? ನೀವು ಕೊಡುವ ದುಡ್ಡು ನ್ಯಾಯವಾಗಿ ಖರ್ಚಾಗಬೇಕು. ಆಗ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಬಡಬೋರೆಗೌಡನ ದುಡ್ಡು ಅವನಿಗೆ ಕೊಟ್ಟ ಹಾಗಾಗುತ್ತದೆ. ಆಡಳಿತ ಬಿಗಿಪಡಿಸಬೇಕು ಅಧಿಕಾರಿಗಳಿಂದ ವರದಿ ತರಿಸಿಕೊಳ್ಳಬೇಕು, ವರದಿ ಕಳುಹಿಸದಿದ್ದರೆ ಅವರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳಬೇಕು.

ಕೋ-ಆಪರೇಟೀವ್ ಸೊಸೈಟಿ ಮೇಲೆ ಸ್ವಲ್ಪ ಹೇಳುತ್ತೇನೆ. ಹೋದ ವರ್ಷ ಮಾತನಾಡಿದ್ದು ಆಯಿತು. ಕೋ-ಆಪರೇಟೀವ್ ಸೊಸೈಟಿಯವರು ಕೊಟ್ಟ ಸಾಲ ವಸೂಲು ಮಾಡುವುದಕ್ಕೆ ಏನೂ ಅಧಿಕಾರ ಇಲ್ಲ. ಬಹಳ ನಿರ್ಬಂಧಗಳಿವೆ ಎಂದು ಕೇಳುತ್ತೇನೆ. ಹೆಚ್ಚು ಹೇಳುವುದರಿಂದ ಪ್ರಯೋಜನವಿಲ್ಲ. ಯಾವನು ಸಾಲ ತೆಗೆದುಕೊಳ್ಳುತ್ತಾನೆಯೋ ಆ ಸಾಲದ ಹಣ ವಾಪಸು ಬರುವಂಥ ಬಲವತ್ತರವಾದ ಕಾನೂನು ಜಾರಿಗೆತಂದು ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದರೆ ಕೋ-ಆಪರೇಟಿವ್ ಸೊಸೈಟಿ ಉಳಿಯುತ್ತದೆಯೇ ಹೊರತು ಹೀಗೆ (loose) ನಡಿಬಿಟ್ಟರೆ, ಸಹಕಾರ ಸಂಘ ಹೇಗೆ ಬೆಳೆಯುತ್ತದೆ ? ಇದನ್ನೆಲ್ಲಾ ವಿಮರ್ಶೆ ಮಾಡಬೇಕು. ಸೋಮನಹಳ್ಳಿ ಸೊಸೈಟಿಯ ವಿಷಯ ಹೋದ ವರ್ಷ ಹೇಳಿದ್ದೆ, ಮಿನಿಸ್ಟರಿಗೂ ಸಹ ತಿಳಿಸಿದ್ದೆ. ಅಲ್ಲಿ ಲೆಕ್ಕಗಳೇ ಇಲ್ಲ. ಅದು ದೊಡ್ಡ ಪ್ರಮಾಣದ ಸೊಸೈಟಿ. ಲೀಗಲ್ ಕಾಂಪ್ಲಿಕೇಷನ್ ಇದೆ ನಾವು ಕೈ ಹಾಕುವ ಹಾಗಿಲ್ಲ ಎಂದು ನಿಮ್ಮ ಇಲಾಖೆಯವರು ಹೇಳುತ್ತಾರೆ. 52,000 ರೂಪಾಯಿ ಸಾಲ ಬಾಕಿ ಬರಬೇಕಾದದ್ದು ಸಾಲ ತೆಗೆದುಕೊಂಡು ಎರಡು ವರ್ಷವಾಗಿದೆ ಇನ್ನು ಕೊಟ್ಟಿಲ್ಲ. ಹಾಯಾಗಿ ಕುಳಿತುಕೊಂಡಿದ್ದಾರೆ. ನಿರ್ಬಂಧ ಹಾಕಿ ವಸೂಲು ಮಾಡುವುದಕ್ಕೆ ಅವಕಾಶವಿಲ್ಲದೇ ಇದ್ದರೆ ಇನ್ನೂ ಇತರ ಹತ್ತು ಸೊಸೈಟಿಗಳವರು ಆ ಸೊಸೈಟಿಯವರು ತೆಗೆದುಕೊಂಡು 2 ವರ್ಷವಾದರೂ ಕೊಟ್ಟಿಲ್ಲ, ಏನು ಮಾಡಿದ್ದಾರೆ ? ನನ್ನದೂ ಹಾಗೆಯೇ ಅಂತ ಅವನೂ ಇದೇ ಚಾಳಿ ಕಲಿಯುತ್ತಾನೆ. ಹೀಗೆ ಆಗಬಾರದು. ಸಹಕಾರ ಸಂಘಗಳು ಬಹಳ ಮುಖ್ಯವಾದ ಸಂಸ್ಥೆಗಳು. ಇದೇ ರೀತಿ ತಾವು ಸೊಸೈಟಿಗಳ ಮೂಲಕ ಹತ್ತು ತರಹ ಸಾಲ ಕೊಡುತ್ತೀರಿ. ಲ್ಯಾಂಡ್ ಮಾರ್ಟ್‌ಗೇಜ್ ಸೊಸೈಟಿ ಮೂಲಕ ಸಾಲ ಕೊಡುತ್ತೀರಿ. ಷಾರ್ಟ್ ಟರ್ಮ್ ಲೋನು, ಲಾಂಗ್ ಟರ್ಮ್ ಲೋನು ಹೀಗೆ 4-5 ತರಹ ಸಾಲವನ್ನೂ, ಒಬ್ಬ ಮನುಷ್ಯ ನಾಲ್ಕಾರು ಕಡೆ ಪಡೆಯುವುದರಿಂದ ಹೀಗೆಲ್ಲಾ ಆಗುತ್ತದೆ. ಹೀಗೆ ಆಗಬಾರದು—ಇದನ್ನೆಲ್ಲಾ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಈಗ ಆ ಮೇಲುಕೋಟೆಯಲ್ಲಿ ಒಂದು ಸಂಸ್ಕೃತ ಕಾಲೇಜ್ ಎಂತ ಇದೆ. ಅದರ ಆಡಳಿತ ಹೀಗೆ ನಡೆಯುತ್ತಿದೆ, ಅದರಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಓದುತ್ತಿದ್ದಾರೆ, ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಸರ್ಕಾರದವರು ಸ್ವಲ್ಪ ಗಮನವಿಟ್ಟು ನೋಡಬೇಕಾಗಿದೆ. ಈ ವಿದ್ಯಾ ಶಾಲೆಗೆ ಸಾರ್ವಜನಿಕರ ದುಡ್ಡನ್ನು ಕೊಡಲಾಗುತ್ತಿದೆ. ಅಲ್ಲಿ ಕೇವಲ ಒಂದು ವಂಶದವರಿಗೇ ಆ ಸಂಸ್ಕೃತ ಪಾಠ ಶಾಲೆ ಮನಾಪಲಿಯಾಗಿದೆ. ಇದು ಸರಿಯೇ ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ಈ ದಿವಸ ಯಾರು ಅಲ್ಲಿ ಪ್ರಿನ್ಸಿಪಾಲರಾಗಿದ್ದಾರೋ ನಾಳೆ ಆ ಸ್ಥಾನಕ್ಕೆ ಅವರ ಮಗನೇ ಬರಬೇಕಂತೆ ! ಹೀಗೆ ಇದು ಒಂದೇ ಕ್ಲಾಸಿನವರಿಗೆ ಜಹಗೀರಾಗಿದೆ.

6-00 P.M.

ಶ್ರೀ ಬಿ. ಡಿ. ಜತ್ತಿ.—ಅಲ್ಲಿ ಬೇರೆ ಯಾರೂ ವಿದ್ಯಾರ್ಥಿಗಳು ಓದಲು ಬರಬಾರದು ಎಂತ ಅವರು ಹೇಳುತ್ತಿದ್ದಾರೋ ?

ಶ್ರೀ ಎಚ್. ನಂಜೇಗೌಡ.—ಈ ದಿವಸ ಆ ಕಾಲೇಜಿನಲ್ಲಿ ಪಾಠ ಹೇಳಲು ಯಾವ ವಿದ್ವತ್ ಪಾಸಾಗಿರಬೇಕೋ ಅಂಥಾ ವಿದ್ವತ್ ಪರೀಕ್ಷೆಯಲ್ಲಿ ಪಾಸಾಗದವರನ್ನು ಅಪಾಯಿಂಟ್ ಮಾಡಿಕೊಂಡಿದ್ದಾರೆ. ಹಾಗಿರುವಾಗ ಅವರು ಇನ್ನು ಎಷ್ಟರ ಮಟ್ಟಿಗೆ ಅಲ್ಲಿ ಪಾಠ ಹೇಳಬಹುದು ? ಅಲ್ಲೀಗ 40 ಜನ ಹೆಣ್ಣು ಮಕ್ಕಳಿದ್ದಾರೆಂತ ಕೇಳುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ವಿದ್ಯಾಮಂತ್ರಿಗಳು ಕ್ವಾಲಿಫಿಕೇಷನ್ ಇಲ್ಲದವರನ್ನು ಅಲ್ಲಿ ಲೆಕ್ಚರರ್ ಆಗಿ ಹಾಕಿದ್ದಾರೆಂದು ಹೇಳುವುದಾದರೆ, ಅದು ಯಾರು ಎಂಬುದನ್ನು ತಿಳಿಸಿದರೆ ನಾನು ವಿಚಾರ ಮಾಡುತ್ತೇನೆ.

ಶ್ರೀ ಎಚ್. ನಂಜೇಗೌಡ.—ಶ್ರೀನಿವಾಸಯ್ಯಂಗಾರ್, ಕೃಷ್ಣಮಾಚಾರ್ ಮತ್ತು ಕಡಂಬಿ ನಾರಾಯಣ ಅಯ್ಯಂಗಾರ್ ಇವರು ಯಾವ ಕ್ಲಾಸಿಗೆ ಈಗ ಪಾಠ ಹೇಳುತ್ತಿದ್ದಾರೋ ಆ ವಿದ್ವತ್ ಪರೀಕ್ಷೆಯಲ್ಲಿ ಅವರು ಪಾಸಾಗಿಲ್ಲ.

Mr. CHAIRMAN.—Your time is over. Now Sri Gadag will Commence his speech.

†ಶ್ರೀ ಕೆ. ಪಿ. ಗದಗ್.—(ಗದಗ್) ಸಭಾಪತಿಗಳೇ ಹತ್ತೊಂಭತ್ತು ನೂರ ಅರವತ್ತು ಮೂರು-ಅರವತ್ತನಾಲ್ಕನೆಯ ಸಾಲಿನ ಬಡ್ಜೆಟ್ಟಿನಲ್ಲಿ ಒಂದು ವೈಶಿಷ್ಟ್ಯ ಇದೆ. ಆ ವೈಶಿಷ್ಟ್ಯವಾದರೂ ಯಾರಾದರೂ ಸಹಜವಾಗಿ ಸುಲಭವಾಗಿ ತಿಳಿಯುವಂಥಾ ಒಂದು ವೈಶಿಷ್ಟ್ಯತೆ ಅದರಲ್ಲಿ ಅದೆ. ಇಂಥಾ ಗಂಭೀರ ಪರಿಸ್ಥಿತಿಯಲ್ಲಿ ಅದರಲ್ಲೂ ಹೆಚ್ಚು ಖರ್ಚಿನ ಒಂದು ವಿಚಾರ ಇರತಕ್ಕ ಪರಿಸ್ಥಿತಿಯಲ್ಲಿ ನ್ಯಾಯವಾಗಿ ಹೊಸ ತರಿಗೆಗಳನ್ನು ಯಾವ ಸರ್ಕಾರವೇ ಆಗಲಿ ಆಕರ್ಪಣತೆ ಮಾಡೇ ಮಾಡುತ್ತದೆ ಎಂತ ಜನರಲ್ಲಿ ಒಂದು ರೀತಿ ತರ್ಕ ನಡೆಯುತ್ತಿತ್ತು. ಆದರೆ ಈಗ ಈ ಬಡ್ಜೆಟ್ಟಿನಲ್ಲಿ ಯಾವ ರೂಪದಲ್ಲೂ ಒಂದು ಹೊಸ ಟ್ಯಾಕ್ಸನ್ನು ಹಾಕದಂತೆ ಮತ್ತು ಅದರಲ್ಲೂ ನಮಗೆ 40 ಲಕ್ಷ ರೂ.ಗಳ ಖೋತಾ ಬಿದ್ದಿದ್ದಾಗ್ಯೂ ಕೆಲವು ಹೊಸದಾದ ಖರ್ಚಿನ ಬಾಬುಗಳಿಗೆ ಹಣ ವಿನಿಯೋಗ ಮಾಡಲು ಅವಕಾಶ ಮಾಡಿಕೊಟ್ಟು, ಯಾವ ನಮ್ಮ ಯೋಜನೆಗಳನ್ನು ಬಧಿಗೊತ್ತದೆ ಇಂಥಾ ಬಡ್ಜೆಟ್ಟನ್ನು ಮಂಡಿಸಿರುವುವನ್ನು ನೋಡಿದರೆ ನಿಜವಾಗಿಯೂ ಇವರಲ್ಲಿ ಅಂಥಾ ಒಂದು ವೈಶಿಷ್ಟ್ಯ ಇದೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಅದಕ್ಕಾಗಿ ನಮ್ಮ ಅರ್ಥಿಕ ಸಚಿವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸಬೇಕು. ಈ ವೈಶಿಷ್ಟ್ಯ ಅ ನಮ್ಮ ವಿರೋಧ ಪಕ್ಷದವರೂ ಸಹ ಸ್ಪಷ್ಟವಾಗಿ ಒಪ್ಪಿಕೊಳ್ಳುವಂಥದ್ದಾಗಿದೆ. ಆದರೆ ಅವರು ಈ ವಿಚಾರದಲ್ಲಿ ತೋರಿಸಿರುವ ಔದಾರ್ಯವನ್ನು ನೋಡಿದರೆ ಏನೋ ಎಲ್ಲದಕ್ಕೂ ವಿರೋಧ ಮಾಡುವುದಕ್ಕಾಗೇ ವಿರೋಧ ಪಾರ್ಟಿ ಇದೆ ಎಂದು ಹೇಳಿ ಅವರು ತೋರಿಸಿರತಕ್ಕ ವಿರೋಧತನವೇನಿದೆ ಅದು ಅಷ್ಟು ಯುಕ್ತವಾದುದಲ್ಲ, ಸಮಂಜಸವಾದುದಲ್ಲ ಎಂಬುದಾಗಿ ಇದರ ಬಗ್ಗೆ ನನ್ನ ಪ್ರಾಮಾಣಿಕ ಅಭಿಪ್ರಾಯವಾಗಿದೆ.

ಇನ್ನು ನಾವು ನಮ್ಮ ದೇಶದ ಮುಖ್ಯ ಕಸುಬಾದ ವ್ಯವಸಾಯ, ರೈತನ ಒಕ್ಕಲುತನದ ವಿಚಾರ ತೆಗೆದುಕೊಂಡರೆ-ನಮ್ಮ ದೇಶದಲ್ಲಿ ಈ ಆರಂಭವನ್ನು ಇತ್ತೀಚೆಗೆ ಬಹಳ ಜನರು ಅವಲಂಬಿಸಿಕೊಂಡಿದ್ದಾರೆಂಬುದು ಸ್ಪಷ್ಟವಾಗದೆ ಈ ನಮ್ಮ ಕಳೆದ ಎರಡು ಪಂಚವಾರ್ಷಿಕ ಯೋಜನೆಗಳಲ್ಲಿ ಇಡೀ ದೇಶದಲ್ಲಿ ಹೆಚ್ಚಿನ ಧಾನ್ಯಗಳು ಉತ್ಪನ್ನವಾಗಿದೆ ಎಂಬುದಕ್ಕೆ ಅನುಗುಣವಾಗಿ ನಮ್ಮ ಪ್ರಾಂತದಲ್ಲೇ ಆಹಾರ ಧಾನ್ಯಗಳ ಉತ್ಪತ್ತಿ ತೀರಾ ಹೆಚ್ಚಾಗಿದೆ ಎಂಬ ಒಂದು ಕಾರಣದಿಂದಲೇ ಹೆಚ್ಚು ಜನರು ಈಗ ಈ ಉದ್ಯಮದಲ್ಲಿ ತೊಡಗಿದ್ದಾರೆಂಬುದಕ್ಕೆ ಕಾರಣ ಸ್ಪಷ್ಟವಾಗಿ ಕಾಣುತ್ತಿದೆ. ಇದನ್ನು ರುಜುವಾತು ಮಾಡುವುದಕ್ಕಾಗಿ ಕೆಲವರು ಅಂಕಿ-ಸಂಖ್ಯೆಗಳನ್ನು ಕೊಡುತ್ತಾರೆ. ಅದೇನೇ ಇರಲಿ ಈಗ ನಾವು ಈ ಬಗ್ಗೆ ಒಂದೆರಡು ಅಂಶಗಳನ್ನು ವಿಚಾರ ಮಾಡೋಣ. ಈ ದಿವಸ ಜನರ ಜೀವನದ ಗ್ರಾಹಕರ ಖರ್ಚು ವೆಚ್ಚಗಳು ಹೆಚ್ಚಾಗಿರುವುದರಿಂದ ಆತನ ಉತ್ಪತ್ತಿ ಸಹ ಹೆಚ್ಚಾಗಿರುತ್ತೆಂಬುದು ಸಹಜವಾಗಿ ಕಂಡು ಬರುತ್ತದೆ. ಈ ದಿವಸ ಅನೇಕರು ಜಮೀನು ಸಾಗುವಳಿ ಮಾಡುತ್ತಿದ್ದಾರೆ. 10-15 ವರ್ಷಗಳಿಂದಲೂ ಯಾರು ಜಮೀನಿದ್ದರೂ ತಾವು ಮಾತ್ರ ಸಾಗುವಳಿ ಮಾಡದೆ ಬೇರೆಯವರಿಗೆ ಸಾಗುವಳಿಗೆ ಕೊಟ್ಟು ಅದರಿಂದ ಬರುತ್ತಿದ್ದ ಲಾಭದಲ್ಲೇ ಜೀವನ ನಡೆಸುತ್ತಿದ್ದರೋ ಅಂಥವರೆಲ್ಲರೂ ಈ ದಿವಸ ಜಮೀನನ್ನು ಸಾಗುವಳಿಗೆ ಕೊಡುವುದರಿಂದ ಅಷ್ಟೇನೂ ಲಾಭವಿಲ್ಲ. ಸ್ವಂತ ಸಾಗುವಳಿ ಮಾಡಿದಲ್ಲಿ ಇನ್ನೂ ಹೆಚ್ಚಿನ ಉತ್ಪತ್ತಿ ಆಗುತ್ತದೆ ಎಂಬುದನ್ನು ಅವರು ಕಂಡುಕೊಂಡುದ್ದರಿಂದಲೇ ಈ ದಿವಸ ಆ ಭೂಮಿಗಳನ್ನೆಲ್ಲ ಬಿಡಿಸಿಕೊಂಡು ಅವರೇ ಸಾಗುವಳಿ ಮಾಡಲಿಕ್ಕೆ ಹತ್ತಿದ್ದಾರೆ. ಇದು ಒಂದೇ ದೃಷ್ಟಾಂತರ ಸಾಕು—ನಮ್ಮಲ್ಲಿ ಈ ದಿವಸ ಆಹಾರ ಧಾನ್ಯಗಳ ಉತ್ಪನ್ನ ಹೆಚ್ಚಾಗಿದೆ ಎಂತ ಗೊತ್ತಾಗುತ್ತದೆ. ಈ ದಿವಸ ನಾನಾ ಪ್ರಕಾರವಾದ ನೀರಾವರಿ ಯೋಜನೆಗಳು ಬೇರೆ ನಡೆಯುತ್ತಿವೆ. ಈ ದಿವಸ ಉತ್ತಮ ಗೊಬ್ಬರ ಹಾಕಿ, ಒಳ್ಳೆ ಬೀಜ ಹಾಕಿ, ಭೂಮಿ ಸಮತಳವಾಗಿದ್ದರೆ ಹೆಚ್ಚು ಧಾನ್ಯ ಬೆಳೆಯಬಹುದೆಂದು ಎಲ್ಲ ಕಡೆಗಳಲ್ಲೂ ಈಗ ಈ ವ್ಯವಸಾಯ ನಡೆಯಲಿಕ್ಕೆ ಪ್ರಾರಂಭವಾಗಿದೆ. ಹೀಗಿರುವಾಗ ಆಹಾರ ಧಾನ್ಯಗಳ ಉತ್ಪನ್ನ ಹೆಚ್ಚಾಗಿಲ್ಲ. ವ್ಯವಸಾಯ ಅಭಿವೃದ್ಧಿಯಾಗಿಲ್ಲ ಎಂತ ಹೇಳುತ್ತಿರುವುದು ಅಷ್ಟು ನ್ಯಾಯವಾಗಿದ್ದಂತೆ ಕಂಡು ಬರುವುದಿಲ್ಲ. ಆದರೆ ಇದರಲ್ಲಿ ಕೆಲವು ಲೋಪ ದೋಷಗಳಿರಬಹುದು. ಇದು ಬೇರೆ ವಿಚಾರ. ಆದರೆ ಧಾನ್ಯಗಳ ಉತ್ಪತ್ತಿಯೇ ಜಾಸ್ತಿ ಆಗಿಲ್ಲ ಎಂತ ಹೇಳುವುದನ್ನು ನಾನು ಒಪ್ಪಲಾರೆ. ಈ ಮಾತನ್ನು ನಾನು ಬಹಳ ಬಿರುಸಿನಿಂದ ಹೇಳಬಲ್ಲೆ. ಆದರೆ ನನಗೆ ತಿಳಿದ ಮಟ್ಟಿಗೂ ಈ ಬಾಬಿನಲ್ಲಿ ಇನ್ನೂ ಅನೇಕ ಲೋಪ ದೋಷಗಳಿವೆ.

ನನಗೆ ತಿಳಿದಮಟ್ಟಿಗೆ ಲೋಪ ದೋಷಗಳು ಎಂದರೆ ಸಂಶೋಧನೆಯ ಕೆಲಸವೇನಿದೆ ಅದು ಅಷ್ಟೊಂದು ಸರಿಯಾಗಿ ನಡೆದಿಲ್ಲವೆನ್ನುವುದು ನಿಜ. ಸಂಶೋಧನೆಯ ಕೆಲಸ ಒಂದುವೇಳೆ ಅಷ್ಟೊಂದು ಉತ್ತಮವಾದ ರೀತಿಯಲ್ಲಿ ನಡೆದಿದ್ದರೆ ಇದಕ್ಕೂ ಹೆಚ್ಚು ಉತ್ಪತ್ತಿಯಾಗುವುದಕ್ಕೆ ಸಹಾಯಕವಾಗುತ್ತಿತ್ತು. ಈ ಸಂಶೋಧನೆಯ ಕೆಲಸಕ್ಕೆ ಯಾವಗಮನವನ್ನು ಸರ್ಕಾರದವರ

ಕೊಡಬೇಕಾಗಿತ್ತೋ ಅಷ್ಟೊಂದು ಗಮನವನ್ನು ಕೊಟ್ಟಿಲ್ಲ. ನಮ್ಮ ಜಿಲ್ಲೆಯಲ್ಲಿ ಹತ್ತಿ, ಗೋಧಿ ಇವು ರೊಕ್ಕ ಬರುವಂಥ ಬೆಳೆಗಳು ಹತ್ತಿಯಲ್ಲಿ ಎರಡು ವಿಧದ ಹತ್ತಿ ಬೆಳೆಯುತ್ತಾರೆ. ಒಂದು ಲಕ್ಷ್ಮೀ ಇನ್ನೊಂದು ಜಯಧರ. ಇದು ಅನೇಕವರ್ಷಗಳಿಂದ ಚೆನ್ನಾಗಿ ಬೆಳೆಯುತ್ತಿತ್ತು. ಇತ್ತೀಚೆಗೆ ಐದಾರುವರ್ಷಗಳಿಂದ ಒಂದು ತರಹ ಕಾಯಿಲೆ ಬರಲಿಕ್ಕೆ ಹತ್ತಿತು. ಈ ವರ್ಷ ಒಂದು ಜಾತಿಯ worm ಹತ್ತಿಯಗಿಡವನ್ನು ಕೊರೆದು, ಹತ್ತಿಯ ಪೀಕು 80 ರಿಂದ ನೂರು ಮಣ ಬರುವಂಥಾದ್ದು, ಈ ಕಾಯಿಲೆಗಳು ಬಂದುದರಿಂದ ನಾಲ್ಕು ಎಕರೆಗೆ ಎಂಟುಮಣ, ಆರುಮಣ ಬರುವಂಥ ಪರಿಸ್ಥಿತಿ ಈ ವರ್ಷಬಂದಿದೆ. ಈಗ ಮೂರು ನಾಲ್ಕು ವರ್ಷಗಳಿಂದ ಈ ಪ್ರಕಾರ ಅನೇಕಸಾರಿ ಆಗಿದೆ. ಇದನ್ನು ಸರ್ಕಾರದಗಮನಕ್ಕೆ ಆಗಾಗ್ಗೆ ನಮ್ಮ ಭಾಗದ ಸದಸ್ಯರು ಅನೇಕ ರೀತಿಯಿಂದ ತಂದದ್ದಾಗಿದೆ. ಆದರೆ ಈ ದಿಸೆಯಲ್ಲಿ ಏನು ಸಂಶೋಧನೆ ನಡೆದಿದೆ, ಅದರ ಪರಿಣಾಮವೇನಾಗಿದೆ ಎಂದು ನನಗೆ ತಿಳಿದ ಮಟ್ಟಿಗೆ ಹೇಳುತ್ತೇನೆ.

ಆರೇಳು ವರ್ಷಗಳ ಹಿಂದೆ, ಈ ಎರಡು ತರಹ ಹತ್ತಿಗಳೂ ಮೊದಲನಂತೆ ಸರಿಯಿಲ್ಲ, ಮತ್ತೊಂದು ಜಾತಿಯನ್ನು ಸಂಶೋಧನೆ ಮಾಡಬೇಕು ಎಂದು ಮೈಸೂರಿಗೆ ಕೊಡುವುದಕ್ಕೆ ಮುಂಚಿತವಾಗಿಯೇ ಸಾಕಷ್ಟು ಕಾಲದಿಂದಲೂ ನಡೆದಿತ್ತು. ಆದರೆ ಎರಡು ಮೂರು ವರ್ಷ ಬಿಳಿ ಕ್ರಾಸ್ ಕೆಲವು ಮಟ್ಟಿಗೆ experiment ಮಾಡಿ ಸಂಶೋಧನೆ ಮಾಡಿ ಅದು ಅಷ್ಟೊಂದು ಉಪಯುಕ್ತವಾದುದಲ್ಲವೆಂದು ಬಿಟ್ಟುಕೊಟ್ಟರು, ಈಗ ಮೂರು ನಾಲ್ಕು ವರ್ಷದಿಂದ ಮತ್ತೊಂದು ಹತ್ತಿ experiment ನಲ್ಲಿದೆ. ಅದರ result ಏನಿದೆ, ಯಾವ ಮಟ್ಟಕ್ಕೆ ಬಂದಿದೆ ಎನ್ನುವುದು ಇದುವರೆಗೂ ನಮಗೆ ಅಧಿಕಾರವಾಗಿ ತಿಳಿಯದೆ ಹೋಗಿದೆ. ಇದಕ್ಕೆ ಅನೇಕ ಕಾರಣಗಳಿವೆ. ಈ ಬಗ್ಗೆ ವ್ಯವಸಾಯದವರು ಬಹಳ ಅಲಕ್ಷ್ಯಮಾಡಿದ್ದಾರೆ. calons, negligence ಎಂದು ಏನು ಹೇಳುತ್ತಾರೆ ಅದು ತಪ್ಪು ಎಂದು ಕಾಣುವುದಿಲ್ಲ. ಹತ್ತಿ ರೈತರಿಗೆ ದೊಡ್ಡ ಪೀಕು; ಇದಕ್ಕೆ ಏನು ಗಮನ ಕೊಡಬೇಕಾಗಿತ್ತೋ ಆಗಮನಕೊಡದೆ ಇರುವುದು ಬಹಳ ಅಪರಾಧ. ಸಂಶೋಧನೆಯ ಕೆಲಸಕ್ಕೆ ಮುಖ್ಯ ಮುಖ್ಯ ಅಧಿಕಾರಿಗಳು ಯಾರುಬೇಕಾಗಿತ್ತು ಅವರು ಇನ್ನೂ ಒದಗಲಿಲ್ಲವೆಂದು ತಿಳಿಯುತ್ತೇನೆ cotton Breeder ಎನ್ನುವವರು ಇನ್ನೂ ಇಲ್ಲವೆಂದು ತಿಳಿಯುತ್ತೇನೆ. ಇದರ ಕಡೆಗೆ ಲಕ್ಷ್ಯವಿದೆಯೋ ಇಲ್ಲವೋ ಎಂದು ನನಗೆ ಸಂಶಯವಾಗಿದೆ. ಇಷ್ಟು ಅಲಕ್ಷ್ಯನಡೆದಿರುವುದು ಸರಿಯಿಲ್ಲ. ಇದಕ್ಕೆ ತಕ್ಕ ಗಮನವನ್ನು ಕೊಡದೆ ಇದ್ದರೆ ಬಹಳ ಲುಕ್ಸಾನಾಗುತ್ತದೆ. ಆದ್ದರಿಂದ ಇದಕ್ಕೆ ಗಮನ ಕೊಡಬೇಕೆಂದು ಬಹಳ ಆಗ್ರಹದಿಂದ ಈ ಮೂಲಕ ಕೇಳುತ್ತೇನ.

ಗೋಧಿ ಬೆಳೆಗೆ ಆಗಾಗ್ಗೆ rust ಎಂದರೆ ಭಂಡಾರ ಎಂದು ಬರುತ್ತದೆ. ಇದರಿಂಥ ಬೆಳೆಗೆ ಬಹಳ ಕೆಡುಕಾಗುತ್ತಿದೆ ಉತ್ತಮ ಸಂಶೋಧನೆಯನ್ನು ನಡೆಸಿ ಗೋಧಿ ಬೆಳೆಗೆ ಭಂಡಾರ ರೋಗ ಬರದಂತೆ ತಡೆಗಟ್ಟಲು ಔಷಧಿಯನು ಕಂಡು ಹಿಡಿದಿದ್ದಾರೆ. ಅದನ್ನು ಎಷ್ಟು ಪ್ರದೇಶಕ್ಕೆ ಕೊಡಬೇಕೋ ಅಷ್ಟನ್ನೂ ಕೊಟ್ಟಿಲ್ಲ. ಅಲ್ಪ ಸ್ವಲ್ಪ ಕೊಟ್ಟಿದ್ದಾರೆ. ಇದನ್ನು ಎಲ್ಲ ಕಡೆಗೂ ಹೆಚ್ಚು ಕೊಟ್ಟು rust ನಿಂದ ಕೆಡುಕಾಗುವಂಥಾದ್ದನ್ನು ತಪ್ಪಿಸಬೇಕೆಂದು ಈ ಮೂಲಕ ನಾನು ಅತ್ಯಂತ ಆಗ್ರಹದಿಂದ ಕೇಳಿಕೊಳ್ಳುತೇನೆ.

ಮಾನ್ಯ ಅರ್ಥ ಸಚಿವರು ತಮ್ಮ ಭಾಷಣದಲ್ಲಿ ಒಂದು ಸಂಗತಿಯನ್ನು ಉಲ್ಲೇಖ ಮಾಡಿದ್ದಾರೆ, ಈ ಸಂದರ್ಭದೊಳಗೆ. ಉತ್ತಮವಾದ ಬೀಜಗಳನ್ನು ಪುರೈಕೆಮಾಡಲಿಕ್ಕೆ, ರೈತರಿಗೆ ಸಬ್ಸಿಡಿ ಕೊಡಲಿಕ್ಕೆ, ಹೀಗೆ 20 ರೀತಿಯ ಸಹಾಯಗಳನ್ನು ಕೊಡುವ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆಂದು ಹೇಳಿದ್ದಾರೆ. ಆದರೆ ಈ ಯೋಜನೆ, ಕಾರ್ಯಚರಣೆಯಲ್ಲಿ ಅಷ್ಟೊಂದು ಸುಖ ವಿಲ್ಲ, ಸರಿಯಿಲ್ಲ. ನಾಲ್ಕು ರೂಪಾಯಿ ಸಬ್ಸಿಡಿ ಕೆಲವು ಜನರಿಗೆ ಹೋಗುತ್ತದೆ. ಆದರೆ ಅವರು ಏನು ಉತ್ತಮ ಬೀಜ ಎಂದು ತಗದುಕೊಂಡರೂ ಅನೇಕ ಸೊಸೈಟಿಗಳವರು ಆ ಬೀಜವನ್ನು ತೆಗೆದುಕೊಳ್ಳುತ್ತಿಲ್ಲ ಆ ಬೀಜ--ಹತ್ತಿ ಬೀಜ ಬಿಟ್ಟು ಉಳಿದ ಬೀಜಗಳ ವಿಷಯ ಹೇಳುತ್ತೇನೆ—ಅನೇಕ ಕಡೆ ಇಲ್ಲ. ಕೆಲವು ಕಡೆ ಮಾತ್ರ ಇರಬಹುದು. ಅದಕ್ಕೆ ಸಬ್ಸಿಡಿಕೊಡುತ್ತಾರೆ. ಅವು ಹಂಚಿಕೆಯಾಗಬೇಕು. ಆ ಪ್ರಕಾರ ಆಗುತ್ತದೆಯೋ ಇಲ್ಲವೋ ಎನ್ನುವುದಕ್ಕೆ ಯಾವ supervision ಇರಬೇಕೋ ಆ supervision ವ್ಯವಸಾಯ ಇಲಾಖೆಯ ಅಲ್ಲವೆನ್ನುವುದು ನನಗೆ ಅಧಿಕೃತವಾಗಿ ತಿಳಿದಿರುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ಈ ಮೂಲಕ ತರಬಯಸುತ್ತೇನೆ.

ಉದ್ದಿಮೆಗಳ ಬಗ್ಗೆ ಹೇಳುವುದಾದರೆ, ಎರಡನೆ ಪಂಚವಾರ್ಷಿಕಯೋಜನೆಯಲ್ಲಿ ದೇಶದಲ್ಲಿ ಅನೇಕ ಪ್ರಕಾರ ಏನಾದರೂ ಪ್ರಗತಿಯಾಗಿದ್ದರೆ ಉದ್ದಿಮೆಕ್ಷೇತ್ರದಲ್ಲಿ ಪ್ರಗತಿಯಾಗಿಲ್ಲ. ಇದಕ್ಕೆ ಆಧಾರ ಅನೇಕವಿದೆ. ಉಕ್ಕು, ಕಬ್ಬಿಣ, ಕಾಗದ, ಸಿಮೆಂಟ್, ಸಕ್ಕರೆ, ಔಷಧಿ ಸಾಮಾನು, machinery ಸಾಮಾನು, ಸೈಕಲ್ ವಗೈರೆ ವಗೈರೆ ಸಾಮಾನುಗಳ ಉತ್ಪತ್ತಿ ಹೆಚ್ಚು ಹೆಚ್ಚು ಆಗಲಿಕ್ಕೆ ಹತ್ತಿದೆಯೇ ಇಲ್ಲವೋ ಅದು ನಿತ್ಯ ನಮಗೆ ಕಾಣುತ ದೆ. ಇನ್ನೂ ಆಗಿಲ್ಲವೆಂದು ಹೇಳಿದರೆ ನನಗೆ ನ್ಯಾಯ ಕಾಣುವುದಿಲ್ಲ. ಮಾನ್ಯ ವಿರೋಧ ಪಕ್ಷದನಾಯಕರಾದ ಶಿವಪ್ಪನವರು ಕೆಲವು ಮಟ್ಟಿಗೆ

(ಶ್ರೀ ಕೆ. ಪಿ. ಗದಗ್)

ಆಗಿರಬಹುದು, ಆದರೆ ಅವರು ಏನು ವಾದಿಸಿದರು ಎಂದರೆ private enterprise ನಿಂದ ಈ ಕಾರ್ಯವಾಗಿದೆ ಎಂದು. private enterprise ನಿಂದ ಉತ್ಪಾದನೆ ಹೆಚ್ಚಿದ್ದರೂ ಸರ್ಕಾರದ ಸಹಾಯ ವಿಲ್ಲದೆ, private enterprise ನಿಂದ ಉದ್ದಿಮೆಗಳ ಪ್ರೋತ್ಸಾಹ ಹೇಗೆ ಬರುತ್ತದೆನ್ನುವುದನ್ನು ಅವರು ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ private enterprise ನಲ್ಲಿ ಸಹಿತ ಸರ್ಕಾರದ ತಜ್ಞರ ಸಹಾಯವಿಲ್ಲದೆ ಉದ್ದಿಮೆಗಳ ಬೆಳವಣಿಗೆ. ಪ್ರೋತ್ಸಾಹ ಆಗಲಿಲ್ಲವೆನ್ನುವ ಮಾತನ್ನು ಯಾರಾದರೂ ಒಪ್ಪತಕ್ಕದ್ದೇ. ಇದರ ಬಗ್ಗೆ ನಾನು ಹೆಚ್ಚು ಹೇಳಬೇಕಾಗಿಲ್ಲ. ಉದ್ದಿಮೆಗಳಿಗೆ ಅತ್ಯವಶ್ಯವಾಗಿ ಬೇಕಾದಂಥ ವಿದ್ಯುಚ್ಛಕ್ತಿ, ನೀರು, ರಸ್ತೆ ಸಂಪರ್ಕ, ಸಾರಿಗೆ ಸಂಪರ್ಕ ಕೆಲವು ಮಟ್ಟಿಗೆ ಧನ ಸಹಾಯ ವಗೈರೆ ವಗೈರೆ, ಇಂಥ ಸಹಾಯಗಳಿಲ್ಲದೆ ಖಾಸಗಿ ಉದ್ದಿಮೆಗಳ ಬೆಳವಣಿಗೆಯೂ ಆಗಿಲ್ಲ. ಇಷ್ಟನ್ನಾದರೂ ಮಾಡಿದ್ದಾರೆನ್ನುವುದು ಸ್ಪಷ್ಟವಾಗಿದೆ. ಇದನ್ನು ಪ್ರತ್ಯೇಕ ಹೇಳುವ ಅವಶ್ಯಕತೆಯಿಲ್ಲ.

ಅನೇಕ ಪಟ್ಟಣಗಳಲ್ಲಿ Industrial Estates ಮಾಡುತ್ತಿರುವುದು ನಮಗೆಲ್ಲರಿಗೂ ಗೊತ್ತಿದೆ. ಅನೇಕ ಯೋಜನೆಗಳು ಅಲ್ಲಲ್ಲಿ ಆಗಿದೆ. ಈ ವಿಷಯದಲ್ಲಿ ಹೇಳುವುದೆಂದರೆ Occupation Institutes, polytechnic ವಗೈರೆಗಳು ದೇಶದಲ್ಲಿವೆ.

[MR. SPEAKER in the Chair]

ಆದರೆ Artisan Institute ಪಾಲಿ ಟೆಕ್ನಿಕ್ ಇನ್ಸ್ಟಿಟ್ಯುಟು ಇಲ್ಲಿ ತರಪೇತಿ ಹೊಂದಿದವರಿಗೆ, ಅವರು ಯಾವ ಉದ್ದಿಮೆಯಲ್ಲಿ ಅಥವಾ ಯಾವ ವ್ಯವಸಾಯದಲ್ಲಿ ಅವರಿಗೆ ತರಬೇತಾಗಿರುತ್ತದೋ ಅಂತಹವರಿಗೆ ಆಯಾ ಕ್ಷೇತ್ರದಲ್ಲೇ ಉಳಿಸಿಕೊಂಡು ಅವರಿಂದ ಕೆಲಸ ತೆಗೆಯುವ ವ್ಯವಸ್ಥೆ ಮಾಡಬೇಕು. ಈಗ ವ್ಯವಸಾಯದಲ್ಲಿ ತರಬೇತಿ ಹೊಂದಿದವನು ತರಬೇತಿಯಾದಮೇಲೆ ಬೇರೆ ಕಡೆಗೆ ಹೋಗಿ ಕೆಲಸ ಮಾಡುವುದಕ್ಕೆ ಬದಲಾಗಿ ಯಾವ ಉದ್ದಿಮೆಯಲ್ಲಿ ತರಬೇತಿ ಪಡೆದಿರುತ್ತಾನೋ ಅಂತಹವವನು ಅದೇ ಉದ್ದಿಮೆಯನ್ನು ಮುಂದಕ್ಕೆತರಲು ಅಲ್ಲಿಯೇ ಕೆಲಸಮಾಡುವ ವ್ಯವಸ್ಥೆ ಕೈಗೊಳ್ಳುವುದು ಉತ್ತಮ. ಪ್ರವೇಟ್ ಇಂಡಸ್ಟ್ರಿಯಾಗಲಿ, ಸರಕಾರದ ಇಂಡಸ್ಟ್ರಿಯಾಗಲೀ ಯಾವುದರಲ್ಲಿ ಟ್ರೇನಿಂಗು ಪಡೆದಿರುತ್ತಾರೋ ಅದನ್ನು ನೋಡಿಕೊಂಡು ಅಂತಹ ಇಂಡಸ್ಟ್ರಿಯಲ್ಲಿಯೇ ಕೆಲಸಮಾಡಲು ಅವಕಾಶವನ್ನು ಸರಕಾರ ಕಲ್ಪಿಸಿಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಇಂಡಿಸ್ಟ್ರೀಸ್ ಬಗ್ಗೆ ಸ್ಮಾಲ್ ಸ್ಕೇಲ್ ರೂರಲ್ ಇಂಡಸ್ಟ್ರೀಸ್ ಎಂದೇನಿದೆ ಅದು ನಿಜವಾಗಿಯೂ ಯಾವರೀತಿ ಯೋಜನೆ ಆಗಿದೆ ಆ ರೀತಿ ಕಾರ್ಯಗತವಾಗಿಲ್ಲ. ನಿಜವಾಗಿಯೂ ರೂರಲ್ ಇಂಡಸ್ಟ್ರೀಸು ಏನಿದೆ ಅದು ಒಂದು ಟ್ರೆಡಿಷನ್ ಆಗಿ ಬಂದು ಅನೇಕ ಜನರು ಕೆಲಸ ಮಾಡುತ್ತಿದ್ದರು ಆ ಜನಕ್ಕೆ ಸರಿಯಾದ ರಕ್ಷಣೆ ಬೇಕು, ಸಾಲ ಬೇಕಾಗುತ್ತದೆ, ಇದರಕಡೆಗೆ ಇಂಡಸ್ಟ್ರೀಸ್ ಇಲಾಖೆಯವರು ಗಮನ ಕೊಡುತ್ತಿಲ್ಲ. ಇದಕ್ಕೆ ಅಲ್ಲಿರುವ ಅಧಿಕಾರಿಗಳೇಕಾರಣ ಎಂದು ತೋರುತ್ತೆ ಅದರಿಂದಾಗಿ ಹಿಂದಿನಿಂದ ಬಂದಿದ್ದ ಈ ಇಂಡಸ್ಟ್ರಿ ಈಗ ನಿರ್ನಾಮವಾಗಿಲಕ್ಕೆ ಹತ್ತಿದೆ. ಈ Traditional Industriesನ್ನು ಪುನರುಜ್ಜೀವನ್ ಮಾಡದಿದ್ದರೆ, ಮುಂದೆ ಈ ಉದ್ದಿಮೆಯನ್ನು ಕಲಿಯಲಿಕ್ಕೇ ಜನವಿರುವುದಿಲ್ಲದಂತಾಗುತ್ತದೆ ಇದರಲ್ಲಿ ಸುಮಾರು 60-70 ಸಂಸಾರದ ಜನರು ನಮ್ಮ ದೇಶದಲ್ಲಿ ಕೆಲವು ಜಾಗದಲ್ಲಿದ್ದಾರೆ. ಅವರಿಗಾಗಿ ದುಡ್ಡನ್ನು ಸಾಲವಾಗಿಕೊಟ್ಟು ಈ ಉದ್ದಿಮೆಯಲ್ಲಿರುವ ಜನರಿಗೆ ಸಹಾಯ ಮಾಡುವಕಡೆಗೆ ನಮ್ಮ ಇಂಡಸ್ಟ್ರೀಸು ಇಲಾಖಾಧಿಕಾರಿಗಳು ಗಮನ ಹರಿಸುತ್ತಿಲ್ಲ. ಈ ದಿಸೆಯಲ್ಲಿ ಸರಕಾರದವರು ವಿಚಾರಮಾಡಿಲ್ಲ. ಭಾರಿ ಭಾರಿ ಇಂಡಸ್ಟ್ರೀಸ್‌ಗಳಕಡೆಗೆ ಅವರ ಗಮನ ಹೆಚ್ಚಾಗಿದೆ. ದೊಡ್ಡ ಇಂಡಸ್ಟ್ರೀಗಳಿಂದ ನ್ಯಾಷನಲ್ ಇನ್‌ಕಂ ಬರಬಹುದು ಆದರೆ ನಿಜವಾಗಿ ಹೆಚ್ಚಾಗಿ ಅನುಕೂಲವಾಗಬೇಕಾಗಿದ್ದರೆ, ಇಂತಹ ಚಿಕ್ಕಪುಟ್ಟ ಇಂಡಸ್ಟ್ರೀಸುಗಳು ಏನಿವೆ ಅವನ್ನು ಉತ್ತಮಪಡಿಸಿ, ಅವರ ಜೀವನವನ್ನು ವುತ್ತಮಪಡಿಸಿ ಅನುಕೂಲಮಾಡಬೇಕೆಂದು ಈ ಮೂಲಕ ಹೇಳಬಯಸುತ್ತೇನೆ.

ಬಹು ಪ್ರಾಮುಖ್ಯವಾದ, ಮಹತ್ವದ ಸಾರಿಗೆ ಸಂಪರ್ಕವನ್ನು ಬೆಳಸುವುದು ಅವಶ್ಯವಿದೆ. ಆದರೆ ನಮ್ಮ ಭಾಗದಲ್ಲಿ ಬಹುದಿವಸದಿಂದ ಕೇಳುತ್ತಲೇ ಬಂದಿದ್ದೇವೆ. ಸಾರಿಗೆ ಸಂಪರ್ಕ ಬೆಳೆದು ಮತ್ತಷ್ಟು ಹೆಚ್ಚ ಬೇಕು. ಎನ್ನುವ ಬೇಡಿಕೆಯನ್ನು ಹೇಳುತ್ತಲೇಬಂದಿದ್ದೇವೆ. ಸಮರ್ಪಕವಾಗಿಲ್ಲದಿರುವ ಪರಿಸ್ಥಿತಿ ಬಂದಿದೆಎಂದು ಈ ಮಾನ್ಯ ಸಭೆಯಲ್ಲೂ ಈಗಾಗಲೇ ಚರ್ಚೆಯನ್ನೂ ಮಾಡಿದ್ದೇವೆ. ಈಗ ಹೊಸಪೇಟೆಯಿಂದ ಗುಂಟಕಲ್‌ವರೆಗೆ ಬ್ರಾಡುಗೇಜು ಆಗಲು ಷುರು ಆಗಿದೆ. ಅದೇ ರೀತಿ ಮಿರಜ್ ನಿಂದ ಪೂನಾದವರೆಗೆ ಬ್ರಾಡ್‌ಗೇಜು ಆಗಲು ಯೋಜನೆ ಮಂಜೂರಾಗಿದೆ. ಸರ್ವೆ

ಕೆಲಸ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಆ ಊರಿನವರು ದೇಶಕ್ಕೆ ಅತ್ಯವಶ್ಯಕವಾದ ಕೆಲವು ರೈಲು ಮಾರ್ಗಗಳನ್ನು ವ್ಯಾಪಾರ ಹೆಚ್ಚುವುದಕ್ಕೋಸ್ಕರ ಬ್ರಾಡುಗೇಜು ಲೈನಿಲ್ಲದೆ ಬಹಳ ತೊಂದರೆ ಅನಾನುಕೂಲಗಳು ಆಗುತ್ತಿವೆ ಎಂದು ಸುಮಾರು ಹತ್ತು ವರ್ಷಗಳಿಂದಲೂ ಹೇಳುತ್ತಿದ್ದೇವೆ, ಆದಾಗ್ಯೂ ಅನೇಕ ಕಾರಣಗಳನ್ನು ಹಾಕಿ ತಪ್ಪಿಸುತ್ತಿದ್ದಾರೆ. ನಮ್ಮ ನೆರೆ ಹೊರೆಯ ಕಡೆಗೆ ಕೊಟ್ಟು ನಿಜವಾಗಿಯೂ ರೈಲು ಮಾರ್ಗ ಉತ್ತಮಪಡಿಸುತ್ತಿದ್ದಾರೆ. ಆದರೆ ಕೇಂದ್ರ ಸರಕಾರದವರು ನಮ್ಮ ಸರಕಾರ ಇದು ಸ್ವಲ್ಪ ಮಹತ್ವದ ವಿಚಾರ ಎಂದು ಹೇಳುತ್ತಿದ್ದರೂ ಅದೇಕೊ ಏನೋ ಮಲತಾಯಿ ಮಕ್ಕಳ ರೀತಿಯಲ್ಲಿ ಹೋಗುತ್ತಿದ್ದಾರೆ ಇದೇಕೋ ನನಗೆ ಗೊತ್ತಾಗುತ್ತಿಲ್ಲ. ಈಗಲಾದರೂ ನಮ್ಮ ಸರಕಾರ ಕೇಂದ್ರಕ್ಕೆ ಸರಿಯಾದ ಅರಿವು ಆಗುವಂತೆ ಹೇಳಬೇಕೆಂದು ಆಗ್ರಹದಿಂದ ಇಲ್ಲ ಹೇಳುತ್ತಿದ್ದೇನೆ.

ಇಷ್ಟು ಲಾಭದಾಯಕವಾದ ಯೋಜನೆ ಎಂದು ಕೇಂದ್ರಕ್ಕೆ ಒತ್ತಾಯಮಾಡಬೇಕು, ಇದರಿಂದ ವ್ಯಾಪಾರ ಅಭಿವೃದ್ಧಿಯಾಗಿ ಜನತೆಗೆ ಹೆಚ್ಚಿನ ಸೌಲಭ್ಯಗಳು ದೊರಕುತ್ತವೆ. ಯಾವುದಕ್ಕೂ ಸರಿಯಾದ ರೈಲ್ವೆ ಸೌಲಭ್ಯ ಹೆಚ್ಚಾಗಿದ್ದರೆ ರೈತರೂ ಲಾಭದಾಯಕವಾಗಿರುತ್ತಾರೆ ಮತ್ತು ಎಲ್ಲರಿಗೂ ಲಾಭದೊರಕುತ್ತದೆ. ಇದನ್ನು ಅವಶ್ಯವಾಗಿ ಒತ್ತಾಯಮಾಡಬೇಕೆಂದು ಹೇಳುತ್ತೇನೆ. ಇದು ಬಹಳ ಅವಶ್ಯವಾದುದು ಈ ಬಗ್ಗೆ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ಕೃತಜ್ಞತೆಗಳನ್ನು ಅಧ್ಯಕ್ಷರಿಗೆ ಅರ್ಪಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮಾನ್ಯ ಅಧ್ಯಕ್ಷರೇ, 1963-64ನೇ ಆಯವ್ಯಯ ಪಟ್ಟಿಯಮೇಲೆ ಈ ಸಭೆಯಲ್ಲಿ ಭಾಗವಹಿಸಿದ ಅನೇಕ ಜನ ಸ್ನೇಹಿತರು ಮಾತನಾಡುತ್ತ ಇದರ ಮೇಲೆ ಬೇಕಾದಷ್ಟು ಬೆಳಕನ್ನು ಚೆಲ್ಲಿದ್ದಾರೆ. ನನಗೆ ಹಣಕಾಸಿನ ಮಂತ್ರಿಗಳ ವಿಷಯದಲ್ಲಿ ವೈಯ್ಯುಕ್ತಿಕವಾಗಿ ಎಷ್ಟೇನನಗೆ ಗೌರವವಿದ್ದರೂ ಅವರು ಹಣಕಾಸಿನ ಪರಿಸ್ಥಿತಿಯನ್ನು ತುಲನೆ ಮಾಡಿರತಕ್ಕ ರೀತಿಯಲ್ಲಿ ಈ ದೇಶದ ಸ್ಥಿತಿ ಇಲ್ಲ ಎಂದು ನನ್ನ ಭಾವನೆ. ಆದರೂ ಕೆಲವರು ಇದನ್ನು Jugglery of figures ಎಂದು ಹೇಳಿದರು, ಕೆಲವರು ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ ಮಾಡಿಲ್ಲ ಎಂದು ಏನೇನೋ ಹೇಳಿದರು. ಇದರಲ್ಲಿ ಹೆಚ್ಚಿನ ಮಹತ್ವದ್ದೇನೂ ಇಲ್ಲ. ಒಂದನ್ನು ಮಾತ್ರ ತೋರಿಸಿದ್ದೀರಿ ನಾನು 1957 ರಿಂದ 64 ರವರೆಗೆ ಈ ಸಭೆಯಲ್ಲಿರುವುದರಿಂದ ಆಗಿನ ಆರ್ಥಿಕ ಮಂತ್ರಿಗಳು ಬಡ್ಜೆಟ್ಟನ್ನು ಈ ಸಭೆಯಲ್ಲಿ ಮಂಡಿಸುವಾಗ, ಎರಡೆರಡು ಗ್ಲಾಸು ನೀರನ್ನು ಕುಡಿದು ಓದಿ ಮುಗಿಸುತ್ತಿದ್ದರು ಆದರೆ ನೀವು ಮಾತ್ರ ನೀರನ್ನು ಕುಡಿಯಲಿಲ್ಲ. ಇದೊಂದೇನವೀನತೆ ಎಂದು ಕಾಣುತ್ತದೆ.

Mr. SPEAKER.—Which Item of the Budget you are referring to ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರಲ್ಲಿ ಅರ್ಥವಿದೆ ಸ್ವಾಮೀ. ಅವರು ಜನಗಳಿಗೆ ನೀರು ಬೊಕ್ಕಸೆಯಿಂದ ಕುಡಿಸಲು ಅನೇಕ ಕಡೆಗಳಲ್ಲಿ ಹೋಗಿದ್ದಾರೆಂದು ನನ್ನ ಅಭಿಪ್ರಾಯ ಎಲ್ಲ ತಾಲ್ಲೂಕು ಬೋರ್ಡುಗಳ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟು ಕೌನ್ಸಿಲ್, ಪಂಚಾಯತಿ ಬೋರ್ಡು, ಸೊಸೈಟಿಗಳು ತಮಗೇನು ಸಾವಿರ ರೂಪಾಯಿ ಆದಾಯ ಬಂದಿದೆಯೇ, ಎಷ್ಟು ಹಣ ಖರ್ಚಾಯಿತು, ಎನ್ನು ವಸಾಹಸವನ್ನು ತೋರಿಸುವುದಕ್ಕೋಸ್ಕರ ಇಂತಹ ಲೆಕ್ಕವನ್ನು ತೋರಿಸಿದ್ದಾರೆಯೇ ವಿನಾ ಹೊಸದಾಗಿ ಇದರಲ್ಲೇನೂ ಇಲ್ಲ, ತುರ್ತಿನ ಸಮಯದಲ್ಲಿ ಯಾವರೀತಿ ಮಾಡಬೇಕು ಎಂದು ಶ್ರೀಮಾನ್ ಗದಗ್‌ರವರು ಮಾತನಾಡುವಾಗ ಹೇಳಿದಂತೆ ಒಂದು ಪದವನ್ನು ಇದರಲ್ಲಿ ಹೇಳಿಲ್ಲ. ನನ್ನ ಸ್ನೇಹಿತರಾದ ಶ್ರೀಮಾನ್ ಗಾಂಜಿವೀರಪ್ಪ ನವರು ಹೇಳುವಾಗ ಈ ದೇಶದಲ್ಲಿ ಇಷ್ಟು ಟನ್ ಆಹಾರವಿದೆ. ಇಷ್ಟು ಡೆಫಿಸಿಟ್ಟಿದೆ. ಇಷ್ಟು ಸಾಲ ಇದೆ ಎಷ್ಟು ಜನರಿಗೆ ಸಹಾಯಕೊಟ್ಟಿದ್ದಾರೆ ಎನ್ನುವುದನ್ನೇನಾದರೂ ಕೊಟ್ಟಿದ್ದಾರೇನು ? ದೊಡ್ಡದಾಗಿ ಇಷ್ಟು ಟನ್ನುಗಳಷ್ಟು ಆಹಾರ ಬೆಳೆದರು ಎಂದು ಹೇಳದೆ ಈ ರೀತಿಯಾಗಿ ಒಂದು ಚಿತ್ರವನ್ನು ನಮ್ಮ ಮುಂದಿಟ್ಟಿದ್ದಾರೆ. ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಇತರ ಎಲ್ಲಾ ಪ್ರಾಂತದಲ್ಲಿಯೂ ಕೊಡುವಹಾಗೆ ಈ ದೇಶದಲ್ಲಿ ಉತ್ಪತ್ತಿ ಹೆಚ್ಚುಮಾಡಿ. ಹೆಚ್ಚು ಬೆಳೆ ಬೆಳೆಯುತ್ತೇವೆ, ನಮ್ಮ ಜನರ ಸಾಲಸೋಲಗಳಿಗೆ ಸಹಾಯಮಾಡಿ ಜನತೆಯ ಮೇಲೆ ತೆರಿಗೆ ಹೊರೆಯನ್ನು ಕಡಿಮೆಮಾಡಿ, ಈ ದೇಶದ ಉತ್ಪತ್ತಿಯನ್ನು ಇಷ್ಟು ಮಟ್ಟಿಗೆ ಬೆಳೆದಿದ್ದೇವೆ ಎನ್ನುವ ಒಂದು ಚಿತ್ರವನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಗಾಂಜೀವೀರಪ್ಪನವರು ಇಷ್ಟು ಲಕ್ಷ ಟನ್ ಅಕ್ಕಿ ಇಷ್ಟು ಲಕ್ಷ ಟನ್ ಗೋಧಿ ಆಗಿದೆ ಎಂದು ಹೇಳಿದರು, ನಾನಾದರೂ ಹೇಳುತ್ತೇನೆ. ಅವರು ಹೇಳತಕ್ಕ ಮಾತು ನಿಜವಾಗಿಯೂ ಸಾಧನೆ ಮಾಡಿ ನಿಮ್ಮ ಭುಜತಟ್ಟಿ ಕೊಳ್ಳುವುದಾದರೆ, ನಾವು ನೀವು ಆಗಲೀ ಬೇರೆ ಯಾರೇ ಆಗಲೀ, ನೀವು ನಿರೀಕ್ಷೆ ಮಾಡಿದಷ್ಟು ದೂರ ಹೋಗಿದ್ದೀರಾ? ಇಲ್ಲದೇ ಹೋದರೆ, ಅಷ್ಟು ದೂರ ಹೋಗಲು ಪ್ರಯತ್ನವನ್ನೇನಾದರೂ ಮಾಡಿದ್ದೀರಾ ಎಂದರೆ ಇಲ್ಲ. ಹೀಗಿರುವಾಗ ಹಣಕಾಸಿನ ಪರಿಸ್ಥಿತಿ ಬಹಳ ಕೆಟ್ಟುಹೋಗಿದೆ. ನಾವೆಲ್ಲರೂ

(ಶ್ರೀ ಪಿ. ಜಿ. ತುಳಸಿಣ್ಣಪ್ಪ)

ಹಿಂದುಗೂಡಿಕೊಂಡು. ಈ ಕಷ್ಟವನ್ನು ಹೇಗೆ ಕಳೆಯುತ್ತೀರಿ ಹಣಕಾಸಿನ ಸ್ಥಿತಿಯನ್ನು ತಿದ್ದುತ್ತೀರಿ ಎನ್ನುವುದಕ್ಕೆ ಇದರಲ್ಲಿ ಒಂದು ವಾಕ್ಯವೂ ಇಲ್ಲ.

6-30 P.M.

ನಾನು ಒಂದು ಮಾತು ಕೇಳುತ್ತೇನೆ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ, ಈ ತುರ್ತು ಪರಿಸ್ಥಿತಿಯಲ್ಲಿ ಬೇರೆ ರಾಜ್ಯಸರಕಾರಗಳು ಅಭಿವೃದ್ಧಿ ಕಾರ್ಯಕ್ಕೋಸ್ಕರ ನೀರಾವರಿ ಯೋಜನೆಗಳಿಗೋಸ್ಕರ, ವ್ಯವಸಾಯಕ್ಕೋಸ್ಕರ, ವಿದ್ಯಾಖಾತೆಗೋಸ್ಕರ ಯಾವ ರೀತಿ ಹಣ ಒದಗಿಸಿ ದೇಶದಲ್ಲಿ ಇಂದು ಅಭಿವೃದ್ಧಿ ಪಡಿಸಿಕೊಳ್ಳುತ್ತಿದ್ದಾರೆಯೋ ಆ ರೀತಿ ನಮ್ಮ ರಾಜ್ಯದಲ್ಲಿ ಯಾವ ಕ್ಷೇತ್ರದಲ್ಲಿ ಅಭಿವೃದ್ಧಿ ಯಾಗಿದೆ, ಆಯವ್ಯಯ ಅಂದಾಜ ಪಟ್ಟಿಯಲ್ಲಿ ಹಣ ಒದಗಿಸಿದ್ದಾರೆಯೇ ಎಂದು ತುಲನೆ ಮಾಡಿ ನೋಡಿದರೆ, ಯಾವ ಅಭಿವೃದ್ಧಿ ಸಾಧನೆಗೆ ಹಣ ಒದಗಿಸಿರುವುದು ಕಾಣುವದಿಲ್ಲ. ಹೋದ ವರ್ಷ ಮಂಡಿಸಿದ ಬಜೆಟ್ಟಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆಮಾಡಿ ಅದೇ ರೀತಿಯಾಗಿ ಪುನಃ ಮಂಡಿಸಿದ್ದಾರೆ. ಬಹಳ ಬುದ್ಧಿವಂತಿಕೆಯಿಂದ ಕೇವಲ 40 ಲಕ್ಷ ರೂಪಾಯಿ ಕೊರತೆ ತೋರಿಸುವ ಬಜೆಟ್ ಮಂಡಿಸಿ ದ್ದಾರೆ. ನಾನು ಒಂದು ಮಾತು ಹೇಳಲು ಬಯಸುತ್ತೇನೆ. ನಮ್ಮ ರಾಜ್ಯದ ಹಣದ ಚೀಲ ಹರಿದು ಹೋಗಿದೆ. ಈ ಹರಿದು ಹೋದ ಹಣದ ಚೀಲದ ಕತ್ತನ್ನು ಗಟ್ಟಿಯಾಗಿ ಕಟ್ಟಿ ಅರ್ಥಸಚಿವರು ಹಿಡಿದು ಕೊಂಡಿದ್ದಾರೆ. ಈ ವರ್ಷದ ಬಜೆಟ್ಟಿನಲ್ಲಿ ಹೊಸ ಟ್ಯಾಕ್ಸ್ ಹಾಕುವುದಕ್ಕೆ ಮನಸ್ಸು ಮಾಡಿಲ್ಲ. ಬಜೆಟ್ಟಿನಲ್ಲಿ ಹೊಸ ಟ್ಯಾಕ್ಸ್ ಹಾಕದೇ ಇದ್ದರೂ ಕೂಡ ಇವತ್ತಿನ ದಿವಸ ಲ್ಯಾಂಡ್ ರೆವೆನ್ಯೂ ಟ್ಯಾಕ್ಸ್ ಹೊರ ಜನರಮೇಲೆ ಬಿದ್ದಿದೆ. ಕಮರ್ಷಿಯಲ್ ಟ್ಯಾಕ್ಸ್ ಹೆಚ್ಚಾಗುತ್ತಲೇ ನಡೆದಿದೆ. ಜನರಮೇಲೆ ತೆರಿಗೆ ಹಾಕಿದರೆ ಭಯ ಬರಬಹುದೆಂದು ನೂತನ ಪದ್ಧತಿಯಿಂದ ಜನರಿಗೆ ತಿಳಿಯದ ಹಾಗೆ ತೆರಿಗೆ ಹಾಕಿ 10-15 ಕೋಟಿ ರೂಪಾಯಿ ವಸೂಲ್ಮಾಡುವುದಕ್ಕೆ ಪ್ರಯತ್ನ ನಡೆಸಿದ್ದೀರಿ. ಶ್ರೀಮಾನ್ ವೆಂಕಟೇಗೌಡರು ಹೇಳಿದ ಹಾಗೆ ಇದು ಟ್ಯಾಕ್ಸ್ ಫ್ರೀ ಬಜೆಟ್ ಅಲ್ಲ. ಕಂಠ ತುಂಬುವವರೆಗೆ ಹೊರೆ ಹೇರಿದ್ದೀರಿ. ಉದ್ದಕ್ಕೆ ಗಾತ್ರ ಬೆಳೆದಿದೆ. ಬಹಳ ಬುದ್ಧಿವಂತಿಕೆ ಉಪಯೋಗಿಸಿ, ಹೊಸದಾಗಿ ತೆರಿಗೆ ಹಾಕಿಲ್ಲ ಇರತಕ್ಕಂಥ ತೆರಿಗೆಯನ್ನು ಯಾರೂ ತಪ್ಪಿಸಿಕೊಳ್ಳಲು ಬಾರದಹಾಗೆ ಮಾಡಿದ್ದೀರಿ. ಈ ರೀತಿ ಹೊಸದಾಗಿ ತೆರಿಗೆ ಹಾಕದೇ ಇರುವ ಮೂಲಕ ನಿಮಗೆ ಶಹಬಾಸ್‌ಗಿರಿ ಕೊಡಬೇಕಾಗುತ್ತದೆ. ಆದರೆ ದೇಶದಲ್ಲಿ ಇಲ್ಲಿಯವರೆಗೆ ಆದ ಅಭಿವೃದ್ಧಿ ಕಾರ್ಯಗಳು ಏನೇನು ? ಎಷ್ಟು ಹೊಸ ಕೈಗಾರಿಕೆ ಗಳನ್ನು ತಂದಿರಿ ? ಉದ್ಯಮಗಳು ಬೆಳೆದಿವೆಯೇ ? ದವಸಧಾನ್ಯ ಹೆಚ್ಚಾಗಿ ಬೆಳೆದು ಉತ್ಪಾದನೆ ಜಾಸ್ತಿಯಾಗಿದೆಯೆ ? ಸಾವಿರಾರು ಕೆರೆಗಳ ದುರಸ್ತಿ ಕೆಲಸಕ್ಕಾಗಿ ಕೋಟಿಗಟ್ಟಲೆ ಹಣ ಬೇಕಾಗಿದೆ ಎಂದು ದೊಡ್ಡದೊಡ್ಡದಾಗಿ ಮಾತನಾಡುತ್ತೀರಿ. ಪಂಪ್‌ಸೆಟ್ಟಿಗಾಗಿ 2 ಕೋಟಿ ಖರ್ಚು ಮಾಡುತ್ತೇವೆ ಎಂದು ಉದ್ದುದ್ದಾಗಿ ಭಾಷಣ ಮಾಡಿ ದೊಡ್ಡದೊಡ್ಡ ಪದ ಉಪಯೋಗಿಸಿ ಹೇಳುತ್ತೀರಿ. ಪಂಪ್ ಸೆಟ್ಟಿಗಾಗಿ ಮಾರ್ಚ್ ತಿಂಗಳಿನಲ್ಲಿ ಕೊಡತಕ್ಕ ಹಣ ತೆಗೆದುಕೊಂಡು, ಪಂಪ್‌ಸೆಟ್ ಕೊಂಡುಕೊಂಡು ಬಾವಿಗೆ ಹಾಕಿ, ಆ ನೀರಿನಿಂದ ಫಸಲು ಬಂದರೆ ಅದು ಈ ವರ್ಷ ಲೆಕ್ಕಕ್ಕೆ ಬರದೆ ಅದು ಮುಂದಿನ ವರ್ಷವೋ ಅಥವಾ 1965-66 ನೇ ಸಾಲಿನಲ್ಲಿಯೇ ಅದು ಲೆಕ್ಕಕ್ಕೆ ಸಿಕ್ಕುವುದು. ಈ ರೀತಿ ಲೆಕ್ಕ ಪತ್ರ ಒಪ್ಪಿಸುವುದು ಬೇಡ. ಸರಿಯಾದ ರೀತಿಯಲ್ಲಿ ಲೆಕ್ಕ ಬರೆದಿಲ್ಲ. ಈ ರೀತಿ ಮಾಡಿದರೆ ದೇಶದ ಪ್ರಗತಿ ಹೇಗೆ ಆಗುತ್ತದೆ ? ಅಂಕಿ ಅಂಶಗಳಿಂದ ಜನತೆಯನ್ನು ಮರಳು ಮಾಡುವ ಅನ್ಯಾಯ ಮಾಡಬೇಡಿ. ಈ ಬಜೆಟ್ಟು ಆಶಾದಾಯಕವಾಗಿಲ್ಲವೆಂದು ಹಣಕಾಸಿನ ಮಂತ್ರಿಗಳಿಗೆ ತಮ್ಮ ಮೂಲಕ ಹೇಳುತ್ತೇನೆ. ಒಂದು ವಿಲೇಜ್ ಪಂಚಾಯತಿಯ ಬಜೆಟ್ಟು ತಯಾರು ಮಾಡುವಾಗ್ಗೆ ಹತ್ತಿಪ್ಪತ್ತು ಐಟೆಮ್ಸ್ ಇಟ್ಟುಕೊಂಡು ಲೆಕ್ಕ ಹಾಕುತ್ತಾರೆ. ಈ ರಾಜ್ಯದ ಬಜೆಟ್ಟಿನಲ್ಲಿ 60-70 ಐಟೆಮ್ಸ್ ಇವೆ. ಅವುಗಳಿಗೆ ಹಣ ಹಂಚಿದ್ದಾರೆ. ಆದರೆ ಯಾವದೇ ಹೊಸ ಬೆಳಕು ತೋರಿಸಿಲ್ಲ. ಇದರಲ್ಲಿ ಯಾವ ಹೊಸ ಬೆಳಕು ಇಲ್ಲ. ನಮ್ಮ ಇಂದಿನ ಹಣಕಾಸಿನ ಮಂತ್ರಿಗಳು ಈ ಮೊದಲು ನಾಲ್ಕು ವರ್ಷ ಮುಖ್ಯಮಂತ್ರಿಗಳಾಗಿದ್ದರು. ಹಿಂದಿನ ಹಣಕಾಸಿನ ಮಂತ್ರಿಗಳಾಗಿದ್ದ ಶ್ರೀಮಾನ್ ಮರಿಯಪ್ಪ ನವರನ್ನು ನೀವು ಮೀರಿಸುತ್ತೀರಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕೆಲವು ಐಟೆಮ್ಸ್ ಬಗ್ಗೆ ಡೀಟೇಲ್ಸ್ ಕೊಟ್ಟಿಲ್ಲ. ಬಾಕಿ ವಸೂಲ್ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಇನ್ನೂ ಬರಬೇಕಾದ ಹಣದ ವಿವರ ಕೊಟ್ಟಿಲ್ಲ. ಈ ವಿಚಾರವನ್ನು ಡಿಮಾಂಡ್ಸ್ ಚರ್ಚೆಗೆ ಬಂದಾಗ್ಗೆ ಹೇಳುತ್ತೇನೆ. ಒಟ್ಟಿಗೆ ಎಲ್ಲ ಅಂಕಿ ಅಂಶಗಳನ್ನು ನಮ್ಮ ಮುಂದೆ ಇಟ್ಟು ಸಭೆಗೆ ತಿಳಿಸ ಬೇಕಾದುದು ಸರಕಾರದ ಕರ್ತವ್ಯ. ನಮ್ಮಲ್ಲಿ ಹಣದ ಕೊರತೆಯುಂಟಾದಾಗ್ಗೆ ರಿಜರ್ವ್ ಬ್ಯಾಂಕಿ ನಿಂದ ಎರಡು ಕೋಟಿ ರೂಪಾಯಿ over draw ಮಾಡಿದ್ದಾರೆ. ಇದು ಏನು ತೋರಿಸುತ್ತದೆ ಎಂದರೆ ನಮ್ಮ ಆಸ್ತಿಪಾಸ್ತಿ ಭದ್ರವಾಗಿಲ್ಲ. ಆದಾಯ ಬಾರದೇ ಇರುವ ಬಾಬಿಗೆ ಹಣ ಖರ್ಚು ಮಾಡಿದ್ದೀರಿ

ಎಂದು ಕಂಡುಬರುತ್ತದೆ. ಆದರೆ ನಮ್ಮ ಆರ್ಥಿಕ ಸ್ಥಿತಿ ಸುಭದ್ರವಾಗುವ ರೀತಿಯಲ್ಲಿ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ವ್ಯವಸಾಯ ಇಲಾಖೆ. ವ್ಯವಸಾಯ ಇಲಾಖೆಯಲ್ಲಿ ಬಹಳ ಬೆಳೆದುಬಿಟ್ಟಿದ್ದಾರೆ ರಾಜ್ಯದಲ್ಲಿ ಖಣಜ ತುಂಬಿಹೋಗಿದೆ ಎಂದು ಹೇಳಿದ್ದಾರೆ. ಶ್ರೀಮಾನ್ ಗೋಪಾಲಗೌಡರು ಇದನ್ನು ಚೆನ್ನಾಗಿ ವಿವರಿಸಿದ್ದಾರೆ. ಪ್ರಕೃತಿ ವಿಕೋಪಕ್ಕೆ ಗುರಿಯಾಗಿ ನಷ್ಟ ತನ್ನಿಂದ ತಾನೇ ಆಯಿತು ಎನ್ನುವ ದೃಷ್ಟಿಯಿಂದ ಹೇಳುತ್ತೀರಿ. ಆದರೆ ಅದಕ್ಕೆ ಉತ್ತರ ಸರಿಯಾಗಿ ಕೊಟ್ಟಿಲ್ಲ. ಆಹಾರ ಧಾನ್ಯಗಳ ಬೆಲೆ ಜಾಸ್ತಿಯಾಗಿದೆ. ಹೊರಗಡೆ ಬೆಲೆ ಕಡಿಮೆ ಇದೆ. ದೇಶದಲ್ಲಿ ಎಷ್ಟು ಟನ್ ಆಹಾರ ಧಾನ್ಯ ಬೆಳೆದಿದ್ದಾರೆ? ಆಹಾರ ಧಾನ್ಯದ ವಿಚಾರದಲ್ಲಿ ಉದಾಸೀನ ಭಾವನೆ ಕಳೆದಿದ್ದೀರಿ. ನಾವು ಏನೋ ಹೇಳುತ್ತೇವೆ ಎನ್ನುವ ಮನೋಭಾವನೆ ಇರುವುದು ಬೇಡ. ಉದಾತ್ ಭಾವನೆಯಿಂದ ಕೆಲಸ ಮಾಡಬೇಕು. ಪಂಪ್‌ಸೆಟ್ ಕೊಡುತ್ತೇವೆ ಭತ್ತ ಬೆಳೆಯುತ್ತಾರೆ ಎಂದು ಹೇಳುವುದು ಸರಿಯಲ್ಲ. ಹಾವಾಡಿಗನು ಬಿಟ್ಟಿ ಮುಟ್ಟಿ ಮಾವಿನಕಾಯಿ ಗಿಡ ಬೆಳೆಯುತ್ತದೆ, ನೋಡಬೇಕು ಎಂದು ಹೇಳಿ ಜನರಿಂದ ದುಡ್ಡು ಕಿತ್ತುಕೊಂಡು ಆಮೇಲೆ ಒಂದು ಮಾವಿನ ಗಿಡ ತೋರಿಸಿ, ಆ ನಂತರ ಎಲ್ಲವೂ ಇಲ್ಲದ ಹಾಗೆ ಮಾಡಿ ಬುಟ್ಟಿ ಎತ್ತಿಕೊಂಡು ಎದ್ದು ಹೋಗುವ ಹಾಗೆ ಸರಕಾರ ಮಾಡಬಾರದು. ಸರಕಾರ ಕೊಡುವ ಹಣ ಸರಿಯಾಗಿ ಖರ್ಚಾಗುತ್ತಿದೆಯೆ? ರೈತನು ಹಣ ಪಡೆದು ಬಾವಿ ತೆಗೆದಿದ್ದಾನೆಯೆ? ಯಾರಾದರೂ ಇದನ್ನು ನೋಡುತ್ತಾರೆಯೆ? ಜನಗಳಿಂದ ತೆರಿಗೆ ರೂಪದಲ್ಲಿ ತೆಗೆದುಕೊಂಡ ಪ್ರತಿಯೊಂದು ಕಾಸನ್ನು ಸರಿಯಾಗಿ ಖರ್ಚು ಮಾಡಬೇಕು. ಸರಕಾರದ ಹಣವನ್ನು ರಾಜಕೀಯ ಗೆಲುವಿಗೋಸ್ಕರ ಖರ್ಚು ಮಾಡಬಾರದು ಎಂದು ಹೇಳುತ್ತೇನೆ. ಇನ್ನು ವ್ಯವಸಾಯ ಖಾತೆ.

ವ್ಯವಸಾಯ ಖಾತೆಯಲ್ಲಿ ಏನು ಬೆಳೆಯುತ್ತಾರಪ್ಪ ಅಂದರೆ ಮುಸುಕಿನ ಜೋಳ, ಭತ್ತ, ರಾಗಿ ಅಲ್ಲ, ಆಲೂಗಡ್ಡೆ ಅಲ್ಲ, ಗೋಧಿ ಅಲ್ಲ, ಬರೀ ರಾಜಕೀಯ ಬೆಳೆಯುತ್ತಾ ಇದ್ದಾರೆ. ಸೆಕ್ರೆಟರಿ ಹೇಳಿದ್ದು ಡೈರೆಕ್ಟರಿಗೆ ಹಿಡಿಯುವುದಿಲ್ಲ; ಡೈರೆಕ್ಟರು ಹೇಳಿದ್ದು ಮಂತ್ರಿಗೆ ಹಿಡಿಯುವುದಿಲ್ಲ, ಒಬ್ಬ ಮಂತ್ರಿ ಹೇಳಿದ್ದು ಇನ್ನೊಬ್ಬ ಮಂತ್ರಿಗೆ ಹಿಡಿಯುವುದಿಲ್ಲ, ಬರೀ ರಾಜಕೀಯ, ಒಕ್ಕಲಿಗನ್ನ ಬಲಿ ಹೊಡೆಯೋಣವೇ, ಬ್ರಾಹ್ಮಣನ್ನ ಬಲಿ ಹೊಡಿಯೋಣವೇ, ಲಿಂಗಾಯಿತನ್ನ ಬಲಿ ಹೊಡಿಯೋಣವೇ— ಈ ರಾಜಕೀಯ ಬೆಳೆಯುತ್ತಾ ಇದೆ. ಆಹಾರ ಉತ್ಪನ್ನ ಜಾಸ್ತಿಯಾಗಿಲ್ಲ. ಅದಕ್ಕೋಸ್ಕರವಾಗಿ ವ್ಯವಸಾಯ ಖಾತೆ ಇದೆಯೇ ಎಂದು ಹೇಳುವುದಕ್ಕೆ ನನಗಾದರೂ ನಾಚಿಕೆಯಾಗುತ್ತದೆ. ನೀವು ಹೇಳುತ್ತೀರಾ: contour bunding, soil conservation, improved seeds, agricultural implement ಈ ಎಲ್ಲಾ ಸೌಕರ್ಯ ಕೊಟ್ಟಿದ್ದೇವೆಂದು, ತಮ್ಮ ಭಾಷಣ ಕೇಳಿಬಿಟ್ಟರೆ ಹಾಗೆಯೇ ಮೈಮರೆತು ಬಿಡುತ್ತೇವೆ. ಆದರೆ ಮೈಸೂರು ರಾಜ್ಯದಲ್ಲಿ ಆಗಿರುವ ಆ ಹೊರೋತ್ಪನ್ನವನ್ನು ಅಕ್ಕಪಕ್ಕದಲ್ಲಿರುವ ರಾಜ್ಯಗಳು ಬೆಳೆದಿರತಕ್ಕಂಥವರ ಜೊತೆಗೆ ಹೋಲಸಿದರೆ ನಮ್ಮದು ಕಡಿಮೆ ಇದಕ್ಕೋಸ್ಕರ ರಾಜ್ಯದಲ್ಲಿ ಆಹಾರ ಹೆಚ್ಚು ಬೆಳೆಯಲು ತಾವು ಕೈಗೊಂಡಿರುವ ಕ್ರಮ ಪರಿಪೂರ್ಣವಾಗಿಲ್ಲ, ಹೊಗಳುವಷ್ಟು ಏನೂ ಇಲ್ಲ.

ಇನ್ನು Education Department ತೆಗೆದು ಕೊಳ್ಳುತ್ತೇನೆ. ಈ ದಿಸೆಯಲ್ಲಿ ಎಷ್ಟು ದೂರ ಹೋಗಿದ್ದೀರೆಂದರೆ, ಎಲ್ಲಾ ಮಕ್ಕಳನ್ನೂ ಬುದ್ಧಿವಂತರನ್ನಾಗಿ ಮಾಡುತ್ತೇವೆ, ನಿರಕ್ಷರಕುಕ್ಷಿಗಳನ್ನು ವಿದ್ಯಾವಂತರನ್ನಾಗಿ ಮಾಡುತ್ತೇವೆ, ಈ ರಾಜ್ಯವನ್ನು ನಾಗರಿಕ ರಾಜ್ಯ ಮಾಡುತ್ತೇವೆ, ಇಲ್ಲಿನ ಮಕ್ಕಳನ್ನು ಬದುಕು ಬಾಳುವಂತೆ ಮಾಡುತ್ತೇವೆಂದು ನಿಜವಾಗಿ ಕನಸು ಕಾಣುತ್ತಾ ಇದ್ದೀರಿ! ಎಷ್ಟು ದೂರ ನಿಮ್ಮ ಯೋಜನೆ ಹೋಗಿದೆಯೆಂದರೆ, ವಿದ್ಯೆ ಡಿಟೀರಿಯೊರೇಟ್ ಆಗಿದೆ. 4·20 ಲಕ್ಷರೂಪಾಯಿ ಹಣ ಖರ್ಚುಮಾಡಿ 8 ಲಕ್ಷ ಪುಸ್ತಕಗಳನ್ನು ಪ್ರೈಮರಿ ಸ್ಕೂಲು ಮಕ್ಕಳಿಗೆ ಹಂಚುತ್ತೇವೆಂದು ಒಂದು ಸ್ಟೇಟ್‌ಮೆಂಟ್ ವಿದ್ಯಾ ಮಂತ್ರಿಗಳು ಮಾಡಿದರು. ಪ್ರೈಮರಿ ಎರಡನೇ ತರಗತಿಗೆ ಬರತಕ್ಕಂಥ ಈ ಟೆಕ್ಸ್ಟ್ ಬುಕ್ಕಿನಲ್ಲಿ ರಾಷ್ಟ್ರಧ್ವಜಕ್ಕೆ ಅಪಮಾನ ಮಾಡತಕ್ಕಂಥ ಒಂದು ಮಾರ್ಗವನ್ನು ಅನುಸರಿಸಿದ್ದಾರೆ. ಇದು ನ್ಯಾಯವೇ? ರಾಷ್ಟ್ರಧ್ವಜಕ್ಕೆ ಅಪಮಾನಮಾಡುವವರು ಇಲ್ಲಿ ಇರುವುದಕ್ಕೆ ಲಾಯಕ್ ಇಲ್ಲ, ನೀವು ರಾಷ್ಟ್ರದ್ರೋಹಿಯಾಗಿರುತ್ತೀರಿ. ಮೂರು ಬಣ್ಣದ, ತ್ರಿವರ್ಣದ ಧ್ವಜದ ಕೆಳಗೆ 40 ಕೋಟಿ ಈ ದೇಶದ ಜನಗಳು ಒಂದಾಗಿದ್ದರೆ ಅದಕ್ಕೆ ಇಂಥ ರಾಜ್ಯದಲ್ಲಿ ಏನು ಮಾಡಿದ್ದಾರೆ? ವಿವಾದಕ್ಕೆ ಒಳಗಾಗಿರತಕ್ಕ ವಿದ್ಯಾಮಂತ್ರಿಗಳಿಗೆ ತೋರಿಸಿ ಕೊಡುತ್ತೇನೆ.. ಇದು ರಾಷ್ಟ್ರಧ್ವಜ. ಈ ರಾಷ್ಟ್ರಧ್ವಜವನ್ನು ನಮ್ಮ ಮಕ್ಕಳು ತಿಳಿದುಕೊಳ್ಳಬೇಕೇ, ಇದು ಧ್ವಜ: ಈ ಪದ್ಯ ಈ ಪುಸ್ತಕದಲ್ಲಿ ಬಂದಿದೆ. ರಾಷ್ಟ್ರಧ್ವಜದಲ್ಲಿ ಚರಕವಿರುವುದೆಂದು ಬರೆದಿರುವುದರಿಂದ ಮಕ್ಕಳ ಮನಸ್ಸನ್ನು ಕೆಡಿಸುತ್ತೀರ. ಈ ಪುಸ್ತಕವನ್ನು ಓದಿ ಆಮೇಲೆ ನಿಮಗೆ ಕಳುಹಿಸುತ್ತೇನೆ. ಈ ಪದ್ಯವನ್ನು ಓದುತ್ತೇವೆ. ಗಾಂಧಿ ಎತ್ತಿ ಹಿಡಿದ ಧ್ವಜವೇ? "ಏರುತಿಹುದು।ಹಾರುತಿಹುದು।ನೋಡು ನಮ್ಮ ಬಾವುಟ॥ಕೇಸರಿ ಬಿಳಿ।ಹಸುರು ಮೂರು।ಬಣ್ಣ, ನಡುವೆ ಚಕ್ರವು॥ ಎಂದಿದೆ.

Mr. SPEAKER.—If you know by heart, you repeat it; otherwise give a gist of it.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಲ್ಲಾ ವಿಷಯ ಬೈಹಾರ್ಟ್‌ಇರುವುದಕ್ಕೆ ನಾನು ಸರ್ವಜ್ಞನಲ್ಲ. ಸರ್ವಜ್ಞನಾಗಿದ್ದರೆ ಕಾಡಿನಲ್ಲಿರಬೇಕಾಗಿತ್ತು; ಸರ್ವಜ್ಞನಲ್ಲದ್ದರಿಂದ ಈ ಸಭೆಗೆ ಬಂದಿದ್ದೇನೆ.

Mr. SPEAKER.—Your memory is much better than you think, but I cannot permit your reading.

Sri C. J. MUCKANNAPPA.—This is a book prescribed for Primary Schools.

Mr. SPEAKER.—May be. Develop the point but not read.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತ್ರಿವರ್ಣ ಧ್ವಜಕ್ಕೆ ಅಪಮಾನ ಮಾಡಿದ್ದಾರೆ. ದೇಶಪ್ರೇಮವಿರುವವರು...

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಮೇಲೆ "ಸತ್ಯಶಾಂತಿ|ತ್ಯಾಗಮೂರ್ತಿ|ಗಾಂಧಿ ಹಿಡಿದ|ಚರಕವು" ಎಂದಿದೆ. ಒಗ್ಗಟ್ಟಿನಿಂದಿರುವುದಕ್ಕೆ ಈ ಪುಸ್ತಕ ಮಕ್ಕಳಿಗೆ ಕರೆಕೊಡುತ್ತದೆ. ಓದುತ್ತೇನೆ ಚರಕ ಇರುವುದು ರಾಷ್ಟ್ರಧ್ವಜವೇ? ಇದನ್ನು 21 ಪದ್ಧತಿಗಳಲ್ಲಿ ಯಾರೂ ಕನಸು ಮನಸಿನಲ್ಲಿಯೂ ನೋಡಲಿಲ್ಲವೇ? Text-book Committee ಯಲ್ಲಿ ಪರಿಣತರು ವ್ಯವಹಾರಮಾಡುವುದು, Director, ಇನ್ನೊಬ್ಬ ಡೈರೆಕ್ಟರು, Joint Director, ಅದರ ಮೇಲೆ ತಾವು, ಒಬ್ಬ ಡೆಪ್ಯೂಟಿ ಮಿನಿಸ್ಟರು ಇಷ್ಟು ಎಲ್ಲಾ ಇದ್ದಾರೆ. ಇಷ್ಟು ಎಲ್ಲಾ ಇದ್ದರೂ ಮಕ್ಕಳ ತಲೆಯಲ್ಲಿ ವಿಷ ತುಂಬುತ್ತಾ ಇದ್ದೀರಿ, ನಮ್ಮ ರಾಷ್ಟ್ರಧ್ವಜವನ್ನು ಅವರು ತಿಳಿದು ಕೊಳ್ಳುವುದಕ್ಕೆ ತಪ್ಪುದಾರಿಗೆ ಎಳೆಯುತ್ತಾ ಇದ್ದೀರಲ್ಲ. ಇಂಥದೂ ಒಂದು ಪಾಠವಿದೆಯಲ್ಲಾ ಈ ಪುಸ್ತಕದಲ್ಲಿ. ಇಂಥ ಪುಸ್ತಕಗಳನ್ನು ತಾವು 8 ಲಕ್ಷ, 10 ಲಕ್ಷ ಗಟ್ಟಿ ಮಾಡಿ, ಮಾತನಾಡಿದ್ದೀರಲ್ಲಾ! ಈ text bookನ್ನು ಪ್ರಿಂಟ್ ಮಾಡಬೇಡಿ; ತೆಗಿಸಿ, ಅದರಲ್ಲಿರುವ ಲೋಪದೋಷಗಳನ್ನು ಸರಿಮಾಡಿ.

ಶ್ರೀ ಎಸ್. ಆರ್. ಕಂಠಿ.—ಇಷ್ಟು ಹೇಳಿದರೆ ಸಾಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಮಗೆ ಯಾವುದು ಸರಿ; ಯಾವುದು ತಪ್ಪು?

ಈ ಕೊಲೆಜಿಯೇಟ್ ಎಜುಕೇಷನ್ ಬಗ್ಗೆ ಲಕ್ಷ್ಮಣಸ್ವಾಮಿ ಮುದಲಿಯಾರ್ ಕಮಿಟಿ ಮಾಡಿದರು. ಯೂನಿವರ್ಸಿಟಿ ಹೇಗೆ ನಡೆಯಬೇಕು, ಕಾಲೇಜುಗಳು ಹೇಗೆ ನಡೆಯಬೇಕು, ಕಾಲೇಜುಗಳ ಆಡಳಿತ ಹೇಗೆ ಇರಬೇಕು ಎಂಬ ಬಗ್ಗೆ ವರದಿಮಾಡುವುದಕ್ಕೆ ಮಾಡಿದರು. ಅವರು ಒಬ್ಬ ಕೊಲೆಜಿಯೇಟ್ ಡೈರೆಕ್ಟರ್ ಇರಬೇಕೆಂದು ಈ ಸಮಿತಿ ವರದಿಯಲ್ಲಿ ಹೇಳಿವೆಯೋ ಈ ರಿಪೋರ್ಟನ್ನು ತಮಗೆ ಬೇಕಾದಾಗ ಉಪಯೋಗಿಸಿ ಕೊಳ್ಳುತ್ತಾರೆ, ಬೇಡವಾದರೆ ಇದರಕಡೆ ನೋಡುವುದಿಲ್ಲ. Director of Collagiate Education ಜೊತೆಗೆ, Advisory Committee to be set up ಅಂತ ಹೇಳಿದ್ದಾರೆ. ನನ್ನ ಸ್ನೇಹಿತರಾದ ಶ್ರೀ ಜೆ. ವೀರಪ್ಪನವರು ಒಂದು ಕಮಿಟಿ ಮಾಡಬೇಕು, ಅಡ್ವೈಸರಿ ಬಾಡಿ ಇರಬೇಕು, ಅಪಾಯಿಂಟ್‌ಮೆಂಟ್ ಟ್ರಾನ್ಸ್‌ಫರ್, ಮತ್ತೊಂದು ಮಗದೊಂದು ನಡೆಯಬೇಕಾಗುತ್ತದೆ. ಅದಕ್ಕೋಸ್ಕರ ಮಾಡಿ ಅಂತ ಹೇಳಿದರು. ಅದಕ್ಕೆ ಈಗಿನ ವಿದ್ಯಾ ಮಂತ್ರಿಗಳು, ಅವತ್ತಿನ ಮುಖ್ಯ ಮಂತ್ರಿಗಳು "ಹೌದು ಹೌದು, ನಾನು ಯೋಚನೆಮಾಡುತ್ತೇನೆ" ಎಂದು ಹೇಳಿದರು.

ಶ್ರೀ ಎಸ್. ಆರ್. ಕಂಠಿ.—ಉತ್ತರವಾಗಿ ನಾನು ಹೇಳುತ್ತಾ ಇದ್ದೆ.

Sri C. J. MUCKANNAPPA.—I am not yielding to him, Sir. He did not yield to me yesterday.

ಸ್ವಾಮಿ, 18 ಕೋಟಿ ರೂಪಾಯಿ ಹಣ ಈ ವಿದ್ಯಾಖಾತೆಗೆ ಕೊಟ್ಟಿರುತ್ತೀರ. ಯಾರ ಕೈಯಲ್ಲಿ ಕೊಟ್ಟಿದ್ದೀರಿ ಹಣ; ಎಂಥವರ ಕೈಯಲ್ಲಿ! ಜಂಟಿ ಜವಾಬ್ದಾರಿ ಇರುವ ಸರ್ಕಾರ: 15 ಮಂತ್ರಿಗಳು, 10 ಜನ ಡೆಪ್ಯೂಟಿ ಮಿನಿಸ್ಟರುಗಳು ಜವಾಬ್ದಾರರಾಗಿರುವಾಗ ಇವತ್ತಿನ ದಿವಸ ಸ್ವೇಚ್ಛೆಯಾಗಿ, ತನಗೆ ಇಷ್ಟ ಬಂದಂತೆ ಅಧಿಕಾರ ಮಾಡುವಂಥ ವಿದ್ಯಾ ಮಂತ್ರಿಗಳು ಕೊಲೆಜಿಯೇಟ್ ಎಜುಕೇಷನ್ ಡೈರೆಕ್ಟರರಾಗಿ ಒಬ್ಬರನ್ನು ಟೆಂಪೊರರಿಯಾಗಿಟ್ಟುಕೊಂಡು ದರಬಾರು ನಡೆಸುತ್ತಿದ್ದಾರೆ. ಹೀಗಾದರೆ ಇನ್ನು ಕೊಲೇಜಿಯೇಟ್ ಎಜುಕೇಷನ್ ಎಷ್ಟರಮಟ್ಟಿಗೆ ಬೆಳೆಯಬಹುದು? ಶ್ರೀ ಗಾಂಜಿ ವೀರಪ್ಪನವರು ಮೈಸೂರು ರಾಜ್ಯದಲ್ಲಿ ಮೈಸೂರು ಯೂನಿವರ್ಸಿಟಿ ಉಪ ಕುಲಪತಿ ಸ್ಥಾನಕ್ಕೆ ಯಾರೂ ಅರ್ಹರಾದ ಜನರಿಲ್ಲವೇ, ಹೊರಗಿನಿಂದ ಬೇರೆಯವರನ್ನು ಏಕೆ ತರಬೇಕೆಂದು ಪ್ರಶ್ನಿಸಿದರು. ಈ

ಸಂದರ್ಭದಲ್ಲಿ I must give a glowing compliment to the Chief Minister. ಮೈಸೂರು ರಾಜ್ಯದಲ್ಲಿ ಮೈಸೂರು ಹೈಕೋರ್ಟು ಹೀನ ಸ್ಥಿತಿಯಲ್ಲಿದ್ದಾಗ ಬೇರೆ ಒಂದು ರಾಜ್ಯದ ನ್ಯಾಯಾಧೀಶರನ್ನು ಶ್ರೇಷ್ಠ ನ್ಯಾಯಾಧೀಶರ ಸ್ಥಾನಕ್ಕೆ ತಂದರು ; ಶ್ರೀ ದಾಸ್‌ಗುಪ್ತ ಅವರನ್ನು ಶ್ರೇಷ್ಠ ನ್ಯಾಯಾಧೀಶ ಸ್ಥಾನಕ್ಕೆ ಕರೆಸಿದರು. ಶ್ರೀ ದಾಸ್‌ಗುಪ್ತರು ಮೈಸೂರು ಶ್ರೇಷ್ಠ ನ್ಯಾಯ ಸ್ಥಾನವನ್ನು ಗೇರ್‌ಅಪ್ ಮಾಡಿದ್ದಾರೆ; ದುಡಿದು, ಅದನ್ನು ಸ್ವಚ್ಛಮಾಡಿ, ಇವತ್ತು ನಮಗೆ ನಿಮಗೆ ಕೊಟ್ಟರು. ಈ ಜಾತಿ ಜಂಜಾಟ ಕಾಲದಲ್ಲಿ ಲಿಂಗಾಯಿತ, ಬ್ರಾಹ್ಮಣ, ಒಕ್ಕಲಿಗ ಎಂಬ ಕೂಗಿನಲ್ಲಿ ಸಿಕ್ಕಿರತಕ್ಕಂಥ ವಿಶ್ವವಿದ್ಯಾನಿಲಯಕ್ಕೆ ಯಾರಾದರೂ ಒಬ್ಬ ಅರ್ಹರನ್ನು ಹೊರಗಡೆಯಿಂದ ಕರೆದುಕೊಂಡು ಬಂದು ಅದನ್ನು ಕ್ಲೀನ್ ಮಾಡಿಸಬೇಕೆಂಬ ಒಳ್ಳೆಯ ತೀರ್ಮಾನವನ್ನು ಜಾಗರೂಕತೆ ಯಿಂದ ಮುಖ್ಯ ಮಂತ್ರಿಗಳು ತೆಗೆದು ಕೊಂಡಿದ್ದಾರೆ. ಇವರ ತೀರ್ಮಾನವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲೇಬೇಕು. ನನ್ನ ಸ್ನೇಹಿತರಾದಂಥ ಶ್ರೀಮಾನ್ ಗಾಂಜಿ ವೀರಪ್ಪನವರಿಗೆ ಹೊರಗಿನವ ರನ್ನು ತರುವ ತೀರ್ಮಾನಕ್ಕೆ ಅಡ್ಡಿ ಬರಬೇಡಿ ಎಂದು ಹೇಳುತ್ತೇನೆ. ಚೀಫ್ ಮಿನಿಸ್ಟರು ಸರಿಯಾದ ತೀರ್ಮಾನವನ್ನು ತೆಗೆದುಕೊಂಡಿದ್ದಾರೆಂದು ಹೇಳುತ್ತೇನೆ.

ಯಾವುದಾದರೂ ರಾಜ್ಯದಲ್ಲಿ Secretary, Deputy Secretary, under Secretary, Superintendent, Manager. Head Clerk ಕೆಲಸಗಳನ್ನು ಒಬ್ಬರೇ ನಡೆಸುತ್ತಾರೆಯೋ ? ಆದರೆ Education Department ವಿಚಿತ್ರ. ಇಲ್ಲಿ Director of technical Education, ಅವರು, ಅವರೇ Chief Engineer for Major Irrigation. ಅವರೇ Technical Education Director. ಅವರೇ major irrigation ಗಳಾದ upper Krishna, Ghataprabha Malaprabha ನೋಡುತ್ತಾರೆ. ತುಂಕೂರು ಪಾಲಿಟೆಕ್ನಿಕ್‌ನಲ್ಲಿ ಅಸಾಧಾರಣ ಕೆಲಸ ನಡೆದು ಹೋಗದೆಯೆಂದರೆ enquiry ಮಾಡುತ್ತಾರೆ. ಇದು ಏನು ತೋರಿಸುತ್ತದೆನ್ನುವುದನ್ನು ನನ್ನ ಸ್ನೇಹಿತರಾದ ಗಾಂಜಿ ವೀರಪ್ಪನವರು ಅರ್ಥಮಾಡಿಕೊಳ್ಳಲಿ. ಯಾರಿಗೇ ಈ ಅಪಾಯಿಂಟ್ ಮಾಡಿ ಸುವುದಕ್ಕೋಸ್ಕರ, ಈ ಜಾಗ ಕಾದಿಡುವುದಕ್ಕೋಸ್ಕರ ವ್ಯವಹಾರ ನಡೆದಿದ್ದರೆ, ಶ್ರೀ ನಿಜಲಿಂಗಪ್ಪ ನವರು ಉಪ ಕುಲಪತಿ ಸ್ಥಾನದ ನೇಮಕದಲ್ಲಿ ಹೋಗುತ್ತಿರುವ ದಾರಿ ಸರಿಯಲ್ಲವೇ. ಈ ಟೆಕ್ನಿಕಲ್ ಎಜುಕೇಷನ್ ಡೈರೆಕ್ಟರ ನೇಮಕದಲ್ಲಿ ಜಾತಿ ಜಂಜಾಟ ಇಲ್ಲವೇನು ? ಕುಲಗೋತ್ರ ವ್ಯಾಪಾರವಿಲ್ಲ ವೇನು ? ಈ ಡೈರೆಕ್ಟರ ಸ್ಥಾನವನ್ನು ಅರ್ಹರಲ್ಲದವರಿಗೆ ಕೊಟ್ಟಿರುತ್ತಾರೆ. ಅಮೇರಿಕಾ ದೇಶದಲ್ಲಿ, ಇಂಗ್ಲೆಂಡ್ ದೇಶದಲ್ಲಿ ಈಗ ಆ ಸ್ಥಾನದಲ್ಲಿರತಕ್ಕವರಿಗಿಂತಲೂ ಹೆಚ್ಚಾಗಿ ಓದಿ ಬುದ್ಧಿವಂತರಾಗಿ ಬಂದಿರುವವರಿಗೆ, "ಯೂನಿವರ್ಸಿಟಿಯಲ್ಲಿ ನಿಮ್ಮ ಹೆಸರಿದೆ, ಇಲ್ಲಿ ಕೊಡುವುದಕ್ಕಾಗುವುದಿಲ್ಲ, ಒಂದು ದಿವಸ ಯೂನಿವರ್ಸಿಟಿಯಲ್ಲಿ ಡೈರೆಕ್ಟರ್‌ಮಾಡುತ್ತೇವೆ, ಎಂದು ಹೇಳಿ ಈಗಿರತಕ್ಕಂಥವರಿಗೆ ಟೆಕ್ನಿಕಲ್ ಎಜುಕೇಷನ್ ಡೈರೆಕ್ಟರ್ ಹುದ್ದೆ ಕೊಟ್ಟಿದ್ದಾರೆ: ಏಕೆಂದರೆ ಇನ್ನೊಬ್ಬ ಬೇರೆ ಜಾತಿಯವರಿದ್ದರೆ, ಹೊಸಬರಿದ್ದಾರೆ ತಮ್ಮವರಿಗೆ ಅನುಕೂಲ ಮಾಡಿ ಕೊಡುವುದಕ್ಕಾಗುವುದಿಲ್ಲ, ತಮಗೆ ಬೇಕಾದಹಾಗೆ ಕೆಲಸ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು, ಏನು ಅನ್ಯಾಯ ! Ph. D. ಯನ್ನು ಅಮೆರಿಕ ದೇಶದಿಂದ ತೆಗೆದುಕೊಂಡು ಬಂದರೆ, ಉನ್ನತ ವ್ಯಾಸಂಗ ಮಾಡಿದ್ದರೆ, ಇನ್ನೊಬ್ಬರನ್ನು ಡೈರೆಕ್ಟರ ಹುದ್ದೆಯಲ್ಲಿ ಇಡುತ್ತೀರಿ ?

Mr. SPEAKER.—You have taken 20 minuts for interreptions and 20 minutes for your speech.

Sri C. J. MUCKANNAPPA.—I leave it to your sweet will. I have made up my mind not to go against you will.

Mr. SPEAKER.—For a Speaker there is nothing like a "sweet will"

Sri C. J. MUCKANNAPPA.—It is your sweet will that has to prevail here. Sweet will means discretion.

ಜಾಯಿಂಟ್ ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜ್ಯುಕೇಷನ್ ಅವರು ಎಸ್. ಎಸ್. ಎಲ್. ಸಿ. ಸೆಕೆಂಡ್ ಕ್ಲಾಸ್‌ನಲ್ಲಿ ಪಾಸ್ ಮಾಡಿದ್ದಾರೆ. ಇಂಟರ್ ಮೀಡಿಯಟ್ third attempt second class ನಲ್ಲಿ ಪಾಸ್ ಮಾಡಿದ್ದಾರೆ. B. E. Degree II Class ನಲ್ಲಿ ಪಾಸ್ ಮಾಡಿದ್ದಾರೆ. 28-7-1943 ರಲ್ಲಿ ಕೆಲಸಕ್ಕೆ ಸೇರಿದರು. ಅವರು ಸೀನಿಯರ್ ಅಂತ ಹೇಳಿ ಅವರಿಗಿಂತಲೂ ಹೆಚ್ಚಿನ ಪದವೀಧರರು, ಹೆಚ್ಚಿನ ಬುದ್ಧಿವಂತರು ಆದವರನ್ನು ನಿಮಗೆ ಯೋಗ್ಯತೆ ಇಲ್ಲ, ದಡ್ಡರು ಆ ಜಾಗಕ್ಕೆ ಬರುವುದಕ್ಕೆ ಆಗುವುದಿಲ್ಲ ಎಂದರೆ ಇದರಲ್ಲಿ ಜಾತೀವಾದ ಬರಬಹುದೇ ಎಂದು ಕೇಳುತ್ತೇನೆ.

ಈ ವಿದ್ಯಾಖಾತೆ ನನ್ನ ಸ್ನೇಹಿತರಾದ ಶ್ರೀಮಾನ್ ಕಂಠಿಯವರ ಕೈಯಲ್ಲೇ ಇದ್ದರೆ ಅದು ಶಿಥಿಲವಾಗಿ ಏನಾಗುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಜಾಯಿಂಟ್ ಡೈರೆಕ್ಟರ್ ಸ್ಥಾನಕ್ಕೆ S.S.L.C. I-Class, First Rank, Intermediate I-Class Ist Rank, B. E., Degree-gold medalist-joined service in 1942 and confirmed as Professor of Engineering ಇಂಥವರು ಇದ್ದರೂ ಕೂಡ ಅವರನ್ನು ಕರೆದುಕೊಂಡು ಬಂದರು.

ಶ್ರೀ ಎಸ್. ಆರ್. ಕಂಠಿ.—ನಿಮಗೆ ರೂಲ್ಸ್ ಗೊತ್ತಿಲ್ಲ, ರೆಗ್ಯುಲೇಷನ್ ಗೊತ್ತಿಲ್ಲ.

Mr. SPEAKER.—Are you canvassing for anybody here ?

Sri C. J. MUCKANNAPPA.—I am very sorry, Sir. It is none of my business to canvass. I am just saying how things are happening in this country—how people are frustrated—how injustice is glaringly done.

ಅವರಿಗೆ ಎಷ್ಟು ಶೀಘ್ರ ವಿರಾಮವಾದರೆ ಅಷ್ಟೂ ಒಳ್ಳೆಯದಾಗುತ್ತದೆ. ನನ್ನ ಸ್ನೇಹಿತರು ತಾಳ್ಮೆಯಿಂದ ಇರಬೇಕು, ವಯಸ್ಸಿನಲ್ಲಿ ದೊಡ್ಡವರು, ಬುದ್ಧಿವಂತರು, ಬೊಂಬಾಯಿನಲ್ಲಿ ಡೆಪ್ಯುಟಿ ಸ್ಪೀಕರ್ ಆಗಿದ್ದವರು, ಇಲ್ಲಿ ಸ್ಪೀಕರ್ ಆಗಿದ್ದವರು, ಈಗ ವಿದ್ಯಾಮಂತ್ರಿಗಳಾಗಿದ್ದೀರಿ Education Minister is a problem to the Chief Minister.

Mr. SPEAKER.—Next Point.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಉಪಕುಲಪತಿಗಳು ನಮ್ಮ ರಾಜ್ಯಕ್ಕೆ ಬರುವುದನ್ನು ವಿರೋಧ ಮಾಡುವುದಿಲ್ಲ. ಜತ್ತಿಯವರು ಮುಖ್ಯ ಮಂತ್ರಿಗಳಾಗಿದ್ದಾಗಿನಿಂದಲೂ ಹೇಳುತ್ತಾ ಇದ್ದೇನೆ.

Mr. SPEAKER.—Why bring in personalities unnecessarily ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೈಸೂರು ರಾಜ್ಯದಲ್ಲಿ ಅಡ್ವೋಕೇಟ್ ಜನರಲ್ ಅವರನ್ನು ನೇಮಕ ಮಾಡಬೇಡವೇ? ಹಾಗಾದರೆ ಈ ರಾಜ್ಯದಲ್ಲಿ ಬಿ. ಎ., ಎಂ. ಎ., ಎಲ್. ಎಲ್. ಬಿ., ಪಾಸ್ ಮಾಡಿದ ಅಡ್ವೋಕೇಟ್ಸ್ ಇಲ್ಲವೇ? ಸತ್ಯ ಹೇಳಿ, ನೇಮಕ ಮಾಡಿದ್ದೇವೆ ಅಂತ ಹೇಳಿ, ಇದರಲ್ಲಿ ಏನಾಗುತ್ತಾ ಇದೆ. ಬ್ರಾಹ್ಮಣರಿಗೆ ಕೊಟ್ಟರೆ ಲಿಂಗಾಯಿತರು ಏನು ಅನ್ನುತ್ತಾರೋ, ಲಿಂಗಾಯಿತರಿಗೆ ಕೊಟ್ಟರೆ ಒಕ್ಕಲಿಗರು ಏನು ಅನ್ನುತ್ತಾರೋ, ಈ ಮೂರು ಜನರಿಗೂ ಕೊಟ್ಟರೆ ಹರಿಜನರು ಏನು ಅನ್ನುತ್ತಾರೋ! ಇದು ಒಂದು ರಾಜ್ಯವೇ ಎಂದು ಕೇಳುತ್ತೇನೆ. ಖಚಿತವಾದ ತೀರ್ಮಾನಕ್ಕೆ ಬರದಿದ್ದರೆ ಬಿಟ್ಟುಬಿಡಿ, ನಿಮ್ಮ ಕೈಯಲ್ಲಿ ರಾಜ್ಯಭಾರ ಮಾಡುವುದಕ್ಕೆ ಆಗುವುದಿಲ್ಲ, ಎಲ್ಲ ಹೊಲಸು ಅಂತ ಹೇಳಿ ಅಥವಾ ಯಾರು ಏನು ಬೇಕಾದರೂ ಅಂದುಕೊಂಡು ಹೋಗಲಿ ಎಂದು.

ಶ್ರೀ ಎಸ್. ಆರ್. ಕಂಠಿ.—ಅದು ನಿಮ್ಮ ಕಾಲದಲ್ಲಿ ಸಾಧ್ಯ;

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮ್ಮ ಕಾಲಕ್ಕೇ! ಹೌದು. ನನ್ನ ಸ್ನೇಹಿತರಾದ ಈ ಭರತರು ಇದ್ದಾರೆಯಲ್ಲಾ ಅವರು ಈ ರಾಜ್ಯಕ್ಕೆ ಬಂದ ಮೇಲೆ ಆದಂಥಾ ಅನಾಹುತ ಭದ್ರಾವತಿ ಮತ್ತು ದಾಂಡೇಲಿ ಕಾಗದದ ಕಾರ್ಖಾನೆಯಲ್ಲಿ ತಯಾರಾದ ಕಾಗದವೆಲ್ಲಾ ಮುಗಿದು ಹೋಗುತ್ತದೆ ಅದನ್ನು ಬರೆದರೆ. ಅವರು ಈ 12 ತಿಂಗಳಿನಿಂದ ಮಾಡಿದಂಥಾ ಅಧ್ವಾನವನ್ನು ಈ ದೇಶದ ಮಕ್ಕಳು ಓದಿ ಇಂಥಾವರು ಇದ್ದರು, ವಿದ್ಯಾಖಾತೆಗೆ ಎಂಥ ಗತಿ ಬಂತು ಅಂಥ ಪಾಪ ಅವರು ಕಿವಿ ಮುಚ್ಚಿಕೊಳ್ಳುತ್ತಾರೆ. ಇವರು ಬಂದ ಮೇಲೆ ಲೆಕ್ಚರರ್ಸ್ ಎಲ್ಲಾ ಟ್ಯೂಟರ್ಸ್ ಆದರು. ಟ್ಯೂಟರ್ಸ್ ಎಲ್ಲಾ ಡೆಮಾನ್‌ಸ್ಟ್ರೇಟರ್ಸ್ ಆದರು. ಒಂದೇ ಸಾರಿ ಫೀಜು ಹೆಚ್ಚಾಯಿತು. ಫೀ ರಿಯಾಯಿತಿ ಕೊಡುತ್ತೇವೆ ಎಂದು ಒಂದು ಸಾರಿ 2,400 ರೂಪಾಯಿ ಎಂದರು. ಮತ್ತೊಂದು ಸಾರಿ 3,600 ರೂಪಾಯಿ ಅಂದರು, ಟ್ರಿಬಲ್ ಬೆನಿಫಿಟ್ ಸ್ಕೀಂ ಅಂದರು, ಕಡ್ಡಾಯ ಶಿಕ್ಷಣ ಕೊಡುತ್ತೇವೆ, 12,000 ಜನ ಉಪಾಧ್ಯಾಯರುಗಳನ್ನು ತಯಾರು ಮಾಡುತ್ತೇವೆ ಎಂದರು. ಅವರು ಹೇಳುವ ಮಾತುಗಳನ್ನು ಬರೆದು ಕೊಳ್ಳಲು ಸ್ಟೆನೋಗ್ರಾಫರ್ ಯಾರಾದರೂ ಇದ್ದಿದ್ದರೆ ಆ ಕೆಲಸವೇ ಬೇಡ ಅಂತ ಹೇಳಿ ಹೊರಟು ಹೋಗುತ್ತಾ ಇದ್ದರು. ಇವರ ಕೈಯಿಂದ ಈ ವಿದ್ಯಾಖಾತೆಯನ್ನು ತಪ್ಪಿಸಿ. ಇಲ್ಲದೇ ಹೋದರೆ ಅವರನ್ನು ತೆಗೆದು ಹಾಕಿ ಬಿಡಿ.

ಶ್ರೀ ಎಸ್. ಆರ್. ಕಂಠಿ.—ನಿಮ್ಮ ಕೈಯಲ್ಲಾದರೆ ತೆಗೆದು ಹಾಕಿ ನೋಡೋಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಮನ್ನು ತೆಗೆದು ಹಾಕುವ ಕಾಲ ಬಂದಿದೆ. ನಿಮ್ಮವರೇ ಮಾತನಾಡಿ ಕೊಳ್ಳುತ್ತಾ ಇದ್ದಾರೆ, ನಿಮಗೆ ನಿಮ್ಮವರೇ ಕಂಟಕವಾಗಿದ್ದಾರೆ. * * * * * * * *

Sri P. VENKATAGIRIYAPPA.—I raise to a point of order, Sir * * *

Mr. SPEAKER.—Who said so ?

Sri P. VENKATAGIRIYAPPA.—The Hon'ble Speaker......

Mr. SPEAKER.—You say the Hon'ble Speaker

Sri P. VENKATAGIRIYAPPA.—I am sorry, Sir. The Hon'ble Member Sri Muckannappa addressed the Education Minister. I feel it is unparliamentary.

Mr. SPEAKER.—Did you use that word ? He says that you have uttered a word which is unparliamentary. Let me have the facts. Did you use that word ?

Sri C. J. MUCKANNAPPA.—I have not followed him. * * *

Mr. SPEAKER.—You understand the word that is charged against you ?

Sri C. J. MUCKANNAPPA.—Is it to me or is it to the Hon'ble Education Minister ? What is the Point of Order that my friend has raised ?

Mr. SPEAKER.—Who used that word according to you ?

Sri P. VENKATAGIRIYAPPA.—The Hon'ble Member, Sri Muckannappa addressed the Education Minister. * * * * *

Mr. SPEAKER.—I cought your point. What does Sri Muckannappa say ? Did he use that word ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನಗೆ ತಾವು ಅಪ್ಪಣೆಕೊಟ್ಟರೆ ಆ ವರದಿಯಲ್ಲಿ ಅವರೇನು ಬರೆದು ಕೊಂಡಿದ್ದಾರೆಂಬುದನ್ನು ನೋಡಿ ಅನಂತರ ನಾನೇನು ಹೇಳಿದೆ ಎಂಬುದನ್ನು ಹೇಳುತ್ತೇನೆ. In the heat of the moment, I do not know what I have expressed...

Mr. SPEAKER.—I won't allow you to say "in the heat of the moment to use words which I do not know". It is a very strange situation.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಮಾತನಾಡಿದ ಹತ್ತು ನಿಮಿಷಗಳ ಮೇಲೆ ಈಗ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅದೇನು ಎಂಬುದನ್ನು ನಾನೀಗ ಏನು ಹೇಳಲಿ...

Mr. SPEAKER.—I will look into the proceedings and give a ruling. The house will now rise to meet to-morrow at 8.30 A. M. Sri C. J. Muckannappa is deemed to have concluded his speech.

The house adjourned at Seven of the clock to meet again at Thirty Minutes past Eight of the Clock on Saturday the 9th March 1963.

---

* * Expunged as ordered by the Chair.